# ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani

ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ



ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ

## ನಮ್ಮ ಗುಂಪುಗಳನ್ನು ಸೇರಿಕೊಳ್ಳಿ

Click here To Join

To Download Our App

Follow Us on Facebook

Follow Us on Instagram

Scan QR Code
To Download
KPSC Vaani App

## 01- 11- 2021

### 'ಅಝೀಂ ಪ್ರೇಮ್ ಜಿ' ದೇಶದ ಅತ್ಯಂತ ಉದಾರ ಪರೋಪಕಾರಿ ಬಿಲಿಯನೇರ್




* ಸತತ 2 ನೇ ವರ್ಷ ದೇಶದ 'ಅತ್ಯಂತ ಉದಾರ' ಪರೋಪಕಾರಿ ಬಿಲಿಯನೇರ್ ಆಗಿ ವಿಪ್ರೋ ಸಂಸ್ಥಾಪಕ ಅಝೀಂ ಪ್ರೇಮ್‌ಜಿ ಹೊರಹೊಮ್ಮಿದ್ದಾರೆ.
*ಪ್ರಸ್ತುತ ಅಝೀಂ ಪ್ರೇಮ್ ಜಿ ಅವರು ಎಡೆಲ್‌ಗಿವ್ ಹುರುನ್ ಇಂಡಿಯಾ ಪರೋಪಕಾರಿ 2021 ರ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.
* ಅಝೀಂ ಪ್ರೇಮ್ ಜಿ ಅವರು ವಾರ್ಷಿಕವಾಗಿ 9,713 ಕೋಟಿ ರೂ. ದೇಣಿಗೆ ನೀಡುವದರ ಮೂಲಕ ಸತತ 2 ನೇ ವರ್ಷ 'ಭಾರತದ ಅತ್ಯಂತ ಉದಾರ' ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

### ಕರ್ನಾಟಕದ ಈಜುಪಟು ಸಂಭವ್ ಆರ್.ಗೆ ಚಿನ್ನದ ಪದಕ



* ಪ್ರಸ್ತುತ 74 ನೇ ರಾಷ್ಟ್ರೀಯ ಹಿರಿಯರ ಈಜು ಚಾಂಪಿಯನ್‌ಷಿಪ್ ನಲ್ಲಿ ಕರ್ನಾಟಕದ ಈಜುಪಟು ಸಂಭವ್ ಆರ್. ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ.
* ಕರ್ನಾಟಕ ಯುವ ಈಜು ಪಟುವಾದ 17 ವರ್ಷದ ಸಂಭವ್ ಆರ್. 50 ಮೀಟರ್ ಫ್ರೀಸ್ಟೈಲ್ ವಿಭಾಗದಲ್ಲಿ ಕೇವಲ 23.65 ಸೆಕೆಂಡುಗಳಲ್ಲಿ ಗುರಿ ತಲುಪಿ ಸಾಧನೆಯನ್ನು ಮಾಡಿದ್ದಾರೆ.
* ಇದೀಗ ಸಂಭವ್ ಆರ್. ಅವರು ಅತಿ ವೇಗದ ಈಜುಪಟುವಾಗಿ ಹೊರಹೊಮ್ಮಿದ್ದಾರೆ.
* 50 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಮಹಾರಾಷ್ಟ್ರದ ಮಿಹಿರ್ ಆಮ್ರೆ ಅವರು 23.76 ಸೆಕೆಂಡುಗಳಲ್ಲಿ ಗುರಿ ತಲುಪಿ 2ನೇ ಸ್ಥಾನ ಪಡೆದುಕೊಂಡಿದ್ದಾರೆ, ಅಷ್ಟೇ ಅಲ್ಲದೇ ಹೀರ್ ಶಾ ಅವರು 23.93 ಸೆಕೆಂಡುಗಳಲ್ಲಿ ಗುರಿ ತಲುಪಿ 3 ನೇ ಸ್ಥಾನ ಪಡೆದುಕೊಂಡಿದ್ದಾರೆ.
* ಇತ್ತೀಚಿಗಷ್ಟೇ ನಡೆದಿರುವ 47 ನೇ ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಶಿಪ್ ನಲ್ಲಿ ಸಂಭವ್ ಆರ್. ಅವರು ಒಟ್ಟು 4 ಚಿನ್ನದ ಪದಕಗಳನ್ನೂ ಜಯಿಸಿದ್ದಾರೆ.

### ಭಾರತ ಮತ್ತು ಸ್ಪೇನ್ ದೇಶಗಳ ನಡುವೆ ದ್ವಿಪಕ್ಷೀಯ ಸಭೆ



* ಇತ್ತೀಚಿಗೆ 2021 ರ ಅಕ್ಟೋಬರ್. 31 ರಂದು ರೋಮ್‌ನಲ್ಲಿ ಜರುಗಿದ G20 ಶೃಂಗಸಭೆ ಮುಕ್ತಾಯದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಸ್ಪ್ಯಾನಿಷ್ ಕೌಂಟರ್‌ಪಾರ್ಟ್ ಪೆಡ್ರೊ ಸ್ಯಾಂಚೆಜ್ ಅವರನ್ನು ಭೇಟಿ ಮಾಡಿದರು.
* ಪ್ರಸ್ತುತ ಭಾರತದ ಮೂಲಸೌಕರ್ಯ ಯೋಜನೆಗಳಲ್ಲಿ ಸ್ಪೇನ್‌ನಿಂದ ಹೆಚ್ಚಿನ ಹೂಡಿಕೆಗಳನ್ನು ಪ್ರಧಾನಿ ಮೋದಿ ಅವರು ಆಹ್ವಾನಿಸಿದರು, ಅಷ್ಟೇ ಅಲ್ಲದೇ ಎರಡು ದೇಶದ ನಾಯಕರು ದ್ವಿಪಕ್ಷೀಯ ಸಂಬಂಧಗಳು, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳನ್ನು ವಿನಿಮಯ ಮಾಡಿಕೊಂಡರು, ಹಾಗೂ ಸ್ಪೇನ್‌ನಿಂದ ವಿಮಾನ ಖರೀದಿಗೆ ಒಪ್ಪಂದಕ್ಕೆ ಸಹಿ ಹಾಕುವ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ವಿಷಯಗಳ ಬಗ್ಗೆ ಚರ್ಚಿಸಿದರು.
* ಪ್ರಸ್ತುತ ಭಾರತದಲ್ಲಿನ ರಾಷ್ಟ್ರೀಯ ಮೂಲಸೌಕರ್ಯ ಪೈಪ್‌ಲೈನ್, ಗತಿ ಶಕ್ತಿ ಯೋಜನೆ, ಹಾಗೂ ಆಸ್ತಿ ನಗದೀಕರಣ ಯೋಜನೆಗಳ ಲಾಭ ಪಡೆದುಕೊಳ್ಳಲು ಸ್ಪೇನ್ ದೇಶಕ್ಕೆ ಮನವಿ ಮಾಡಿಕೊಂಡರು.
* ಪ್ರಸ್ತುತ ಭಾರತವು ಏರ್‌ಬಸ್ ಸ್ಪೇನ್‌ನಿಂದ 56 'C295' ವಿಮಾನಗಳ ಖರೀದಿಸುವ ಒಪ್ಪಂದಕ್ಕೆ ಸಹಿ ಹಾಕಿದೆ, ಈ 56 ವಿಮಾನಗಳಲ್ಲಿ 40 ವಿಮಾನಗಳು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಸಹಯೋಗದೊಂದಿಗೆ 'ಮೇಡ್ ಇನ್ ಇಂಡಿಯಾ'ದ ವಿಮಾನಗಳಾಗಿರುತ್ತವೆ.

### ಭಾರತ ಇಸ್ರೇಲ್ ರಕ್ಷಣಾ ಸಹಕಾರವನ್ನು ಹೆಚ್ಚಿಸಲು ಹೊಸ ಕಾರ್ಯಪಡೆ ಸ್ಥಾಪನೆ



* ಪ್ರಸ್ತುತ ಭಾರತ ಇಸ್ರೇಲ್ ವರ್ಕಿಂಗ್ ಗ್ರೂಪ್ ನ 15 ನೇ ಸಭೆಯಲ್ಲಿ, ಭಾರತ ಮತ್ತು ಇಸ್ರೇಲ್ ರಕ್ಷಣಾ ಸಹಕಾರವನ್ನು ಹೆಚ್ಚಿಸಲು ಹೊಸ ಕಾರ್ಯಪಡೆಯನ್ನು ಸ್ಥಾಪನೆ ಮಾಡಲು ನಿರ್ಧರಿಸಿವೆ.
* ಈ ಸಭೆಯ ಅಧ್ಯಕ್ಷತೆ ಭಾರತದ ರಕ್ಷಣಾ ಕಾರ್ಯದರ್ಶಿ ಡಾ ಅಜಯ್ ಕುಮಾರ್ ಮತ್ತು ಇಸ್ರೇಲ್ ರಕ್ಷಣಾ ಸಚಿವಾಲಯದ ನಿವೃತ್ತ ಮಹಾನಿರ್ದೇಶಕ ಮೇಜರ್ ಜನರಲ್ ಅಮೀರ್ ಎಶೆಲ್ ಅವರು ವಹಿಸಿಕೊಂಡಿದ್ದರು, ಈ ಸಭೆಯಲ್ಲಿ ಉದ್ಯಮದ ಸಹಕಾರ ಹಾಗೂ ಮಿಲಿಟರಿ ವ್ಯಾಯಾಮಗಳು ಸೇರಿದಂತೆ ಮಿಲಿಟರಿಯನ್ನು ಸೇರ್ಪಡೆಮಾಡಿಕ್ಕೊಳ್ಳುವ ಪ್ರಗತಿಯನ್ನು ಪರಿಶೀಲಿಸಿದರು.
* ಭಾರತ ಇಸ್ರೇಲ್ ದ್ವಿಪಕ್ಷೀಯ ರಕ್ಷಣಾ ಸಹಕಾರದ ಬಗೆಗಿನ ಭಾರತ ಮತ್ತು ಇಸ್ರೇಲ್ ಜಂಟಿ ಕಾರ್ಯ ಗುಂಪು ಸಮಗ್ರ ಹತ್ತು ವರ್ಷಗಳ ಮಾರ್ಗಸೂಚಿಯನ್ನು ರೂಪಿಸಲು ಒಪ್ಪಿಕೊಂಡಿದೆ.
* ಈ ಜಂಟಿ ವರ್ಕಿಂಗ್ ಗ್ರೂಪ್ ಇದು ಉಭಯ ದೇಶಗಳ 'ರಕ್ಷಣಾ ಸಚಿವಾಲಯ'ದ ಸಂಸ್ಥೆಯಾಗಿದೆ, ಇದು ದ್ವಿಪಕ್ಷೀಯ ರಕ್ಷಣಾ ಸಹಕಾರದ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸುತ್ತದೆ, ಹಾಗೂ ಇದಕ್ಕೆ ತಕ್ಕ ಮಾರ್ಗದರ್ಶನ ನೀಡುತ್ತದೆ.
* ಭಾರತ ಇಸ್ರೇಲ್ ಎರಡೂ ದೇಶಗಳ ನಡುವಿನ ರಕ್ಷಣಾ ಸಹಕಾರವು ಭಯೋತ್ಪಾದನೆ ನಿಗ್ರಹ, ಬಾಹ್ಯಾಕಾಶ ಹಾಗೂ ಸೈಬರ್ ಭದ್ರತೆ, ಗುಪ್ತಚರ ಮಾಹಿತಿ ಹಂಚಿಕೆ ಕ್ಷೇತ್ರಗಳನ್ನು ಸೇರಿಸಲು ವಿಸ್ತರಿಸಿದೆ.
* ಭಾರತವು 2017ರಿಂದ ಇಸ್ರೇಲ್‌ನ ಅತಿ ದೊಡ್ಡ ಶಸ್ತ್ರಾಸ್ತ್ರ ಗ್ರಾಹಕವಾಗಿದೆ.

### ಹಣಕಾಸು ತಂತ್ರಜ್ಞಾನಕ್ಕಾಗಿ ಶ್ರೇಷ್ಠತೆಯ ಕೇಂದ್ರ ಸ್ಥಾಪನೆ




* ಪ್ರಸ್ತುತ ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿ ಫಿನ್‌ಟೆಕ್ ಅಥವಾ ಹಣಕಾಸು ತಂತ್ರಜ್ಞಾನಕ್ಕಾಗಿ ಶ್ರೇಷ್ಠತೆಯ ಕೇಂದ್ರವನ್ನು ಸ್ಥಾಪಿಸಲಿದೆ, ಎಂದು ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾಗಿರುವ ಸಿ.ಎನ್. ಅಶ್ವಥ್ ನಾರಾಯಣ್ ಅವರು ತಿಳಿಸಿದ್ದಾರೆ.

* ಸಚಿವ ಸಿ.ಎನ್. ಅಶ್ವಥ್ ನಾರಾಯಣ್ ಅವರು ಮಂಗಳೂರು ಟೆಕ್ನೋವಾಂಜಾ ಉದ್ಘಾಟನಾ ಸಮಾರಂಭದಲ್ಲಿ ಈ ಕ್ರಮವನ್ನು ಘೋಷಣೆ ಮಾಡಿದರು, ಅಷ್ಟೇ ಅಲ್ಲದೇ 2022 23 ರ ರಾಜ್ಯ ಬಜೆಟ್‌ನಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲು ಸರ್ಕಾರ 12 ಕೋಟಿ ರೂ ಹಣವನ್ನು ಕಾಯ್ದಿರಿಸಲಾಗುತ್ತದೆ ಎಂದು ತಿಳಿಸಿದರು.
* ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಲಿಮಿಟೆಡ್ (KEONICS) ಸಹಾಯದಿಂದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ಸರ್ಕಾರ ಯೋಜಿಸಿದೆ, ಇದೀಗ ಇದಕ್ಕೆ ರಾಜ್ಯ KEONICS ಮಂಡಳಿಯು ಪ್ರಸ್ತಾವನೆಯನ್ನು ನೀಡಿದೆ.
* ಟೆಲಿಕಾಂ ನೀತಿಯ ಅಡಿಯಲ್ಲಿ ಯೋಜನೆಗಳಿಗೆ ಏಕ ವಿಂಡೋ ಕ್ಲಿಯರೆನ್ಸ್ ವಿಂಡೋವನ್ನು ಒದಗಿಸಲಾಗುತ್ತದೆ.

## DRDO ಹಾಗೂ ಭಾರತೀಯ ವಾಯುಪಡೆಯಿಂದ ಫ್ಲೈಟ್ ಲಾಂಗ್‌ರೇಂಜ್‌ಬಾಂಬ್‌ಪರೀಕ್ಷೆ




* DRDO ಹಾಗೂ ಭಾರತೀಯ ವಾಯುಪಡೆ (IAF) ತಂಡವು ಸ್ಥಳೀಯವಾಗಿ ಅಭಿವೃದ್ಧಿಪಡಿಸಿರುವ ದೀರ್ಘ ಶ್ರೇಣಿಯ ಬಾಂಬ್ ನ್ನು ಯಶಸ್ವಿಯಾಗಿ ಪರೀಕ್ಷೆ ಮಾಡಿದೆ.
* ಈ ದೀರ್ಘ ಶ್ರೇಣಿಯ ಬಾಂಬ್ ನ್ನು ಒಡಿಶಾದ ಬಾಲಸೋರ್ ನಲ್ಲಿ ವೈಮಾನಿಕ ವೇದಿಕೆಯಿಂದ ಪರೀಕ್ಷಿಸಲಾಗಿದೆ.
* DRDO ಪ್ರಯೋಗಾಲಯಗಳ ಸಹಾಯದಿಂದ ಹೈದರಾಬಾದ್ ನಲ್ಲಿರುವ ಸಂಶೋಧನಾ ಕೇಂದ್ರ ಇಮಾರತ್ (RCI) ಬಾಂಬ್ ನ್ನು ಅಭಿವೃದ್ಧಿಪಡಿಸಲಾಗಿದೆ.
*ಸಂಶೋಧನಾ ಕೇಂದ್ರ ಇಮಾರತ್ (RCI) ಇದೊಂದು DRDO ಪ್ರಯೋಗಾಲಯವಾಗಿದೆ, ಇದು ತೆಲಂಗಾಣ ರಾಜ್ಯದ ಹೈದರಾಬಾದ್ ನಗರದಲ್ಲಿದೆ, ಈ ಪ್ರಯೋಗಾಲಯವು ಕ್ಷಿಪಣಿ ವ್ಯವಸ್ಥೆಗಳ ಸಂಶೋಧನೆ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊಂದಿದೆ.
* ಎಪಿಜೆ ಅಬ್ದುಲ್ ಕಲಾಂ ಅವರು ಈ ಪ್ರಯೋಗಾಲಯವನ್ನು 1988 ರಲ್ಲಿ ಸ್ಥಾಪಿಸಿದ್ದಾರೆ, ಪ್ರಸ್ತುತ ರಾಜಾ ಬಾಬು ಅವರು ಈ ಪ್ರಯೋಗಾಲಯದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
* ಇಂಟಿಗ್ರೇಟೆಡ್ ಗೈಡೆಡ್ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮ (IGMDP) ಸಮಗ್ರ ಶ್ರೇಣಿಯ ಕ್ಷಿಪಣಿಗಳ ಸಂಶೋಧನೆ ಹಾಗೂ ಅಭಿವೃದ್ಧಿಯು ಭಾರತೀಯ ರಕ್ಷಣಾ ಸಚಿವಾಲಯದ ಕಾರ್ಯಕ್ರಮವಾಗಿದೆ, ಇದನ್ನು DRDO ಮತ್ತು ಆರ್ಡಿನೆನ್ಸ್ ಫ್ಯಾಕ್ಟರಿ ಬೋರ್ಡ್ ನಿರ್ವಹಿಸುತ್ತಿದೆ.

## ಜಾತಿ ಆಧಾರಿತ ಜನಗಣತಿಗೆ ಆಂಧ್ರಪ್ರದೇಶ ಸಚಿವ ಸಂಪುಟದಿಂದ ಅನುಮೋದನೆ




* ಪ್ರಸ್ತುತ ಆಂಧ್ರಪ್ರದೇಶ ಸಚಿವ ಸಂಪುಟವು 2021 ರ ರಾಷ್ಟ್ರೀಯ ಜನಗಣತಿಯಲ್ಲಿ ಇತರ ಹಿಂದುಳಿದ ವರ್ಗಗಳನ್ನು (OBC) ನಮೂದಿಸಲು ಜಾತಿ ಆಧಾರಿತ ಜನಗಣತಿಯನ್ನು ಹಮ್ಮಿಕೊಳ್ಳಲು ಕೇಂದ್ರಕ್ಕೆ ಮನವಿ ಮಾಡಲು ತೀರ್ಮಾನಿಸಿದೆ.
* ತೆಲಂಗಾಣ ಸರ್ಕಾರವು ಅಕ್ಟೋಬರ್ 8 ರಂದು ರಾಜ್ಯ ವಿಧಾನಸಭೆಯಲ್ಲಿ ಇದೇ ರೀತಿಯ ನಿರ್ಣಯಕ್ಕೆ ಅನುಮೋದನೆಯನ್ನು ನೀಡಿತ್ತು.
* ಆಂಧ್ರಪ್ರದೇಶ ಸಚಿವ ಸಂಪುಟದ ದುರ್ಬಲ ವರ್ಗಗಳ ಕಲ್ಯಾಣ ಇಲಾಖೆಯು ಆರ್ಥಿಕವಾಗಿ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ಇಲಾಖೆ ರಚನೆಗೆ ಒಪ್ಪಿಗೆಯನ್ನು ನೀಡಿದೆ.
* 1965 ರ ಸಿನಿಮಾಟೋಗ್ರಫಿ ಕಾಯಿದೆಗೆ ತಿದ್ದುಪಡಿಯ ಪ್ರಕಾರ ಆಂಧ್ರಪ್ರದೇಶ ಸಚಿವ ಸಂಪುಟವು ಅನುಮೋದನೆ ನೀಡಿದೆ, ಹಾಗೂ ಆಂಧ್ರಪ್ರದೇಶ ರಾಜ್ಯ ಫಿಲ್ಮ್, ಟೆಲಿವಿಷನ್ ಹಾಗೂ ಥಿಯೇಟರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ಸಿನಿಮಾ ಟಿಕೆಟ್‌ಗಳನ್ನು ವಿತರಿಸಲು ಆನ್‌ಲೈನ್ ಟಿಕೆಟಿಂಗ್ ಪ್ಲಾಟ್‌ಫಾರ್ಮ್ ನ್ನು ಒದಗಿಸುತ್ತಿದೆ.
* ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಸಾಮಾಜಿಕ ಆರ್ಥಿಕ ಜಾತಿ ಗಣತಿ ನಡೆಸಲು ಸಾಧ್ಯವಿಲ್ಲ ಎಂದು ತಿಳಿಸಿದೆ.

## ಮೊದಲ IMS ಪ್ರಮಾಣೀಕೃತ ರೈಲು 'ಚೆನ್ನೈ ಮೈಸೂರು ಚೆನ್ನೈ ಶತಾಬ್ದಿ ಎಕ್ಸ್‌ಪ್ರೆಸ್'



* ಪ್ರಸ್ತುತ ಚೆನ್ನೈ ಮೈಸೂರು ಚೆನ್ನೈ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಇತ್ತೀಚೆಗೆ IMS ಪ್ರಮಾಣೀಕರಣವನ್ನು ನೀಡಲಾಗಿದೆ. ಈ ರೈಲು ದಕ್ಷಿಣ ರೈಲ್ವೆಯ ಮೊದಲ ಇಂಟಿಗ್ರೇಟೆಡ್ ಮ್ಯಾನೇಜ್ಮೆಂಟ್ ಸಿಸ್ಟಮ್ಸ್ (IMS) ಪ್ರಮಾಣೀಕೃತ ರೈಲು ಎಂದೆನಿಸಿಕೊಂಡಿದೆ.
* ಈ IMS ಪ್ರಮಾಣೀಕರಣವನ್ನು ಪಡೆದ ಭಾರತೀಯ ರೈಲ್ವೆಯ ಮೊದಲ ಶತಾಬ್ದಿ ರೈಲು ಹಾಗೂ 2 ನೇ ಎಕ್ಸ್‌ಪ್ರೆಸ್ ರೈಲು ಕೂಡ ಇದಾಗಿದೆ.
* ಪರಿಸರ ಸ್ನೇಹಿ ಸಂಪನ್ಮೂಲಗಳ ನಿರ್ವಹಣೆ ಹಾಗೂ ಉತ್ತಮ ಬಳಕೆಗಾಗಿ IMS ಪ್ರಮಾಣಪತ್ರವನ್ನು ನೀಡಲಾಗುತ್ತದೆ.
* ಇಂಟಿಗ್ರೇಟೆಡ್ ಮ್ಯಾನೇಜ್ಮೆಂಟ್ ಸಿಸ್ಟಮ್ಸ್ (IMS) ಪ್ರಮಾಣೀಕರಣವು ಒಂದು ಸಮಗ್ರ ವಿಧಾನವಾಗಿದೆ, ಇದು ವಿವಿಧ ನಿರ್ವಹಣಾ ವ್ಯವಸ್ಥೆಯ ಮಾನದಂಡಗಳ ಅವಶ್ಯಕತೆಗಳನ್ನು ಪೂರೈಸುವ ಸಂಸ್ಥೆಯ ಕಾರ್ಯಕ್ಷಮತೆಯ ಹಲವು ಅಂಶಗಳನ್ನು ಸಂಯೋಜಿಸುತ್ತದೆ, ಅವುಗಳು: ಗುಣಮಟ್ಟ ನಿರ್ವಹಣೆಗಾಗಿ ISO 9001, ಪರಿಸರ ನಿರ್ವಹಣೆಗಾಗಿ ISO 14001, ಆರೋಗ್ಯ ಮತ್ತು ಸುರಕ್ಷತೆಗಾಗಿ ISO 45001, ಮಾಹಿತಿಭದ್ರತೆಗಾಗಿ ISO 27001, ಹಾಗೂ ಶಕ್ತಿ ನಿರ್ವಹಣೆಗಾಗಿ ISO 50001 ನೀಡುತ್ತದೆ.
* IMS ಪ್ರಮಾಣೀಕರಣವು ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಸುಧಾರಿಸುತ್ತದೆ ಹಾಗೂ ವೆಚ್ಚವನ್ನು ಕಡಿಮೆಮಾಡುತ್ತದೆ.

## ಕರ್ನಾಟಕ ಸೇರಿ 6 ರಾಜ್ಯಗಳ ಸಂಸ್ಥಾಪನಾ ದಿನಗಳ ಆಚರಣೆ



* ಪ್ರಸ್ತುತ ಕರ್ನಾಟಕ ರಾಜ್ಯವು ನವೆಂಬರ್. 01 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿದೆ, ಕರ್ನಾಟಕ ಸೇರಿ ಇತರೆ '6' ರಾಜ್ಯಗಳು ಅಂದರೆ ಆಂಧ್ರ ಪ್ರದೇಶ, ಮಧ್ಯ ಪ್ರದೇಶ, ಚತ್ತೀಸ್‌ಗಡ್, ಕೇರಳ, ಹರ್ಯಾಣ ರಾಜ್ಯಗಳು ಇಂದು ಸಂಸ್ಥಾಪನಾ ದಿನವನ್ನು ಆಚರಿಸುತ್ತಿವೆ, ಈ ರಾಜ್ಯಗಳಿಗೆ ಗಳಿಗೆ ಪ್ರಧಾನ ಮಂತ್ರಿ ಮೋದಿ ಅವರು ಅಭಿನಂದನೆ ತಿಳಿಸಿದ್ದಾರೆ.
* ಪ್ರಸ್ತುತ ಕರ್ನಾಟಕ, ಆಂಧ್ರ ಪ್ರದೇಶ, ಮಧ್ಯಪ್ರದೇಶ, ಕೇರಳ ರಾಜ್ಯಗಳು ತಮ್ಮ ಪ್ರಾದೇಶಿಕ ಭಾಷೆ ಆಧರಿಸಿ 1956 ರಲ್ಲಿ ಏಕೀಕರಣಗೊಂಡಿವೆ.

* ಕನ್ನಡ ರಾಜ್ಯೋತ್ಸವವನ್ನು ಕರ್ನಾಟಕ ರಚನೆ ದಿನ ಅಥವಾ ಕರ್ನಾಟಕ ದಿನ ಎಂದೂ ಕರೆಯುತ್ತಾರೆ, ಈ ದಿನವನ್ನು ಪ್ರತಿ ವರ್ಷ ನವೆಂಬರ್ 1 ರಂದು ಕರ್ನಾಟಕದಲ್ಲಿ ಆಚರಿಸಲಾಗುತ್ತದೆ.
* 1956 ರಲ್ಲಿ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಕರ್ನಾಟಕ ರಾಜ್ಯವನ್ನು ರಚಿಸಲಾಗಿದೆ.
* ಕರ್ನಾಟಕ ರಾಜ್ಯದಲ್ಲಿ ರಾಜ್ಯೋತ್ಸವ ದಿನವನ್ನು ಸರ್ಕಾರಿ ರಜೆ ಎಂದು ಘೋಷಣೆ ಮಾಡಲಾಗಿದೆ.
* ಆಲೂರು ವೆಂಕಟರಾವ್ ಅವರು 1905 ರಲ್ಲಿಯೇ ಕರ್ನಾಟಕ ಏಕೀಕರಣ ಚಳುವಳಿಯನ್ನು ಆರಂಭಿಸುವ ಮೂಲಕ ರಾಜ್ಯವನ್ನು ಏಕೀಕರಿಸುವ ಕನಸನ್ನು ಕಂಡಿದ್ದರು.
* ಭಾರತವು 1950 ರಲ್ಲಿ ಗಣರಾಜ್ಯವಾಯಿತು, ಮಾತನಾಡುವ ಭಾಷೆಯ ಆಧಾರದ ಮೇಲೆ ದೇಶದಲ್ಲಿ ವಿವಿಧ ಪ್ರಾಂತ್ಯಗಳನ್ನು ರಚಿಸಲಾಯಿತು, ದಕ್ಷಿಣ ಭಾರತದ ವಿವಿಧ ಸ್ಥಳಗಳನ್ನು ಸೇರಿಸಿ ಮೈಸೂರು ರಾಜ್ಯಕ್ಕೆ ಸ್ಥಾನ ಮಾನ ನೀಡಲಾಯಿತು, ಈ ರಾಜ್ಯವನ್ನು ಮೊದಲು ರಾಜರು ಆಳಿದರು.
* ಮೈಸೂರು ರಾಜ್ಯಕ್ಕೆ 1973 ರ ನವೆಂಬರ್. 01 ರಂದು 'ಕರ್ನಾಟಕ' ಎಂದು ಹೆಸರನ್ನು ಬದಲಾಯಿಸಲಾಯಿತು, ಆಗಿನ ರಾಜ್ಯದ ಮುಖ್ಯಮಂತ್ರಿಗಳಾದ ದೇವರಾಜ್ ಅರಸು ಅವರು ಈ ನಿರ್ಧಾರವನ್ನು ತೆಗೆದುಕೊಂಡರು.

## ನೀರಜ್ ಚೋಪ್ರಾ ರ ಅವರಿಗೆ 1 ಕೋಟಿ ರೂ. ನೀಡಿ ಗೌರವಿಸಿದ ಚೆನ್ನೈ ಸೂಪರ್ ಕಿಂಗ್ಸ್ (CSK)



* ಪ್ರಸ್ತುತ ಟೋಕಿಯೊ ಒಲಿಂಪಿಕ್ಸ್ ನಲ್ಲಿ ಚಿನ್ನದ ಪದಕ ಜಯಿಸಿರುವ ನೀರಜ್ ಚೋಪ್ರಾ ಅವರಿಗೆ IPL ನ ಚೆನ್ನೈ ಸೂಪರ್ ಕಿಂಗ್ಸ್ ತಂಡವು 1 ಕೋಟಿ ರೂ. ನೀಡಿ ಗೌರವಿಸಿದೆ.
* ಚೆನ್ನೈ ಸೂಪರ್ ಕಿಂಗ್ಸ್ ತಂಡವು 8758 ಸಂಖ್ಯೆಯ ಜೆರ್ಸಿಯನ್ನು ನೀರಜ್ ಚೋಪ್ರಾ ಅವರಿಗೆ ನೀಡಿದೆ.
* ನೀರಜ್ ಚೋಪ್ರಾ ಅವರು ಜಾವೆಲಿನ್'ನ್ನು 87.58 ಮೀ. ದೂರದಷ್ಟು ಎಸದಿದ್ದಾರೆ, ಈ ಕಾರಣಕ್ಕಾಗಿ ಈ ಸಂಖ್ಯೆಯ ಜೆರ್ಸಿಯನ್ನು ನೀಡಲಾಗಿದೆ ಎಂದು CSK ತಿಳಿಸಿದೆ.
* ಈ ಮೊದಲು ಒಲಿಂಪಿಕ್ಸ್ ನ ವೈಯಕ್ತಿಕ ವಿಭಾಗದಲ್ಲಿ ಅಭಿನವ ಬಿಂದ್ರಾ ಅವರು ಚಿನ್ನದ ಪದಕ ಜಯಿಸಿದ್ದರು, ಇದೀಗ ನೀರಜ್ ಚೋಪ್ರಾ ಅವರು ಕೂಡ ಈ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.
* ಒಲಿಂಪಿಕ್ಸ್ ನ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುವ ಭಾರತದ 2 ನೇ ಕ್ರೀಡಾಪಟು ಇವರಾಗಿದ್ದಾರೆ.

## 66 ಸಾಧಕರಿಗೆ 'ಕನ್ನಡ ರಾಜ್ಯೋತ್ಸವ' ಪ್ರಶಸ್ತಿ ಪುರಸ್ಕಾರ




* ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನೀಡಲಾಗುತ್ತಿರುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಈ ವರ್ಷವೂ ಕೂಡ 66 ಸಾಧಕರಿಗೆ ರಾಜ್ಯದ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.
* ಈಗಾಗಲೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಟ್ಟಿಯನ್ನು, ರಾಜ್ಯ ಸರ್ಕಾರ ಪ್ರಕಟಿಸಿದ್ದು, ಜಾನಪದ ಕಲಾವಿದ ಶಹನಾಯಿ ವೆಂಕಪ್ಪಗೆ, 'ತರಂಗ' ವಾರಪತ್ರಿಕೆಯ ಸಂಪಾದಕಿ ಡಾ| ಯು. ಬಿ. ರಾಜಲಕ್ಷ್ಮೀ ಅವರಿಗೆ, ಬಸವನಾಡಿನ ನಡೆದಾಡುವ ವಿಶ್ವವಿದ್ಯಾಲಯ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿಗೆ, ಲಕ್ಷ ಚಿಕಿತ್ಸೆ ಮಾಡಿದ ಡಾ.ರಾಮನಗೌಡರಗೆ, 40 ಲಕ್ಷ ಜನರಿಗೆ ಚಿಕಿತ್ಸೆ ನೀಡಿದ ಡಾ. ಅಂಬಣ್ಣಗೆ, ಗಂಗಾವತಿಯ ಪ್ರಾಣೇಶ್ ಸೇರಿದಂತೆ ವಿವಿಧ ವಲಯದಲ್ಲಿನ 66 ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.
* ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರಾದ್ಯಂತ ಅಮೃತ ಮಹೋತ್ಸವ ಆಚರಿಸಲಾಗುತ್ತಿದ್ದು ಈ ಸಮಯದಲ್ಲಿ 10 ಸಂಸ್ಥೆಗಳಿಗೆ 2021 ರ ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅರ್ಥ್ ಡೇ ನೆಟ್‌ವರ್ಕ್‌ನ 'ಸ್ಟಾರ್ ಮುನ್ಸಿಪಲ್ ಪ್ರಶಸ್ತಿ' ಪ್ರಧಾನ



* ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ನಗರದ 18 ಕೆರೆಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಏಳು ಕೆರೆಗಳ ಕಾಮಗಾರಿಯನ್ನು ಆರಂಭಿಸಿದ್ದಕ್ಕಾಗಿ ಅರ್ಥ್ ಡೇ ನೆಟ್ ವರ್ಕ್ ನ 'ಸ್ಟಾರ್ ಮುನ್ಸಿಪಲ್ ಪ್ರಶಸ್ತಿ' ಸ್ವೀಕರಿಸಿದೆ. ಅರ್ಥ್ ಡೇ ನೆಟ್‌ವರ್ಕ್ ಇಂಡಿಯಾ ಇದು ಒಂದು ಪರಿಸರ ಸಂಸ್ಥೆಯಾಗಿದೆ.
* ಅರ್ಥ್ ಡೇ ನೆಟ್‌ವರ್ಕ್‌ನ ಹಿರಿಯ ವ್ಯವಸ್ಥಾಪಕಿ, ನೀಲಾ ಮಜುಂದಾರ್ ಮತ್ತು ಪುಟ್ಟೇನಹಳ್ಳಿ ನೈಬರ್‌ಹುಡ್ ಲೇಕ್ ಇಂಪ್ರೂವ್‌ಮೆಂಟ್ ಟ್ರಸ್ಟ್ ಅಧ್ಯಕ್ಷೆ ಉಷಾ ರಾಜಗೋಪಾಲನ್ ರವರು, BBMP ಮುಖ್ಯ ಆಯುಕ್ತ ಗೌರವ್ ಗುಪ್ತ ರವರಿಗೆ ಪ್ರಶಸ್ತಿಯನ್ನು ಹಸ್ತಾಂತರಿಸಿದರು.
* ಇದೆ ಸಂದರ್ಭದಲ್ಲಿ ಪುಟ್ಟೇನಹಳ್ಳಿಯ ನೈಬರ್‌ಹುಡ್ ಲೇಕ್ ಇಂಪ್ರೂವ್‌ಮೆಂಟ್ ಟ್ರಸ್ಟ್‌ನಿಂದ ನಾಗರಿಕ ಸಂಸ್ಥೆಯನ್ನು ನಾಮನಿರ್ದೇಶನ ಮಾಡಲಾಗಿದೆ.
* BBMP ಯೊಂದಿಗೆ 2009 ರಲ್ಲಿ ನಮ್ಮ ಪಾಲುದಾರಿಕೆ ಪ್ರಾರಂಭವಾಯಿತು ಎಂದು PNLIT ಟ್ರಸ್ಟ್‌ನ ಅಧ್ಯಕ್ಷೆ ಉಷಾ ರಾಜಗೋಪಾಲ್ ಅವರು BBMP ಯನ್ನು ಪ್ರಶಸ್ತಿಗೆ ನಾಮನಿರ್ದೇಶನ ಮಾಡಲು ನಮಗೆ ಅತ್ಯಂತ ಸಂತೋಷವೆನಿಸುತ್ತದೆ ಎಂದು ತಿಳಿಸಿದರು.

# 02- 11- 2021

## ಆಸ್ಟ್ರೇಲಿಯಾದಿಂದ ಮಾನ್ಯತೆ ಪಡೆದ ಭಾರತದ ಲಸಿಕೆ



* ಪ್ರಸ್ತುತ ಆಸ್ಟ್ರೇಲಿಯಾ ಸರ್ಕಾರವು ಭಾರತದ ಕೋವಾಕ್ಸಿನ್ ಲಸಿಕೆಗೆ ಮಾನ್ಯತೆ ನೀಡಿದೆ, ಕೋವಾಕ್ಸಿನ್ ಲಸಿಕೆ ಪಡೆದಿರುವ ಭಾರತೀಯರು ಈ ಮಾನ್ಯತೆಯಿಂದ ಆಸ್ಟ್ರೇಲಿಯಾಗೆ ಪ್ರಯಾಣವನ್ನು ಬೆಳೆಸಬಹುದಾಗಿದೆ.
* ಆಸ್ಟ್ರೇಲಿಯಾ ಸರ್ಕಾರವು ಈ ಮೊದಲೇ ಭಾರತದ ಕೋವಿಶೀಲ್ಡ್ ಲಸಿಕೆಗೆ ಮಾನ್ಯತೆ ನೀಡಿದೆ.
* ಭಾರತ್ ಬಯೋಟೆಕ್ ಸಿದ್ದಪಡಿಸಿರುವ ಈ ಕೋವಾಕ್ಸಿನ್ ಲಸಿಕೆಯನ್ನು ಜಾಗತಿಕ ಮಟ್ಟದ ಎಮರ್ಜೆನ್ಸಿ ಯೂಸ್ ಲಿಸ್ಟಿಂಗ್'ಗೆ ಸೇರ್ಪಡೆ ಮಾಡುವ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ(WHO) ಅಂತಿಮ ಚರ್ಚೆಯನ್ನು ಮಾಡಲಿದೆ ಎಂದು ತಿಳಿದು ಬಂದಿದೆ.
* ಆಸ್ಟ್ರೇಲಿಯಾ ಸರ್ಕಾರವು ಈ ಮೊದಲು ಸೀರಮ್ ಇನ್‌ಸ್ಟಿಟ್ಯೂಟ್‌ನ ಕೋವಿಶೀಲ್ಡ್ ಲಸಿಕೆ ಹಾಗೂ ಚೀನಾ ದೇಶದ ಸಿನೋವಾಕ್'ಗೆ ಮಾನ್ಯತೆಯನ್ನು ನೀಡಿದೆ.

## ಮುಖ್ಯಮಂತ್ರಿಬಸವರಾಜಬೊಮ್ಮಾಯಿಅವರಿಂದಜನಸ್ಪಂದನ ವೆಬ್‌ಪೋರ್ಟಲ್‌ಉದ್ಘಾಟಣೆ



* ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2021 ರ ನವೆಂಬರ್. 01 ಜನ ಸ್ಪಂದನ ವೆಬ್ ಪೋರ್ಟಲ್ ಉದ್ಘಾಟನೆ ಮಾಡಿ, ನಂತರ 1902 ಎಂಬ ಸಹಾಯವಾಣಿ ಉದ್ಘಾಟಿಸಿದರು, ಹಾಗೂ ಈ ಸಹಾಯವಾಣಿಗೆ ಕರೆ ಮಾಡಿ ಸಿಬ್ಬಂದಿ ಜತೆ ಫೋನ್'ನಲ್ಲಿ ಮಾಹಿತಿಯನ್ನು ಪಡೆದುಕೊಂಡರು.
* ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಲ್ಲೇಶ್ವರಂ ಕ್ಷೇತ್ರದ ಎರಡು ರಸ್ತೆಗಳಲ್ಲಿ ಪ್ರಾಯೋಗಿಕ ಜನ ಸೇವಕ ಯೋಜನೆಗೆ ಚಾಲನೆ ನೀಡಿದರು, ಈ ಯೋಜನೆ ಮೂಲಕ ಸ್ಕೂಟರ್ ಬಳಸಿಕೊಂಡು ಮನೆ ಮನೆಗೆ ಈ ಯೋಜನೆ ತಲುಪಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
* ರಾಜ್ಯ ಸರ್ಕಾರವು ಈ ಜನ ಸೇವಕ ಯೋಜನೆ ಮೂಲಕ ಆಧಾರ್ ಕಾರ್ಡ್, ಆರೋಗ್ಯ ಕಾರ್ಡ್, ಉದ್ಯೋಗ ಕಾರ್ಡ್, ವಿಧವಾ ವೇತನ, ಪಹಣಿ, ಪಿಂಚಣಿಯನ್ನು ಜನರಿಗೆ ತಲುಪಿಸಲು ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದೆ, ಜನೇವರಿ. 26ರಂದು ಗ್ರಾಮೀಣ ಪ್ರದೇಶಗಳಿಗೆ ಈ ಯೋಜನೆಯನ್ನು ವಿಸ್ತರಣೆ ಮಾಡಲಾಗುತ್ತದೆ.
* ಈ ಜನ ಸೇವಕ ಯೋಜನೆ ಅಡಿಯಲ್ಲಿ 30 ಸೇವೆಗಳು ಲಭ್ಯವಾಗಲಿವೆ ಎಂದು ರಾಜ್ಯಸರ್ಕಾರವುತಿಳಿಸಿದೆ.

## ರಾಜ್ಯದ 4 ಕ್ರೀಡಾ ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವಪ್ರಶಸ್ತಿ



* ಪ್ರಸ್ತುತ 2021ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಒಟ್ಟಾರೆ 66 ಸಾಧಕರನ್ನು ಆಯ್ಕೆ ಮಾಡಿದ್ದಾರೆ, ಅದರಲ್ಲಿ ರಾಜ್ಯದ 4 ಕ್ರೀಡಾ ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.
* ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದರು: ಗ್ರ್ಯಾನ್ ಸ್ಲಾಂ ವಿಜೇತ ಟೆನಿಸ್ ಆಟಗಾರ ರೋಹನ್ ಬೋಪಣ್ಣ, ಹಾಗೂ ವೀಲ್ಹ್‌ಚೇರ್ ಟೆನಿಸ್ ಆಟಗಾರ ಕೆ.ಗೋಪಿನಾಥ್, ಮತ್ತು ಮಾಜಿ ಅಂತಾರಾಷ್ಟ್ರೀಯ ಅಥ್ಲೀಟ್ ರೋಹಿತ್ ಕುಮಾರ್ ಕಟೀಲ್, ಕೊನೆಯದಾಗಿ ಕಬಡ್ಡಿ ಆಟಗಾರ ಎ.ನಾಗರಾಜ್‌ಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.
* ರೋಹನ್ ಬೋಪಣ್ಣ 2017ರ ಫ್ರೆಂಚ್ ಓಪನ್‌ನ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು.
* ಗೋಪಿನಾಥ್ ಅವರು 2013ರ ವರೆಗೂ ಪ್ಯಾರಾ ಬ್ಯಾಡ್ಮಿಂಟನ್‌ನಲ್ಲಿ ಆಟವಾಡುತ್ತಿದ್ದರು, ಇವರಿಗೆ ಅಪಘಾತದ ಬಳಿಕ ವೀಲ್ಹ್‌ಚೇರ್ ಟೆನಿಸ್ ಆಯ್ಕೆ ಮಾಡಿಕೊಂಡರು.
* ರೋಹಿತ್ ಕುಮಾರ್ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹೈಜಂಪ್ ಚಾಂಪಿಯನ್ ಆಗಿದ್ದರು, ಹಾಗೂ ಅಷ್ಟೇ ಅಲ್ಲದೇ ವಿಶ್ವ ಕಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡಿರುವ ಭಾರತದ ಮೊದಲ ಹೈಜಂಪ್ ಪಟು ಇವರಿಗಿದ್ದಾರೆ.
* ಇದೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ದೇಶದ ಸೈನಿಕರ ಸೇವೆಯನ್ನು ಗುರುತಿಸಿ ಕ್ಯಾಪ್ಟನ್ ನವೀನ್ ನಾಗಪ್ಪ ಅವರಿಗೆ 2021ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

## ಪ್ರಧಾನಿ ಮೋದಿ ವಿಶ್ವ ಸಮುದಾಯಕ್ಕೆ 500 ಕೋಟಿ ಲಸಿಕೆ ಘೋಷಣೆ



* ಪ್ರಸ್ತುತ ಜಗತ್ತಿನ ಅನೇಕ ರಾಷ್ಟ್ರಗಳು ಎದುರಿಸುತ್ತಿರುವ ಕೋವಿಡ್ 19 ಲಸಿಕೆಗಳ ಕೊರತೆಯನ್ನು ನೀಗಿಸಲು ಮುಂದಿನ ವರ್ಷದಲ್ಲಿ 500 ಕೋಟಿ ಡೋಸ್ ಲಸಿಕೆಗಳನ್ನು ಉಚಿತವಾಗಿ ವಿಸ್ತರಣೆ ಮಾಡಲು ಭಾರತ ಬದ್ಧವಾಗಿದೆ ಎಂದು ಮೋದಿ ತಿಳಿಸಿದ್ದಾರೆ.

* ಪ್ರಧಾನಿ ಮೋದಿ ಅವರು ಇಟಲಿಯ ರೋಮ್‌ನಲ್ಲಿ ಜರುಗಿದ ಜಿ 20 ಶೃಂಗದ ಕೊನೆಯ ದಿನದ ಸಮ್ಮೇಳನದಲ್ಲಿ ಮಾತನಾಡಿದರು, ಈ ಕೋವಿಡ್ 19 ಬಿಕ್ಕಟ್ಟು ನಿವಾರಣೆ ಮಾಡಲು ವರ್ಷಗಳೇ ಬೇಕಾಗುತ್ತದೆ, ಈ ಹಿನ್ನಲೆಯಿಂದಾಗಿ ಇದನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲು ಎಲ್ಲ ರಾಷ್ಟ್ರಗಳ ಸಹಕಾರ ಬೇಕು, ಅಷ್ಟೇ ಅಲ್ಲದೇ 'ಒಂದು ವಿಶ್ವ ಒಂದು ಆರೋಗ್ಯ' ಎಂಬ ಧ್ಯೇಯವ್ಯಾಕ್ಯದಡಿಯಲ್ಲಿ ಕೆಲಸಮಾಡಬೇಕುಎಂದು ತಿಳಿಸಿದರು.

*ಪ್ರಸ್ತುತಭಾರತವುಕೋವಿಡ್ 19ಸಂಧರ್ಭದಲ್ಲಿಜಗತ್ತಿನ150ರಾಷ್ಟ್ರಗಳಿಗೆಉಚಿತಔಷಧರವಾನಿಸಿದೆ.

* ವಿಶ್ವಸಂಸ್ಥೆಯು ಸ್ಕಾಟ್ಲೆಂಡ್‌ನ ಗ್ಲಾಸ್ಗೋ ನಲ್ಲಿ ಆಯೋಜಿಸಿರುವ ಜಾಗತಿಕ ಪರಿಸರ ಸಮ್ಮೇಳನಕ್ಕೆ ಚಾಲನೆನೀಡಲಾಗಿದೆ,ಈಸಮ್ಮೇಳನದಲ್ಲಿಜಿ 20ಸದಸ್ಯರಾಷ್ಟ್ರಗಳು ಹಾಗೂವಿಶ್ವದಅನೇಕ ರಾಷ್ಟ್ರಗಳುಭಾಗಿಯಾಗಿದ್ದವು.

## ಮಾಲಿನ್ಯಕಡಿತಕ್ಕೆಬದ್ಧತೆಇಲ್ಲಎಂದಜಿ20ದೇಶಗಳಮುಖಂಡರು



* ಇತ್ತೀಚಿಗೆ ರೋಮ್'ನಲ್ಲಿ ಜರುಗಿದ ಜಿ 20 ದೇಶಗಳ ಮುಖಂಡರ ಶೃಂಗಸಭೆಯಲ್ಲಿ ಜಾಗತಿಕ ತಾಪಮಾನ ಹೆಚ್ಚಳವನ್ನು ಕಡಿಮೆ ಮಾಡುವ ಸಲುವಾಗಿ ಅರ್ಥಪೂರ್ಣ ಹಾಗೂ ಪರಿಣಾಮಕಾರಿ ಕ್ರಮಗಳಿಗೆ ಸಮ್ಮತಿಯನ್ನು ನೀಡಿದ್ದಾರೆ.
* ಪ್ರಸ್ತುತ ಜಗತ್ತು ಹವಾಮಾನ ದುರಂತದತ್ತ ಅತಿ ವೇಗದಿಂದ ಓಡುತ್ತಿದೆ ಎಂದು ವಿಶ್ವ ಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಯಂಟೊನಿಯೊ ಗುಟೆರಸ್ ಅವರು ಎಚ್ಚರಿಕೆಯನ್ನು ನೀಡಿದ್ದಾರೆ.
* ಜಿ20 ನಾಯಕರು ಜಾಗತಿಕ ತಾಪಮಾನದ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಿಗೊಳಿಸಬೇಕು ಎಂಬ ವಿಚಾರಕ್ಕೆ ಸಮ್ಮತಿಯನ್ನು ನೀಡಿದ್ದಾರೆ, ಅಷ್ಟೇ ಅಲ್ಲದೇ ಬರಗಾಲ, ಪ್ರವಾಹ, ಬಿರುಗಾಳಿಯಂತಹ ನೈಸರ್ಗಿಕ ವಿಕೋಪಗಳನ್ನು ತಡೆಯುವದು ಅನಿವಾರ್ಯವಾಗಿದೆ ಎಂದು ವಿಶ್ವ ಸಂಸ್ಥೆಯು ತಿಳಿಸಿದೆ, ಒಟ್ಟು ಇಂಗಾಲ ಹೊರಸೂಸುವಿಕೆಯಲ್ಲಿ ಜಿ20 ದೇಶಗಳ ಪಾಲು ಶೇ 80 ರಷ್ಟಿದೆ.
* ಪ್ರಸ್ತುತ ತಜ್ಞರು ನೀಡಿರುವ ಮಾಹಿತಿಯ ಪ್ರಕಾರ, 1.5 ಡಿ.ಸೆ ಗುರಿಯನ್ನು ಸಾಧಿಸುವುದು ಎಂದರೆ, 2030ರ ವೇಳೆಗೆ ಜಾಗತಿಕ ಇಂಗಾಲದ ಹೊರಸೂಸುವಿಕೆಯನ್ನು ಶೇ 50ರಷ್ಟು ಕಡಿಮೆ ಮಾಡುವದು ಮತ್ತು 2050ರ ವೇಳೆ 'ನೆಟ್ ಜೀರೊ' ಗುರಿ ಸಾಧಿಸುವದು ಎಂದರ್ಥ.

## ಸಿಂಧೂ ನದಿ ಡಾಲ್ಫಿನ್‌ನ ಗಣತಿಯನ್ನು ಆರಂಭಿಸಲಿರುವ ಪಂಜಾಬ್ ರಾಜ್ಯ



* ಇದೀಗ ಪಂಜಾಬ್ ರಾಜ್ಯವು ಸಿಂಧೂ ನದಿಯಲ್ಲಿನ ಡಾಲ್ಫಿನ್‌ನ ಗಣತಿಯನ್ನು ಆರಂಭಿಸಲಿದೆ.
* ವೈಜ್ಞಾನಿಕವಾಗಿ ಸಿಂಧೂ ನದಿಯಲ್ಲಿನ ಡಾಲ್ಫಿನ್‌'ನ್ನು ಪ್ಲಾಟಾನಿಸ್ಟಾ ಗ್ಯಾಂಟಿಕಾ ಮೈನರ್ ಎಂದು ಕರೆಯಲಾಗುತ್ತದೆ, ಹಾಗೂ ಬಿಯಾಸ್ ನದಿಯಲ್ಲಿ ಕಂಡುಬರುವ ಸಿಹಿನೀರಿನ ಡಾಲ್ಫಿನ್‌'ಗಳಾಗಿವೆ.
* ಪಂಜಾಬ್ ರಾಜ್ಯದ ವನ್ಯಜೀವಿ ಸಂರಕ್ಷಣಾ ವಿಭಾಗವು ಡಾಲ್ಫಿನ್‌'ಗಳು ಅಷ್ಟೇ ಅಲ್ಲದೇ ಅವುಗಳ ನೈಸರ್ಗಿಕ ಆವಾಸಸ್ಥಾನವನ್ನೂ ರಕ್ಷಿಸಲು ಮುಂದಾಗಿದೆ, ಹಾಗೂ ಮುಂದಿನ 5 ವರ್ಷಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಬರಲಿದೆ ಎಂದಿದ್ದಾರೆ.
* ಇಂಡಸ್ ರಿವರ್ ಡಾಲ್ಫಿನ್'ನ್ನು ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (IUCN)ನ ಪ್ರಕಾರ ಅಳಿವಿನಂಚಿನಲ್ಲಿವೆ ಎಂದು ತಿಳಿಸಲಾಗಿದೆ.
* ಪಂಜಾಬ್‌ನ ರಾಜ್ಯ ಸರ್ಕಾರವು 2019 ರಲ್ಲಿ ಸಿಂಧೂ ನದಿಯ ಡಾಲ್ಫಿನ್'ನ್ನು ಪಂಜಾಬ್‌ನರಾಜ್ಯ ಜಲಚರಪ್ರಾಣಿಎಂದುಘೋಷಣೆಮಾಡಿದೆ.

## ಎಲೆಕ್ಟ್ರಿಕ್‌ವಾಹನಗಳಿಗೆಸಂಪೂರ್ಣತೆರಿಗೆವಿನಾಯಿತಿಯನ್ನುಘೋಷಿಸಿದ ಒಡಿಶಾ



* ಪ್ರಸ್ತುತ ಒಡಿಶಾ ಸರ್ಕಾರವು ರಾಜ್ಯದಲ್ಲಿ ಮೋಟಾರು ವಾಹನಗಳ ತೆರಿಗೆ ಮತ್ತು ಎಲೆಕ್ಟ್ರಿಕ್ ವಾಹನಗಳ (EV) ನೋಂದಣಿ ಶುಲ್ಕಗಳಿಗೆ ಸಂಪೂರ್ಣ ವಿನಾಯಿತಿಯನ್ನು ಘೋಷಣೆ ಮಾಡಿದೆ.
* ಎಲೆಕ್ಟ್ರಿಕ್ ವಾಹನಗಳ ವೇಗದ ಅಳವಡಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಒಡಿಶಾ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ, ಪ್ರಸ್ತುತ ಮೋಟಾರು ವಾಹನಗಳ ತೆರಿಗೆ ಕಾಯಿದೆ ಅಡಿಯಲ್ಲಿ ವಿನಾಯಿತಿ ನೀಡಲಾಗಿದೆ, ಹಾಗೂ ಇದು 2025 ರವರೆಗೆ ಈ ವಿನಾಯಿತಿ ಅನ್ವಯವಾಗಲಿದೆ ಎಂದು ಸರ್ಕಾರ ತಿಳಿಸಿದೆ.
* ಇದೀಗ ಒಡಿಶಾ ಸರ್ಕಾರವು ಮೋಟಾರು ವಾಹನಗಳ ತೆರಿಗೆ ಮತ್ತು ಬ್ಯಾಟರಿ ಚಾಲಿತ ವಾಹನಗಳ ನೋಂದಣಿ ಶುಲ್ಕದ ಮೇಲೆ ಶೇ. 100 ಪ್ರತಿಶತ ವಿನಾಯಿತಿಯನ್ನು ಘೋಷಣೆ ಮಾಡಿದೆ, ಅಷ್ಟೇ ಅಲ್ಲದೇ ರಾಜ್ಯ ಸರ್ಕಾರಿ ನೌಕರರಿಗೆ ಎಲೆಕ್ಟ್ರಿಕ್ ವಾಹನಗಳ ಮೇಲೆ ಬಡ್ಡಿ ರಹಿತ ಸಾಲ ಸೌಲಭ್ಯ ನೀಡಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.
* ಪ್ರಸ್ತುತ ದೆಹಲಿ, ಕೇರಳ, ಗುಜರಾತ್, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳು FAME II ಯೋಜನೆಯ ಬಿಟ್ಟು 'ಇ ವಾಹನ ನೀತಿ'ಯನ್ನುಜಾರಿಗೆತಂದಿವೆ.

## ಡೈರಿ ಸಹಕಾರ ಯೋಜನೆಯ ಪ್ರಮುಖ ಮಾಹಿತಿ



* ಪ್ರಸ್ತುತ ಇದೇ ಅಕ್ಟೋಬರ್. 31 ರಂದು ಕೇಂದ್ರ ಗೃಹ ವ್ಯವಹಾರಗಳ ಸಚಿವ ಅಮಿತ್ ಶಾ ಅವರು ಗುಜರಾತ್‌ನ ಆನಂದ್‌ನಲ್ಲಿ ಡೈರಿ ಸಹಕಾರ ಯೋಜನೆಯನ್ನು ಆರಂಭಿಸಿದರು, ಈ ಯೋಜನೆಯಿಂದಾಗಿ ರೈತರ ಆದಾಯವು ಹೆಚ್ಚಾಗಲಿದೆ ಎಂದು ತಿಳಿಸಿದ್ದಾರೆ.
* ಹೈನುಗಾರಿಕೆ ಸಹಕಾರ ಯೋಜನೆಯಿಂದಾಗಿ 5000ಕೋಟಿರೂ.ಒಟ್ಟುಹೂಡಿಕೆಯಬಜೆಟ್ 'ನಿಂದ ಈ ಯೋಜನೆಯನ್ನು ಆರಂಭಿಸಲಿದೆ.
* ಪ್ರಸ್ತುತ ಅಮುಲ್‌ನ 75 ನೇ ಸಂಸ್ಥಾಪನಾ ವರ್ಷವನ್ನು ಆಚರಿಸುವ ಅಬೆಯಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿದೆ.
* ಪ್ರಸ್ತುತ ಅಮುಲ್ ಒಂದು ಗುಜರಾತ್‌ನ ಆನಂದ್‌ನಲ್ಲಿರುವ ಭಾರತೀಯ ಡೈರಿ ಸಹಕಾರಿ ಸಂಘವಾಗಿದೆ, ಹಾಗೂ ಇದನ್ನು 1946 ರಲ್ಲಿ ಸ್ಥಾಪನೆ ಮಾಡಲಾಗಿದೆ, ಇದೀಗ ಈ ಸಂಘವನ್ನು ಗುಜರಾತ್ ಕೋ ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್ ನಿರ್ವಹಿಸುತ್ತಿದೆ.
* ಪ್ರಸ್ತುತಗುಜರಾತ್ ಕೋ ಆಪರೇಟಿವ್ ಮಿಲ್ಕ್ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್ ಗುಜರಾತ್‌ನಲ್ಲಿನ ಸರಿ ಸುಮಾರು3.6ಮಿಲಿಯನ್‌ಹಾಲುಉತ್ಪಾದಕರಒಡೆತನದಲ್ಲಿದೆ.

## ರಾಷ್ಟ್ರೀಯಏಕತಾದಿವಸ್‌ಆಚರಣೆ




* ಪ್ರತಿ ವರ್ಷ ಅಕ್ಟೋಬರ್. 31 ರಂದು ರಾಷ್ಟ್ರೀಯ ಏಕತಾ ದಿವಸ್ ಅಥವಾ ದಿನವನ್ನು ಆಚರಣೆ ಮಾಡಲಾಗುತ್ತದೆ.
* ಈ ಹಿಂದೆ 2014 ರಲ್ಲಿ ಭಾರತ ಸರ್ಕಾರವು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಜನ್ಮದಿನದ ಅಂಗವಾಗಿ ರಾಷ್ಟ್ರೀಯ ಏಕತಾ ದಿನವನ್ನು ಪರಿಚಯಿಸಿದೆ, ಅಷ್ಟೇ ಅಲ್ಲದೇ ದೇಶವನ್ನು ಒಗ್ಗೂಡಿಸಲು ಇವರು ಪಟ್ಟಿರುವ ಪ್ರಯತ್ನಗಳನ್ನು ಗುರುತಿಸಲಾಗಿದೆ.
*ಪ್ರಸ್ತುತರಾಷ್ಟ್ರೀಯಏಕತಾ ದಿನವನ್ನು ಭಾರತದ ಶಕ್ತಿಯ ಜ್ಞಾಪನೆಯಾಗಿ ಪರಿಗಣಿಸಲಾಗಿದೆ, ಹಾಗೂ ಭಾರತದ ಭದ್ರತೆ, ಏಕತೆ ಮತ್ತು ಸಮಗ್ರತೆಗೆ ಉಂಟಾಗುವ ಅಪಾಯಗಳ ಕಡೆಗೆ ಭಾರತದ ಸ್ಥಿತಿಸ್ಥಾಪಕತ್ವವನ್ನು ತೋರಿಸಲಿದೆ.
* ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು 1947 1950ರ ಅವಧಿಯಲ್ಲಿ ಭಾರತದ ಮೊದಲ ಉಪ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಹಾಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (INC) ನ ಹಿರಿಯ ನಾಯಕರಾಗಿ ಕೆಲಸ ನಿರ್ವಹಿಸಿದ್ದಾರೆ, ಅಷ್ಟೇ ಅಲ್ಲದೇ 1947 ರ ಭಾರತ ಪಾಕಿಸ್ತಾನ ಯುದ್ಧದ ಸಂಧರ್ಭದಲ್ಲಿ ಇವರು ಕೇಂದ್ರ ಗೃಹ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.
*ಸ್ವಾತಂತ್ರ್ಯ ಹೋರಾಟಗಾರ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಬೃಹತ್ ಪ್ರತಿಮೆಯು ವಿಶ್ವದ ಅತಿ ಎತ್ತರದ ಪ್ರತಿಮೆಯಾಗಿದೆ, ಇದು 182 ಮೀ. ಎತ್ತರವನ್ನು ಹೊಂದಿದೆ.
* ಪ್ರಸ್ತುತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯು ಗುಜರಾತ್ ರಾಜ್ಯದ ಕವಾಡಿಯಾ ಕಾಲೋನಿಯಲ್ಲಿ ನರ್ಮದಾ ನದಿಯ ಮೇಲಿದೆ.

## ಆಜಾದಿ ಕಾ ಅಮೃತ್ ಮಹೋತ್ಸವದ ಹಿನ್ನಲೆಯಿಂದಾಗಿ ಸಂಸ್ಕೃತಿ ಸಚಿವಾಲಯವು3ಸ್ಪರ್ಧೆಗಳಆರಂಭಿಸಿದೆ

* ರಾಷ್ಟ್ರೀಯ ಏಕತಾ ದಿನದ ಹಿನ್ನಲೆಯಿಂದಾಗಿ ಸಂಸ್ಕೃತಿ ಸಚಿವಾಲಯವು ದೇಶಭಕ್ತಿ ಗೀತ ಬರವಣಿಗೆ, ಲೋರಿ ಬರವಣಿಗೆ ಹಾಗೂ ರಂಗೋಲಿ ತಯಾರಿಕೆಗಾಗಿ 3 ರಾಷ್ಟ್ರವ್ಯಾಪಿ ಸ್ಪರ್ಧೆಗಳನ್ನು ಆರಂಭಿಸಿದೆ.
* ತಹಶೀಲ್ ಮಟ್ಟ, ಹಾಗೂ ತಾಲೂಕಾ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಸ್ಪರ್ಧೆಗಳು ನಡೆಯಲಿವೆ, ಪ್ರಧಾನಿ ನರೇಂದ್ರ ಮೋದಿ ಅವರು ಎಂದು ಮನ್ ಕಿ ಬಾತ್‌ನಲ್ಲಿ ಈ ಸ್ಪರ್ಧೆಗಳನ್ನೂ ಘೋಷಣೆ ಮಾಡಿದರು.
* ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಗಣ್ಯ ವ್ಯಕ್ತಿಗಳಿಂದ ಸಾರ್ವಜನಿಕ ಭಾಗವಹಿಸುವಿಕೆ ಪರಿಚಯಿಸಲಾಗುತ್ತಿದೆ, ಇತ್ತೀಚಿಗೆ ಲತಾ ಮಂಗೇಶ್ಕರ್ ಅವರು ದೇಶಭಕ್ತಿ ಗೀತ ಸ್ಪರ್ಧೆಗಾಗಿ ಟ್ವೀಟ್ ಮಾಡಿದ್ದಾರೆ, ಎ.ಆರ್. ರೆಹಮಾನ್ ಲೋರಿ ಅಥವಾ ಲಾಲಿ ಬರೆಯುವ ಸ್ಪರ್ಧೆಗೆ ಟ್ವೀಟ್ ಮಾಡಿದ್ದಾರೆ, ಸುದರ್ಶನ್ ಪಟ್ನಾಯಕ್ ಅವರು ರಂಗೋಲಿ ಸ್ಪರ್ಧೆಗಾಗಿ ಟ್ವೀಟ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ.
* ಆಜಾದಿ ಕಾ ಅಮೃತ ಮಹೋತ್ಸವ ಇದೊಂದು ಭಾರತ ಸರ್ಕಾರದ ಉಪಕ್ರಮವಾಗಿದೆ, 75 ವರ್ಷಗಳ ಭಾರತವನ್ನು ಸ್ಮರಿಸಲು ಇದನ್ನು ಆರಂಭಿಸಲಾಗಿದೆ.

## ಗ್ಲಾಸ್ಗೊದಲ್ಲಿ ಜರುಗಿದ ಕಾಪ್ 26 ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರಮೋದಿಭಾಗಿ



* ಗ್ಲಾಸ್ಗೊದಲ್ಲಿ ನವೆಂಬರ್ 1ರಂದು ನಡೆದ ಕಾಪ್ 26 ವಿಶ್ವ ನಾಯಕರ ಸಮಾವೇಶದ ಸಂದರ್ಭದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಯುನೈಟೆಡ್ ಕಿಂಗ್ ಡಂನ ಪ್ರಧಾನ ಮಂತ್ರಿಯಾದ ಬೊರಿಸ್ ಜಾನ್ಸನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.
* ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆ ಒಡಂಬಡಿಕೆ ಸಮಾವೇಶ ಕಾಪ್ 26ಅನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯುಕೆ ಪ್ರಧಾನಮಂತ್ರಿಯಾದ ಬೊರಿಸ್ ಜಾನ್ಸನ್ ಅವರನ್ನು ಅಭಿನಂದಿಸಿದರು.
* ಹವಾಮಾನ ಬದಲಾವಣೆಯ ಪರಿಣಾಮಗಳ ತಗ್ಗಿಸುವಿಕೆ ಮತ್ತು ಪ್ಯಾರಿಸ್ ಒಪ್ಪಂದದ ನೀತಿ ನಿಯಮಗಳ ಅಳವಡಿಕೆಯ ಜಾಗತಿಕ ಕ್ರಮಗಳ ಮೇಲ್ವಿಚಾರಣೆಗೆ ಕೈಗೊಂಡ ವೈಯಕ್ತಿಕ ನಾಯಕತ್ವ ಕ್ರಮಗಳನ್ನು ಮೋದಿ ಅಭಿನಂದಿಸಿದರು.
* ಹವಾಮಾನ ಬದಲಾವಣೆಯ ಕ್ರಮಗಳಿಗಾಗಿ ಹಣಕಾಸು, ತಂತ್ರಜ್ಞಾನ, ಅನುಶೋಧನೆ, ಅಂತಾರಾಷ್ಟ್ರೀಯ ಸೌರಶಕ್ತಿ ಮೈತ್ರಿಕೂಟ (ISA) ಮತ್ತು ವಿಪತ್ತು ಪ್ರತಿಬಂಧಕ ಮೂಲಸೌಕರ್ಯ ಮೈತ್ರಿಕೂಟ(CDRI)ದ ಅಡಿ ನವೀಕರಿಸಬಹುದಾದ ಮತ್ತು ಸ್ವಚ್ಛ ತಂತ್ರಜ್ಞಾನಗಳಂತಹ ಜಂಟಿ ಉಪಕ್ರಮಗಳು ಮತ್ತು ಹಸಿರು ಜಲಜನಕ( ಹೈಡ್ರೋಜನ್) ಅಳವಡಿಕೆಗೆ ಭಾರತವು ಯುಕೆ ಜತೆ ನಿಕಟವಾಗಿ ಕೆಲಸ ಮಾಡಲು ಬದ್ಧವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದರು.
* ಭಾರತ ಮತ್ತು ಯುಕೆ ನಡುವೆ ವ್ಯಾಪಾರ, ಆರ್ಥಿಕತೆ, ಜನರ ನಡುವೆ ಸಂಪರ್ಕ, ಆರೋಗ್ಯ, ರಕ್ಷಣೆ ಮತ್ತು ಭದ್ರತಾ ವಲಯಗಳಿಗೆ ಸಂಬಂಧಿಸಿದ ಮಾರ್ಗಸೂಚಿ 2030 ಆದ್ಯತೆಗಳ ಕುರಿತು ಉಭಯ ನಾಯಕರು ಪರಾಮರ್ಶೆ ನಡೆಸಿದರು.
* ಮುಕ್ತ ವ್ಯಾಪಾರ ಸಂಧಾನ ಅನಾವರಣಕ್ಕೆ ಕೈಗೊಂಡ ಕ್ರಮಗಳು ಸೇರಿದಂತೆ ವರ್ಧಿತ ವ್ಯಾಪಾರ ಪಾಲುದಾರಿಕೆಯಲ್ಲಿ ಆಗಿರುವ ಪ್ರಗತಿಗಳ ಕುರಿತು ಉಭಯ ನಾಯಕರು ಸಂತೃಪ್ತಿ ವ್ಯಕ್ತಪಡಿಸಿದರು.
* ಅಫ್ಘಾನಿಸ್ತಾನ, ಭಯೋತ್ಪಾದನೆ ನಿಗ್ರಹ, ಇಂಡೋ ಪೆಸಿಫಿಕ್ ವಲಯ, ಸರಕುಗಳ ಪೂರೈಕೆ ಸರಪಳಿ ಪರಿಸ್ಥಿತಿ, ಕೋವಿಡ್ ನಂತರದ ಜಾಗತಿಕ ಆರ್ಥಿಕ ಚೇತರಿಕೆ ಸೇರಿದಂತೆ ಉಭಯ ನಾಯಕರು ಪ್ರಾದೇಶಿಕ ಮತ್ತು ಜಾಗತಿಕ ಸವಾಲುಗಳ ಕುರಿತು ಚರ್ಚಿಸಿದರು.

## ತೆಲಂಗಾಣ ರಾಜ್ಯಕ್ಕೆ ಅಂತರಾಷ್ಟ್ರೀಯ ಬೀಜ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನ



* ಪ್ರಸ್ತುತ ತೆಲಂಗಾಣ ರಾಜ್ಯಕ್ಕೆ ಆಹಾರ ಮತ್ತು ಕೃಷಿ ಸಂಸ್ಥೆ (FAO) ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ ಎಂದು ತಿಳಿದು ಬಂದಿದೆ.
* ಇದು 2021 ರ ನವೆಂಬರ್ 4 ಮತ್ತು ನವೆಂಬರ್5 ರಂದು ರೋಮ್‌ನಲ್ಲಿ ಜರುಗುವ ಎರಡು ದಿನಗಳ ಅಂತರರಾಷ್ಟ್ರೀಯ ಬೀಜ ಸಮ್ಮೇಳನವಾಗಿದೆ.
* ಈ ಸಮ್ಮೇಳನವನ್ನು ಬೀಜ ಉದ್ಯಮದ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಆಯೋಜಿಸಲಾಗಿದೆ, ಈ ಸಮ್ಮೇಳನದಲ್ಲಿ ತೆಲಂಗಾಣ ಬೀಜ ಕೇಂದ್ರ ವಿಷಯದ ಬಗ್ಗೆ ಭಾರತದ ಯಶೋಗಾಥೆ ಉಪನ್ಯಾಸ ನೀಡಲಿದ್ದಾರೆ.
* ಆಹಾರ ಮತ್ತು ಕೃಷಿ ಸಂಸ್ಥೆ (FAO)ಯು ಇದೊಂದು ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಯಾಗಿದೆ. ಇದು ಹಸಿವನ್ನು ಸೋಲಿಸಲು ಮತ್ತು ಪೌಷ್ಟಿಕಾಂಶ ಮತ್ತು ಆಹಾರ ಭದ್ರತೆಯನ್ನು ಸುಧಾರಿಸಲು ಸಹಾಯ ಮಾಡಲಿದೆ,
* ಪ್ರಸ್ತುತ ಆಹಾರ ಮತ್ತು ಕೃಷಿ ಸಂಸ್ಥೆ 1945 ರ ಅಕ್ಟೋಬರ್'ನಲ್ಲಿ ಸ್ಥಾಪನೆ ಮಾಡಲಾಗಿದೆ, ಇದೀಗ ಇದು 197 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ, ಹಾಗೂ ತನ್ನ ಪ್ರಧಾನ ಕಛೇರಿ ಇಟಲಿಯ ರೋಮ್ ನಲ್ಲಿ ಹೊಂದಿದೆ.

# 03- 11- 2021

## ಗಿನ್ನೆಸ್‌ಬುಕ್‌ಆಫ್‌ವರ್ಲ್ಡ್‌ರೆಕಾರ್ಡ್‌ಗೆ"ಮಿಷನ್‌ಗಂಗಾ"ಸೇರ್ಪಡೆ



* ದಿ ರಿವರ್ ಫೆಸ್ಟಿವಲ್ 2021ರ ಗಂಗಾ ಶುದ್ಧೀಕರಣಕ್ಕಾಗಿ ರಾಷ್ಟ್ರೀಯ ಮಿಷನ್ (NMCG) ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸೇರ್ಪಡೆಯಾಗಿದೆ.
* ಗಂಗಾ ಶುದ್ಧೀಕರಣಕ್ಕಾಗಿ ರಾಷ್ಟ್ರೀಯ ಮಿಷನ್ ಸುಮಾರು ಒಂದು ಗಂಟೆಗಳ ಕಾಲ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಕೈಬರಹದ ಟಿಪ್ಪಣಿಗಳ ದಾಖಲೆಯ ಫೋಟೋಗಳನ್ನು ಹಚ್ಚಿಕೊಳ್ಳುವ ಮೂಲಕ ಗಿನ್ನೆಸ್ ಪುಸ್ತಕದಲ್ಲಿ ಸೇರ್ಪಡೆಯಾಗಿದೆ.
* ಪ್ರಸ್ತುತ ಗಂಗಾ ನದಿ ಪುನರುಜ್ಜೀವನದ ಬಗ್ಗೆ ಜಾಗೃತಿ ಮೂಡಿಸಲು ಗಂಗಾ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
* 5ನೇ ಆವೃತ್ತಿಯು ಗಂಗಾ ಉತ್ಸವ ವಾಸ್ತವಿಕವಾಗಿ ವಿನೋದ ಹಾಗೂ ಹಬ್ಬಗಳೊಂದಿಗೆ ಆರಂಭವಾಗಿದೆ, ಈ ಹಬ್ಬವು ಗಂಗಾ ನದಿ ಹಾಗೂ ಭಾರತದ ಇತರ ನದಿಗಳ ವೈಭವವನ್ನು ಆಚರಿಸಲು ಸಹಾಯ ಮಾಡಲಿದೆ.
* ಗಂಗಾ ಉತ್ಸವವನ್ನು, ಗಂಗಾ ಸ್ವಚ್ಛತೆಯ ರಾಷ್ಟ್ರೀಯ ಮಿಷನ್‌ನಿಂದ ಆಚರಣೆ ಮಾಡಲಾಗುತ್ತದೆ, ಇದನ್ನು 3 ದಿನಗಳ ಹಬ್ಬವಾಗಿ ಆಚರಿಸಲಾಗುತ್ತದೆ, ಈ 3 ದಿನಗಳ ಗಂಗಾ ಉತ್ಸವದಲ್ಲಿ ಕಥೆ, ಜಾನಪದ ಕಥೆ, ಹಾಗೂ ಸಂವಾದಗಳು, ರಸಪ್ರಶ್ನೆಗಳು, ಸಂಗೀತ ಮತ್ತು ನೃತ್ಯ ಪ್ರದರ್ಶನಗಳು ಹಾಗೂ ಫೋಟೋ ಗ್ಯಾಲರಿಗಳನ್ನು ತೋರಿಸುವ ಮೂಲಕ ಆಚರಣೆ ಮಾಡಲಾಗುತ್ತದೆ.
* ಈ ಗಂಗಾ ಉತ್ಸವವನ್ನು ಪ್ರಯಾಗರಾಜ್‌ನಲ್ಲಿನ, ಗಂಗಾ ನದಿ ಹಾಗೂ ಯಮುನಾ ನದಿಯ ಸಂಗಮದಲ್ಲಿ ಆಚರಣೆಮಾಡಲಾಗುತ್ತದೆ.

## 2020ಸರ್ಕಾರಿಕ್ರೀಡಾಪ್ರಶಸ್ತಿಗಳು




* ಕೇಂದ್ರ ಕ್ರೀಡಾ ಸಚಿವಾಲಯವು ವಿಜೇತರಿಗೆ 2020 ರ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳ ಟ್ರೋಫಿಗಳನ್ನು ನೀಡಿತು, ವಿಜೇತರು ಈ ಮೊದಲೇ ನಗದು ಬಹುಮಾನಗಳನ್ನು ಸ್ವೀಕಾರ ಮಾಡಿದ್ದಾರೆ, ಆದರೆ ಕೋವಿಡ್ 19 ಹಿನ್ನಲೆಯಿಂದಾಗಿ 2020 ರ ಸಮಾರಂಭದಲ್ಲಿ ಟ್ರೋಫಿಗಳುನ್ನು ಸ್ವೀಕರಿಸಲು ಆಗಿರಲಿಲ್ಲ.

* ಕ್ರೀಡಾ ಸಚಿವಾಲಯವು 2020 ರ ಆಗಸ್ಟ್ 29 ರಂದು ಒಟ್ಟಾರೆ 74 ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ನೀಡಿದೆ, ಅವುಗಳಲ್ಲಿ 27 ಅರ್ಜುನ ಪ್ರಶಸ್ತಿಗಳು ಹಾಗೂ 5 ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗಳು ಸೇರಿವೆ.

*** 2020 ರ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ:** ರೋಹಿತ್ ಶರ್ಮಾ (ಕ್ರಿಕೆಟ್), ಮನಿಕಾ ಬಾತ್ರಾ (ಟೇಬಲ್ ಟೆನಿಸ್) ಮರಿಯಪ್ಪನ್ ತಂಗವೇಲು (ಪ್ಯಾರಾ ಅಥ್ಲೆಟಿಕ್ಸ್), ರಾಣಿ ರಾಂಪಾಲ್ (ಹಾಕಿ) ಮತ್ತು ವಿನೇಶ್ ಫೋಗಟ್ (ಕುಸ್ತಿ) ಇವರಿಗೆ ಲಭಿಸಿದೆ.

***2020ರ ಅರ್ಜುನ ಪ್ರಶಸ್ತಿ:** ಅತಾನುದಾಸ್ (ಆರ್ಚರಿ), ಚಿರಾಗ್ ಚಂದ್ರಶೇಖರ್ ಶೆಟ್ಟಿ (ಬ್ಯಾಡ್ಮಿಂಟನ್), ದ್ಯುತಿ ಚಂದ್ (ಅಥ್ಲೆಟಿಕ್ಸ್), ಇಶಾಂತ್ ಶರ್ಮಾ (ಕ್ರಿಕೆಟ್), ದೀಪ್ತಿ ಶರ್ಮಾ (ಕ್ರಿಕೆಟ್), ದಿವ್ಯಾ ಕಕ್ರಾನ್ (ಕುಸ್ತಿ ವಿಭಾಗ).

*** 2020 ರ ದ್ರೋಣಾಚಾರ್ಯ ಪ್ರಶಸ್ತಿ:** ನರೇಶ್ ಕುಮಾರ್ (ಟೆನಿಸ್), ರೋಮೇಶ್ ಪಠಾನಿಯಾ (ಹಾಕಿ), ಧರ್ಮೇಂದ್ರ ತಿವಾರಿ (ಆರ್ಚರಿ), ಓಂ ಪ್ರಕಾಶ್ ದಹಿಯಾ (ಕುಸ್ತಿ ವಿಭಾಗ)

***2020ರ ಧ್ಯಾನ್ ಚಂದ್ ಪ್ರಶಸ್ತಿ:** ಕುಲದೀಪ್ ಸಿಂಗ್ ಭುಲ್ಲರ್ (ಅಥ್ಲೆಟಿಕ್ಸ್), ಲಾಖಾ ಸಿಂಗ್ (ಬಾಕ್ಸಿಂಗ್), ತೃಪ್ತಿ ಮುರ್ಗುಂಡೆ (ಬ್ಯಾಡ್ಮಿಂಟನ್), ಎನ್ ಉಷಾ (ಬಾಕ್ಸಿಂಗ್), ಮನ್‌ಪ್ರೀತ್ ಸಿಂಗ್ (ಕಬಡ್ಡಿ), ನಂದನ್ ಬಾಲ್ (ಟೆನಿಸ್).

* ಪ್ರಸ್ತುತ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಭಾರತದಲ್ಲಿನ 'ಆರು ಕ್ರೀಡಾಪ್ರಶಸ್ತಿಗಳ'ನ್ನುನೀಡುತ್ತದೆ.

## ಪಾಕಲ್‌ದುಲ್‌ಎಚ್.ಇ.ಯೋಜನೆಯಲ್ಲಿಮರುಸುದಾರ್‌ನದಿಯ ತಿರುವುಉದ್ಘಾಟನೆ



* ಪ್ರಸ್ತುತ ಪಾಕಲ್ ದುಲ್ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯ ಮರುಸುದಾರ್ ನದಿಯ ತಿರುವನ್ನು ಕೇಂದ್ರ ವಿದ್ಯುತ್, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಆರ್.ಕೆ. ಸಿಂಗ್ ಅವರು ಉದ್ಘಾಟನೆ ಮಾಡಿದರು.

* ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯಲ್ಲಿ ಈ ಯೋಜನೆಯುನ್ನು ಉದ್ಘಾಟನೆ ಮಾಡಲಾಗಿದೆ.

* 2030 ರ ವೇಳೆಗೆ ಪಾಕಲ್ ದುಲ್ ಎಚ್.ಇ. ಸುಮಾರು 450 GW ನವೀಕರಿಸಬಹುದಾದ ಶಕ್ತಿಯನ್ನು ಪೂರೈಕೆ ಮಾಡುವ ಗುರಿಯನ್ನು ಹೊಂದಿದೆ ಎನ್ನಲಾಗಿದೆ.

* ಈ ಪಾಕಲ್ ದುಲ್ ಎಚ್.ಇ. ಯೋಜನೆಯು ಸರಿ ಸುಮಾರು 1000 MW ಯೋಜನೆಯಾಗಿದೆ. ಇದನ್ನು ಚೆನಾಬ್ ವ್ಯಾಲಿ ಪವರ್ ಪ್ರಾಜೆಕ್ಟ್ಸ್ ಲಿಮಿಟೆಡ್ ನಿರ್ಮಾಣ ಮಾಡುತ್ತಿದೆ. ಇದು J&K; ಸರ್ಕಾರ ಮತ್ತು NHPC Ltd'ನ ಜಂಟಿ ಉದ್ಯಮವಾಗಿದೆ.

* ಈ ಮರುಸುದಾರ್ ನದಿಯು ಚೆನಾಬ್ ನದಿಯ ಅತಿದೊಡ್ಡ ಉಪನದಿಯಾಗಿದೆ. ಇದು ವಾರ್ವಾನ್ ಕಣಿವೆಯ ನಂಕುನ್ ಹಿಮನದಿಯಿಂದ ಆರಂಭವಾಗುತ್ತದೆ ಹಾಗೂ ಕಿಶ್ತ್ವಾರ್ ಜಿಲ್ಲೆಯ ಭಂಡಾರ್‌ಕೂಟ್‌ನಲ್ಲಿ ಚೆನಾಬ್ ನದಿಯನ್ನು ಸೇರಲಿದೆ, ಪ್ರಸ್ತುತ ಈ ನದಿಯು 133 ಕಿ.ಮೀ. ವರೆಗೆ ಸಾಗುತ್ತದೆ.

## 2022ರಜನವರಿ26ರಿಂದಮನೆಮನೆಗೆಪಡಿತರವಿತರಣೆ



* ಕರ್ನಾಟಕ ರಾಜ್ಯ ಸರ್ಕಾರವು 2022 ರ ಜನವರಿ 26 ರಿಂದ ಮನೆ ಮನೆಗೆ ಪಡಿತರ ವಿತರಣೆ ಮಾಡಲಾಗುವುದು ಎಂದು ಕನ್ನಡ ರಾಜ್ಯೋತ್ಸವದ ದಿನದಂದು ತಿಳಿಸಿದೆ.

* ರಾಜ್ಯ ಸರ್ಕಾರವು ವಾಹನಗಳ ಮೂಲಕ ಪಡಿತರ ಚೀಟಿದಾರರ ಮನೆಗಳಿಗೆ ಹೋಗಿ ರೇಷನ್ ವಿತರಣೆ ಮಾಡುವ ಕ್ರಮ ಹಮ್ಮಿಕೊಂಡಿದೆ ಎಂದು ಸಿಎಂ ಬೊಮ್ಮಾಯಿ ಅವರು ತಿಳಿಸಿದ್ದಾರೆ.

## ಪ್ರಧಾನಿಫುಮಿಯೊಕಿಶಿಡಾಗೆಜಪಾನ್‌ಚುನಾವಣೆಯಲ್ಲಿಗೆಲುವು



* ಇತ್ತೀಚಿಗೆ ಜಪಾನ್‌ನಲ್ಲಿ ಜರುಗಿದ ಸಂಸದೀಯ ಚುನಾವಣೆಯಲ್ಲಿ ಪ್ರಧಾನಿ ಫುಮಿಯೊ ಕಿಶಿಡಾ ಅವರ ನೇತೃತ್ವದ ಮೈತ್ರಿಕೂಟವು ಗೆಲುವು ದಾಖಲಿಸಿದೆ, ಇದೇ ಸಂಧರ್ಭದಲ್ಲಿ ಪ್ರಧಾನಿ ಫುಮಿಯೊ ಕಿಶಿಡಾ ಅವರು ಕೋವಿಡ್ 19 ಯಿಂದಾಗಿ ಚೇತರಿಸಿಕೊಳ್ಳಲು ಆರ್ಥಿಕ ಪ್ಯಾಕೇಜ್ ಘೋಷಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

* ಪ್ರಧಾನಿ ಫುಮಿಯೊ ಕಿಶಿಡಾ ಅವರು ಇತ್ತೀಚಿಗಷ್ಟೇ ಜಪಾನ್‌ನ ಪ್ರಧಾನಿಯಾಗಿ ಸ್ವೀಕರಿಸಿದ್ದರು.

* ಪ್ರಸ್ತುತ ಜಪಾನಿನ ಸಂಸತ್ತಿನ ಕೆಳಮನೆಯ 465 ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲಾಯಿತು ಅದರಲ್ಲಿ ಇದೀಗ ಅಧಿಕಾರದಲ್ಲಿರುವ ಲಿಬರಲ್ ಡೆಮೊಕ್ರಾಟಿಕ್ ಪಕ್ಷ ಹಾಗೂ ಮಿತ್ರಪಕ್ಷ ಕೊಮೈಟೊ 293 ಸ್ಥಾನಗಳಲ್ಲಿ ಗೆಲುವು ಪಡೆದುಕೊಂಡು ಬಹುಮತ ಗಳಿಸಿದೆ ಎಂದು ಅಧಿಕೃತ ಘೋಷಣೆಯನ್ನು ಮಾಡಿದೆ, ಇದೇ ಚುನಾವಣೆಯಲ್ಲಿ ಎಲ್‌ಡಿಪಿ ಪಕ್ಷವು 261 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ ಎಂದುತಿಳಿಸಲಾಗಿದೆ.

## ನವೆಂಬರ್ 8 ರಿಂದ ಎಲ್ಲಾ ಹಂತದ ಉದ್ಯೋಗಿಗಳಿಗೆ ಬಯೋಮೆಟ್ರಿಕ್‌ಹಾಜರಾತಿಕಡ್ಡಾಯ



* ಕೇಂದ್ರ ಸರ್ಕಾರವು ಇದೇ ನವೆಂಬರ್ 8 ರಿಂದ ಎಲ್ಲಾ ಹಂತದ ಉದ್ಯೋಗಿಗಳಿಗೆ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸಲು ತೀರ್ಮಾನಿಸಿದೆ ಎಂದು ಸಿಬ್ಬಂದಿ ಸಚಿವಾಲಯ ಮಾಹಿತಿ ನೀಡಿದೆ.

* ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ಉದ್ಯೋಗಿಗಳಿಗೆ ಇಲ್ಲಿಯವರೆಗೆ ಬಯೋಮೆಟ್ರಿಕ್

ಹಾಜರಾತಿಯಿಂದ ವಿನಾಯಿತಿ ನೀಡಲಾಗಿತ್ತು, ಆದರೆ ಕೇಂದ್ರ ಸರ್ಕಾರವು ಮತ್ತೇ ಎಲ್ಲಾ ಉದ್ಯೋಗಿಗಳಿಗೆ ಬಯೋಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯ ಗೊಳಿಸುವದಾಗಿ ತಿಳಿಸಿದೆ.
* ಎಲ್ಲಾ ಉದ್ಯೋಗಿಗಳು ಬಯೋಮೆಟ್ರಿಕ್ ಹಾಜರಾತಿಯನ್ನು ನೀಡುವ ವೇಳೆ ಸಾಮಾಜಿಕಅಂತರ ಹಾಗೂಮಾಸ್ಕಧರಿಸಿರಬೇಕುಎಂದುಸಿಬ್ಬಂದಿಸಚಿವಾಲಯತಿಳಿಸಿದೆ.

## 25 ಲಕ್ಷಕ್ಕೂ ಅಧಿಕ ಜನರಿಂದ ಅಂತಿಮ ದರ್ಶನ ಪಡೆದ ಏಕೈಕ ವ್ಯಕ್ತಿ ಪುನೀತ್‌ರಾಜ್‌ಕುಮಾರ್



*ಇತ್ತೀಚಿಗೆಪವರ್‌ಸ್ಟಾರ್‌ಪುನೀತ್‌ರಾಜಕುಮಾರ್‌ನಿಧನಕ್ಕೆಇಡೀಕನ್ನಡನಾಡೇಕಂಬನಿಮಿಡಿದಿದೆ,ದೇಶದ ಇತಿಹಾಸದಲ್ಲೇ ಗಾಂಧೀಜಿ ಬಿಟ್ಟರೆ 25 ಲಕ್ಷಕ್ಕೂ ಅಧಿಕ ಜನರಿಂದ ಅಂತಿಮ ದರ್ಶನ ಪಡೆದ ಏಕೈಕ ವ್ಯಕ್ತಿಪುನೀತ್‌ರಾಜ್‌ಕುಮಾರ್‌ಅವರಾಗಿದ್ದಾರೆ.

## ಕೇಂದ್ರಅಲ್ಪಸಂಖ್ಯಾತವ್ಯವಹಾರಗಳಸಚಿವಾಲಯದಿಂದಹಜ್ 2022ಘೋಷಣೆ



* 2021 ನವೆಂಬರ್ 1 ರಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಅವರು ಹಜ್ 2022 'ನ್ನು ಘೋಷಣೆ ಮಾಡಿದರು.
* ಹಜ್' ತೀರ್ಥಯಾತ್ರೆಗೆ ಆನ್‌ಲೈನ್ ಅರ್ಜಿ ಪ್ರಕ್ರಿಯೆ ಆರಂಭಿಸಲಾಗಿದೆ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 2022 ರ ಜನವರಿ 31 ಎಂದು ತಿಳಿಸಿದ್ದಾರೆ.
* ಹಜ್ ಇದೊಂದು ಇಸ್ಲಾಮಿಕ್ ತೀರ್ಥಯಾತ್ರೆಯಾಗಿದೆ, ಸೌದಿ ಅರೇಬಿಯಾದ ಪವಿತ್ರ ನಗರವಾದ ಮೆಕ್ಕಾದಲ್ಲಿದೆ, ಇದನ್ನು ವಾರ್ಷಿಕವಾಗಿ ನಡೆಸಲಾಗುತ್ತದೆ.
* ಪ್ರಸ್ತುತ ಭಾರತದಿಂದ ಪ್ರತಿ ವರ್ಷವು 2ಲಕ್ಷ ಹಜ್ ಯಾತ್ರಿಕರು ಸೌದಿ ಅರೇಬಿಯಾಕ್ಕೆ ಭೇಟಿ ನೀಡುತ್ತಾರೆ.
* ಭಾರತೀಯ ಹಜ್ ಯಾತ್ರಿಕರು 'ಸ್ಥಳೀಯರಿಗೆ ಧ್ವನಿ' ಎಂದು ಪ್ರಚಾರ ಮಾಡಲಾಗುತ್ತದೆ. ಅವರು ಭಾರತದಲ್ಲಿ ಖರೀದಿಸಿದ ಸ್ವದೇಶಿ ಉತ್ಪನ್ನಗಳ ಜೊತೆಗೆ ಹಜ್‌ಗೆ ಹೋಗುತ್ತಾರೆ ಮತ್ತು ವಿದೇಶಿ ಕರೆನ್ಸಿ ಬಳಸಿ ಬೆಡ್ ಶೀಟ್‌ಗಳು, ದಿಂಬುಗಳು, ಟವೆಲ್‌ಗಳನ್ನು ಖರೀದಿಸುವುದನ್ನು ತಪ್ಪಿಸಲಿದೆ.
* ಪ್ರಸ್ತುತ ಭಾರತದಲ್ಲಿನ ಎಂಬಾರ್ಕೇಶನ್ ಪಾಯಿಂಟ್‌ಗಳನ್ನು 21 ರಿಂದ 10 ಕ್ಕೆ ಕಡಿಮೆ ಮಾಡಲಾಗಿದೆ.
* 10 ಎಂಬಾರ್ಕೇಶನ್ ಪಾಯಿಂಟ್‌ಗಳು: ಅಹಮದಾಬಾದ್, ದೆಹಲಿ, ಬೆಂಗಳೂರು, ಕೊಚ್ಚಿನ್, ಹೈದರಾಬಾದ್, ಗುವಾಹಟಿ, ಮುಂಬೈ, ಕೋಲ್ಕತ್ತಾ, ಲಕ್ನೋ ಮತ್ತು ಶ್ರೀನಗರ.
* ಹಜ್ 2020 ಮತ್ತು 2021 ಕ್ಕೆ 'ಮೆಹ್ರಾಮ್ ಇಲ್ಲದೆ' ವರ್ಗದ ಅಡಿಯಲ್ಲಿ ಸುಮಾರು 3000 ಮಹಿಳೆಯರು ಅರ್ಜಿಯನ್ನು ಸಲ್ಲಿಸಿದ್ದಾರೆ, ಇವರ ಈ ಅರ್ಜಿಗಳು ಹಜ್ 2022 ಕ್ಕೆ ಮಾನ್ಯತೆಯನ್ನು ಪಡೆದಿರುತ್ತವೆ ಎಂದು ತಿಳಿಸಿದ್ದಾರೆ.

## ಭಾರತ ವಿಶ್ವಬ್ಯಾಂಕ್‌ಮೇಘಾಲಯದಲ್ಲಿನಆರೋಗ್ಯ ವ್ಯವಸ್ಥೆಗಳನ್ನುಬಲಪಡಿಸಲುಒಪ್ಪಂದ




* ಪ್ರಸ್ತುತ ಭಾರತ ಸರ್ಕಾರ ಹಾಗೂ ವಿಶ್ವ ಬ್ಯಾಂಕ್ ಮೇಘಾಲಯದಲ್ಲಿ ಆರೋಗ್ಯ ಸೇವೆಗಳನ್ನು ಸುಧಾರಿಸಲು 40 ಮಿಲಿಯನ್ ಯೋಜನೆಗೆ MoU ಗೆ ಸಹಿ ಹಾಕಿವೆ, ಈ ಒಪ್ಪಂದದಿಂದ ಕೋವಿಡ್ 19 ಸಾಂಕ್ರಾಮಿಕ ರೋಗದಲ್ಲಿನ ಆರೋಗ್ಯ ತುರ್ತು ಪರಿಸ್ಥಿತಿಗಳನ್ನು ನಿರ್ವಹಣೆ ಮಾಡಲು ರಾಜ್ಯಕ್ಕೆ ಇದು ಸಹಾಯ ಮಾಡಲಿದೆ.
* ಈ ಯೋಜನೆಯು ರಾಜ್ಯದಲ್ಲಿ ಆರೋಗ್ಯ ವಿಮಾ ಕಾರ್ಯಕ್ರಮದ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲಿದೆ, ಹಾಗೂ ಉತ್ತಮ ಮಾನವ ಸಂಪನ್ಮೂಲ ವ್ಯವಸ್ಥೆಗಳ ಮೂಲಕ ಆರೋಗ್ಯ ಸೇವೆಗಳನ್ನು ಸುಧಾರಿಸಲಿದೆ, ಅಷ್ಟೇ ಅಲ್ಲದೆ ಈ ಯೋಜನೆಯು ಅಂತಿಮವಾಗಿ ಔಷಧಗಳ ಪ್ರವೇಶವನ್ನು ಇನ್ನಷ್ಟು ಸಕ್ರಿಯಗೊಳಿಸುತ್ತದೆ.
* ಈ ಯೋಜನೆಯಿಂದ ರಾಜ್ಯದ ಎಲ್ಲಾ 11 ಜಿಲ್ಲೆಗಳು ಪ್ರಯೋಜನವನ್ನು ಪಡೆಯಲಿವೆ, ಈ ಯೋಜನೆಯಿಂದ ಮಹಿಳೆಯರಿಗೆ ಆರೋಗ್ಯ ಸೇವೆಗಳನ್ನು ಉತ್ತಮವಾಗಿ ಬಳಸಿಕೊಳ್ಳಲು ಸಹಾಯ ಮಾಡಲಿದೆ, ಹಾಗೂ ಆರೋಗ್ಯ ಸೇವೆಗಳ ವ್ಯಾಪ್ತಿಯನ್ನು ಬಡವರು ಹಾಗೂ ದುರ್ಬಲರಿಗೆ ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡುತ್ತದೆ.
* ಮೇಘಾ ಆರೋಗ್ಯ ವಿಮಾ ಯೋಜನೆಯು ಮೇಘಾಲಯದ ಆರೋಗ್ಯ ವಿಮಾ ಕಾರ್ಯಕ್ರಮದ ಪರಿಣಾಮಕಾರಿತ್ವವನ್ನು ಮತ್ತಷ್ಟು ಸುಧಾರಿಸಲಿದೆ, ಇದೀಗ ಇದು 56% ಕುಟುಂಬಗಳನ್ನು ಒಳಗೊಂಡಿದೆಎಂದುತಿಳಿಸಿದ್ದಾರೆ.

# 04- 11- 2021

## ಚೀನಾದಲ್ಲಿತನ್ನಸೇವೆಗಳನ್ನುನಿಲ್ಲಿಸಿದಯಾಹೂ(Yahoo)



* ಪ್ರಸ್ತುತ ಯಾಹೂ(Yahoo) ಚೀನಾದಲ್ಲಿ 2021 ರ ನವೆಂಬರ್ 1 ರಿಂದ ತನ್ನ ಸೇವೆಗಳನ್ನು ನಿಲ್ಲಿಸಿದೆ, ಈ Yahoo Inc. ಹೆಚ್ಚು ಸವಾಲಿನ ವ್ಯಾಪಾರ ಮತ್ತು ಕಾನೂನು ಪರಿಸರದ ಕಾರಣದಿಂದಾಗಿ ಹಿಂದೆ ಸರಿದಿದೆ ಎನ್ನಲಾಗಿದೆ.
* Yahoo ಈ ನಿರ್ಧಾರವನ್ನು ಬಳಕೆದಾರರ ಹಕ್ಕುಗಳಿಗಾಗಿ ಮತ್ತು ಉಚಿತಮತ್ತು ಮುಕ್ತ ಇಂಟರ್ನೆಟ್'ನ ಬದ್ಧತೆಗೆ ಅನುಗುಣವಾಗಿ ಕೈಗೊಂಡಿದೆ.
* ಚೀನಾದಲ್ಲಿನ ಅಧಿಕಾರಿಗಳು ಇಂಟರ್ನೆಟ್ ಸೆನ್ಸಾರ್ಶಿಪ್ ಮೇಲೆ ತೀಕ್ಷ್ಣವಾದ ಹಿಡಿತವನ್ನು ಕೈಗೊಳ್ಳುತ್ತಿದ್ದಾರೆ.
* ಇತ್ತೀಚಿಗೆ ಚೀನಾ ದೇಶವು ತನ್ನ 'ವೈಯಕ್ತಿಕ ಮಾಹಿತಿ ಸಂರಕ್ಷಣಾ ಕಾನೂನ'ನ್ನು ಜಾರಿಗೆ ತಂದಿದೆ, ಈ ಕಾನೂನು ಚೀನಾದ ಕಂಪನಿಗಳು ಮಾಹಿತಿಯನ್ನು ಹೇಗೆ ಸಂಗ್ರಹಿಸಬೇಕು ಹಾಗೂ ಅದರ ಮಾನದಂಡಗಳನ್ನು ಹೊಂದಿದೆ.
* ಈ ಹಿಂದೆ ಯಾಹೂ(Yahoo) 2007 ರಲ್ಲಿ ಇಬ್ಬರು ಚೀನಾ ದೇಶದ ಭಿನ್ನಮತೀಯರ ಮಾಹಿತಿಯನ್ನು ಬೀಜಿಂಗ್‌ಗೆ ಹಸ್ತಾಂತರಿಸಿತ್ತು, ಇದರಿಂದಾಗಿ ಈ ಭಿನ್ನಮತೀಯರನ್ನು ಸೆರೆಮನೆಗೆ ಕಳುಹಿಸಲು ಕಾರಣವಾಯಿತು, ಇದಾದ ಬಳಿಕ ಯಾಹೂ ಚೀನಾದಲ್ಲಿನ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತು, ಹಾಗೂ 2015 ರಲ್ಲಿ ಚೀನಾದ ಬೀಜಿಂಗ್‌ನಲ್ಲಿರುವ ತನ್ನ ಕಚೇರಿಯನ್ನು ಸ್ಥಗಿತಗೊಳಿಸಿತು.

## ಅಫ್ಘಾನಿಸ್ತಾನದಲ್ಲಿ ವಿದೇಶೀ ಕರೆನ್ಸಿ ಸಂಪೂರ್ಣ ನಿಷೇಧ



* ಇತ್ತೀಚಿಗೆ ತಾಲಿಬಾನಿಗಳು ಅಫ್ಘಾನಿಸ್ತಾನವನ್ನು ತಮ್ಮ ವಶಕ್ಕೆ ಪಡೆದುಕೊಂಡಿವೆ, ಇದೀಗ ತಾಲಿಬಾನಿಗಳು ಅಫ್ಘಾನಿಸ್ತಾನದಲ್ಲಿ ವಿದೇಶೀ ಕರೆನ್ಸಿ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವದಾಗಿ ಘೋಷಣೆ ಮಾಡಿದೆ.
* ಪ್ರಸ್ತುತ ಅಫ್ಘಾನ್ ದೇಶದ ಹಿತಾಸಕ್ತಿಯನ್ನು ಕಾಯುವ ದೃಷ್ಟಿಯಿಂದ, ದೇಶದ ಜನರು ತಮ್ಮ ಪ್ರತಿದಿನದ ವ್ಯವಹಾರದಲ್ಲಿ ಅಫ್ಘಾನಿಸ್ತಾನದ ಕರೆನ್ಸಿಯನ್ನು ಬಳಸಬೇಕು ಎಂದು ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್ ತಿಳಿಸಿದ್ದಾರೆ, ಹಾಗೂ ಈ ನಿರ್ಣಯವನ್ನು ಜಾರಿ ಮಾಡಿದ್ದಾರೆ.
*ಒಂದುಅಫ್ಘಾನ್ಹಣ0.011ಯುಎಸ್ಡಾಲರ್‌ಗೆಸಮವಾಗಿದೆ,ಹಾಗೂ ಒಂದು ಅಫ್ಘಾನ್ ಹಣ 1.87 ಪಾಕಿಸ್ತಾನ ರೂ.ಗೆ ಸಮವಾಗಿದೆ ಎಂದು ತಿಳಿದು ಬಂದಿದೆ, ಈ ನಿಟ್ಟಿನಲ್ಲಿ ತಾಲಿಬಾನ್ ಸರ್ಕಾರವು ವಿದೇಶೀ ಕರೆನ್ಸಿ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದುತಾಲಿಬಾನ್‌ತಿಳಿಸಿದೆ.

## ಭಾರತ ಜಪಾನ್ ದೇಶಗಳು ಬಾಹ್ಯಾಕಾಶ ನೀತಿಯ ವಿಚಾರ ವಿನಿಮಯ



* ಪ್ರಸ್ತುತ ಭಾರತ ಹಾಗೂ ಜಪಾನ್ ದೇಶಗಳು ಮುಕ್ತವಾಗಿ ಬಾಹ್ಯಾಕಾಶ ನೀತಿಗಳ ಬಗೆಗಿನ ಮಾಹಿತಿಯನ್ನು ವಿನಿಮಯ ಮಾಡಿಕೊಂಡಿವೆ, ಅಷ್ಟೇ ಅಲ್ಲದೇ ಬಾಹ್ಯಾಕಾಶ ಕ್ಷೇತ್ರದ ಅಂತಾರಾಷ್ಟ್ರೀಯ ಬೆಳವಣಿಗೆಗಳ ವಿಷಯಗಳನ್ನು ಚರ್ಚಿಸಿವೆ.
* ಭಾರತ ಮತ್ತು ಜಪಾನ್ ಈ ಉಭಯ ದೇಶಗಳು ಬಾಹ್ಯಾಕಾಶ ಉದ್ಯಮದ ವ್ಯಾಪಾರ ಒಪ್ಪಂದಗಳಿಗೆಅನುಮತಿನೀಡಿವೆ.

## ನಗರ ವ್ಯಾಪಾರಿಗಳಿಗೆ 'ದೆಹಲಿ ಬಜಾರ್' ವೆಬ್‌ಪೋರ್ಟಲ್ ಆರಂಭಿಸಿದ ಕೇಜ್ರಿವಾಲ್



* ಪ್ರಸ್ತುತ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ದೆಹಲಿ ನಗರದ ವ್ಯಾಪಾರಿಗಳು ತಮ್ಮ ಉತ್ಪನ್ನಗಳ ಮಾರಾಟಕ್ಕೆ ಸಹಾಯವಾಗುವ ನಿಟ್ಟಿನಲ್ಲಿ 'ದೆಹಲಿ ಬಜಾರ್' ವೆಬ್ ಪೋರ್ಟಲ್ ಅಭಿವೃದಿಪಡಿಸಲಾಗುತ್ತದೆ ಎಂದು ತಿಳಿಸಿದ್ದಾರೆ.
*ಈ'ದೆಹಲಿ ಬಜಾರ್'ವೆಬ್‌ಪೋರ್ಟಲ್‌ಮುಂದಿನ ಆಗಸ್ಟ್ ವೇಳೆಗೆ ಸಿದ್ಧವಾಗುವ ಎಲ್ಲ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ, ಈ ಜಾಲತಾಣದಿಂದ ವ್ಯಾಪಾರಿಗಳು ಮತ್ತು ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ದೇಶೀಯವಾಗಿ ಹಾಗೂ ವಿದೇಶಕ್ಕೂ ಮಾರಾಟ ಮಾಡಬಹುದು ಎಂದು ಮುಖ್ಯಮಂತ್ರಿ ಕೇಜ್ರಿವಾಲ್ ಅವರುತಿಳಿಸಿದ್ದಾರೆ.

## ಪೊಲೀಸ್ ಸಿಬ್ಬಂದಿಗೆ ವಾರದ ರಜೆ ಘೋಷಣೆ ಮಾಡಿದ ತಮಿಳುನಾಡುಸರ್ಕಾರ



* ತಮಿಳನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಆದೇಶದ ಮೇರೆಗೆ ತಮಿಳುನಾಡು ರಾಜ್ಯದಲ್ಲಿನ ಪೊಲೀಸ್ ಸಿಬ್ಬಂದಿಗಳಿಗೆ ಇದೀಗ ವಾರದ ರಜೆಯನ್ನು ನೀಡಲು ಆದೇಶವನ್ನು ಹೊರಡಿಸಲಾಗಿದೆ ಸರ್ಕಾರ ಮಾಹಿತಿ ನೀಡಿದೆ.
* ಈ ವಾರದ ರಜೆ ಆದೇಶವು ಗ್ರೇಡ್ II ಹಂತದ ಕಾನ್‌ಸ್ಟೆಬಲ್‌ಗಳಿಂದ, ಹೆಡ್ ಕಾನ್‌ಸ್ಟೆಬಲ್‌ಗಳವರೆಗಿನ ಪೊಲೀಸ್ ಸಿಬ್ಬಂದಿಗೆ ಅನ್ವಯವಾಗಲಿದೆ ಎಂದು ತಿಳಿಸಿದ್ದಾರೆ.
* ಪೊಲೀಸ್ ಸಿಬ್ಬಂದಿಗಳಿಗೆ ವಾರದ ರಜೆ ನೀಡುವದರಿಂದ ಅವರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ಹಾಗೂ ಕುಟುಂಬದ ಜೊತೆಗೆ ಸಮಯ ಕಳೆಯಲು ಸಹಾಯ ಮಾಡಲಿದೆ ಎಂದು ಮುಖ್ಯಮಂತ್ರಿಗಳುತಿಳಿಸಿದ್ದಾರೆ.

## ಭಾರತದ'ಕೋವ್ಯಾಕ್ಸಿನ್'ಗೆWHOಮನ್ನಣೆ



* ಇದೀಗ WHO ದಿಂದ ಭಾರತದ ಕೋವ್ಯಾಕ್ಸಿನ್ ಲಸಿಕೆಗೆ ಮನ್ನಣೆ ಸಿಕ್ಕಿದೆ, ಹಾಗೂ ತುರ್ತು ಬಳಕೆಗೆ ಅನುಮೋದನೆ ನೀಡಿದೆ.
* ಇದೀಗ ವಿಶ್ವ ಆರೋಗ್ಯ ಸಂಸ್ಥೆ ಕೋವ್ಯಾಕ್ಸಿನ್ ಲಸಿಕೆಯನ್ನು ತುರ್ತು ಬಳಕೆಯ ಪಟ್ಟಿಗೆ ಅಧಿಕೃತವಾಗಿ ಸೇರಿಸಿದೆ, ಇದರಿಂದಾಗಿ ಭಾರತದ ಕೋವ್ಯಾಕ್ಸಿನ್ ಲಸಿಕೆಗೆ ಜಾಗತಿಕ ಮನ್ನಣೆ ಲಭಿಸಿದೆ.
* ಪ್ರಸ್ತುತ ಭಾರತ್ ಬಯೋಟೆಕ್ ಸಂಸ್ಥೆಯು ಈ ಕೋವ್ಯಾಕ್ಸಿನ್ ರೋಗಲಕ್ಷಣದ COVID 19 ವಿರುದ್ಧ ಶೇ.77.8 ರಷ್ಟು ಪರಿಣಾಮಕಾರಿಯಾಗಿ ಹೋರಾಡಲು ಯಶಸ್ವಿಯಾಗಿದೆ, ಅಷ್ಟೇ ಅಲ್ಲದೇ ಹೊಸ ತಳಿ ಡೆಲ್ಟಾದ ವಿರುದ್ಧ ಶೇ.65.2 ರಷ್ಟು ಪರಿಣಾಮಕಾರಿಯಾಗಿ ಹೋರಾಡಲಿದೆ ಎಂದು ಸಂಸ್ಥೆ ತಿಳಿಸಿದೆ.
* ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್ 19 ಸೋಂಕಿತರ ತುರ್ತು ಚಿಕಿತ್ಸೆ ಲಸಿಕೆಗಳ ಪಟ್ಟಿಗೆ ಈ ಮೊದಲು ಅಸ್ಟ್ರಾಜೆನೆಕಾ ಮತ್ತು ಸೀರಮ್ ಇನ್‌ಸ್ಟಿಟ್ಯೂಟ್‌ನ ಕೋವಿಶೀಲ್ಡ್'ನ್ನು ಸೇರ್ಪಡೆ ಯಾಗಿದ್ದವು, ಇದೀಗ ಕೋವ್ಯಾಕ್ಸಿನ್ ಲಸಿಕೆ ಸೇರ್ಪಡೆಯಾಗಿದೆ.
* ಪ್ರಸ್ತುತ ಕೋವಿಡ್ 19 ಸೋಂಕಿತರ ತುರ್ತು ಚಿಕಿತ್ಸೆಲಸಿಕೆಗಳಪಟ್ಟಿಗೆಸೇರ್ಪಡೆಯಾಗಿರುವಭಾರತದ 2ನೇಲಸಿಕೆಇದಾಗಿದೆ.


## ಇಸ್ರೇಲ್‌ನಿಂದಅಧಿಕೃತಗೊಂಡಪೆಲೆಸ್ತೀನಿಯರಮನೆಗಳು



* ಪ್ರಸ್ತುತ ಇಸ್ರೇಲ್ ನ ಆಕ್ರಮಿತ ಪಶ್ಚಿಮದಂಡೆಯಲ್ಲಿನ ಯೆಹೂದಿ ನಿವಾಸಿಗಳಿಗೆ 3000 ವಸತಿ ಮನೆಗಳ ನಿರ್ಮಾಣ ಯೋಜನೆಯನ್ನು ಘೋಷಣೆ ಮಾಡಿತ್ತು, ಇದೀಗ ಇಸ್ರೇಲ್ ಈ ಪ್ರದೇಶದಲ್ಲಿನ

ಪೆಲೆಸ್ತೀನಿಯರ 1,300 ಮನೆಗಳನ್ನು ಅಧಿಕೃತಗೊಳಿಸಿದೆ.
* ಅಮೇರಿಕ ರಾಷ್ಟ್ರದ ಜೊತೆಗಿನ ಭಿನ್ನಮತ ಕಡಿಮೆಗೊಳಿಸಲು, ಮತ್ತು ಮೈತ್ರಿಕೂಟದ ಮಿತ್ರಪಕ್ಷಗಳ ಅಸಮಾಧಾನವನ್ನು ಬಗೆಹರಿಸಿಕೊಳ್ಳಲು ಇಸ್ರೇಲ್ ಸರ್ಕಾರವು ತಿಳಿಸಿದೆ, ಆದರೆ ಇದೀಗ ಇಸ್ರೇಲ್ ಅಧಿಕೃತಗೊಳಿಸಿದ ಮನೆಗಳು ಅಲ್ಪಪ್ರಮಾಣದ್ದಾಗಿವೆ ಎಂದು ತಿಳಿದು ಬಂದಿದೆ.
* ಇಸ್ರೇಲ್ ಸರ್ಕಾರವು ಇದೀಗ ಪಶ್ಚಿಮ ದಂಡೆಯಲ್ಲಿ ಪೆಲೆಸ್ತೀನಿಯನ್ನರಿಗೆ ಮನೆ ನಿರ್ಮಿಸಲು ಅನುಮತಿ ನೀಡಲಿದೆ ಎಂದು ಇಸ್ರೇಲ್‌ನ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.
* ಈ ಹಿಂದೆ ಇಸ್ರೇಲ್ 1967 ರ ಮಧ್ಯಪ್ರಾಚ್ಯ ಯುದ್ಧದಲ್ಲಿ ಈ ಪಶ್ಚಿಮದಂಡೆ ಪ್ರದೇಶವನ್ನು ತನ್ನ ವಶಕ್ಕೆ ಪಡೆದುಕೊಂಡಿದೆ.
* ಈ ಪಶ್ಚಿಮದಂಡೆ ಪ್ರದೇಶದಲ್ಲಿ ಸರಿ ಸುಮಾರು 2.5 ಬಿಲಿಯನ್ ಪೆಲೆಸ್ತೀನಿಯರು ಹಾಗೂ 5 ಲಕ್ಷ ಯಹೂದಿಗಳುವಾಸವಾಗಿದ್ದಾರೆ.

## ರಾಜ್ಯದಎಲ್ಲಾಸರ್ಕಾರಿಶಾಲೆಗಳಶಿಕ್ಷಕರಿಗೆಗುರುತಿನಚೀಟಿ




* ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರಿಗೆ ಗುರುತಿನ ಚೀಟಿಗಳನ್ನು ವಿತರಣೆ ಮಾಡಲು ಸಾರ್ವಜನಿಕ ಶಿಕ್ಷಣ ಇಲಾಖೆಯು ಮುಂದಾಗಿದೆ.
* ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರು ಇದೀಗ ರಾಜ್ಯದಲ್ಲಿನ ಪ್ರತಿಯೊಬ್ಬ ಶಿಕ್ಷಕರಿಗೆ ಗುರುತಿನ ಚೀಟಿಗಾಗಿ ತಲಾ ಒಬ್ಬೊಬ್ಬ ಶಿಕ್ಷಕರಿಗೆ 50 ರೂ.ಗಳಂತೆ ಒಟ್ಟು 99.09 ಲಕ್ಷ ರೂ. ಹಣವನ್ನು ಬಿಡುಗಡೆಗೊಳಿಸಿದ್ದಾರೆ.
* ಯಾವುದೇ ಸರ್ಕಾರಿ ಕಚೇರಿಗೆ ಸಾರ್ವಜನಿಕರು ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಅಗತ್ಯವಿರುವ ನೌಕರರನ್ನು ಸುಲಭವಾಗಿ ಗುರುತಿಸಿ ಭೇಟಿಯಾಗಲು ಎಲ್ಲಾ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಗುರುತಿನ ಚೀಟಿಗಳನ್ನು ವಿತರಣೆಮಾಡಲು ಮುಂದಾಗಿದೆ.

## ಭಾರತದಿಂದನೆಟ್‌ಝೀರೋಗುರಿ2070ಕ್ಕೆ



* ಪ್ರಸ್ತುತ ಭಾರತವು ಜಾಗತಿಕ ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸುವ ನೆಟ್ ಝೀರೋ ಗುರಿಯನ್ನು 2070 ಕ್ಕೆ ತಲುಪಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹವಾಮಾನ ವೈಪರೀತ್ಯ ತಡೆ ಸಮಾರಂಭದಲ್ಲಿ ಘೋಷಣೆ ಮಾಡಿದರು.
* 2050 ರ ವೇಳೆಗೆ ಅಮೇರಿಕ ಮತ್ತು ಐರೋಪ್ಯ ದೇಶಗಳು ನೆಟ್ ಝೀರೊ ಗುರಿಯನ್ನು ತಲುಪುವುದಾಗಿ ತಿಳಿಸಿವೆ, ಹಾಗು ಚೀನಾ ದೇಶವು 2060 ಕ್ಕೆ ನೆಟ್ ಝೀರೊ ಗುರಿಯನ್ನು ತಲುಪುವುದಾಗಿ ತಿಳಿಸಿದೆ.
* ಅಭಿವೃದ್ಧಿ ಹೊಂದಿದ ದೇಶಗಳು ಭಾರತಕ್ಕೆ 2070 ರ ವೇಳೆಗೆ ನೆಟ್ ಝೀರೊ ಗುರಿ ತಲುಪಲು ಆರ್ಥಿಕ ನೆರವು ನೀಡಬೇಕು, ಅಷ್ಟೇ ಅಲ್ಲದೇ ಅಭಿವೃದ್ಧಿಶೀಲ ದೇಶಗಳು ಸುಮಾರು 75 ಲಕ್ಷ ಕೋಟಿ ನೆರವು ನೀಡಬೇಕು ಎಂದು ತಿಳಿಸಲಾಗಿದೆ.
* ಭಾರತ ದೇಶದಲ್ಲಿ 2030 ರ ಅವಧಿಗೆ 450 500 ಗಿಗಾವಾಟ್ ನಷ್ಟು ವಿದ್ಯುತ್ ನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದನೆ ಮಾಡಲಾಗುತ್ತದೆ, ಅಷ್ಟೇ ಅಲ್ಲದೇ 2030 ರ ಸಮಯಕ್ಕೆ ಭಾರತಕ್ಕೆ ಅಗತ್ಯವಿರುವ ವಿದ್ಯುತ್‌ನಲ್ಲಿ ಶೇ. 50 ರಷ್ಟು ವಿದ್ಯುತ್ ನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದನೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಭಾರತವು 2030ರ ವೇಳೆಗೆ ವಾರ್ಷಿಕ ಇಂಗಾಲ ಹೊರಸೂಸುವಿಕೆಯಲ್ಲಿ ಸುಮಾರು 100 ಕೋಟಿ ಟನ್‌ಗಳಷ್ಟು ಕಡಿಮೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಭಾರತದೇಶದಲ್ಲಿನ ಶೇ.79 ರಷ್ಟು ಟ್ರಕ್‌ಗಳು 2070 ರ ವೇಳೆಗೆ ವಿದ್ಯುತ್ ಚಾಲಿತವಾಗಿರಬೇಕು, ಹಾಗೂ ಶೇ. 21 ರಷ್ಟು ಟ್ರಕ್‌ಗಳು ಜಲಜನಕದ ಸೆಲ್ ಗಳಿಂದ ಚಾಲಿತವಾಗಿರಬೇಕುಎಂದಿದ್ದಾರೆ.

## HALನಿಂದಭಾರತೀಯಸೇನೆಗೆಶಸ್ತ್ರಾಸ್ತ್ರ



* ಪ್ರಸ್ತುತ ಭಾರತೀಯ ಸೇನೆಗೆ ಹಿಂದೂಸ್ತಾನ್ ಏರೋನಾಟಿಕ್ಸ್(HAL)ಲಿಮಿಟೆಡ್ ನಿಂದ 7,965 ಕೋಟಿ ರೂಪಾಯಿ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಖರೀದಿಸುವ ಪ್ರಸ್ತಾವನೆಗೆ ಕೇಂದ್ರ ರಕ್ಷಣ ಸಚಿವಾಲಯವು ಸಮ್ಮತಿಯನ್ನು ನೀಡಿದೆ.
* ಕೇಂದ್ರ ರಕ್ಷಣ ಸ್ವಾಧೀನ ಮಂಡಳಿಯ HAL ನಿಂದ 12 ಕಡಿಮೆ ತೂಕದ ಹೆಲಿಕಾಪ್ಟರ್‌ಗಳನ್ನು ಖರೀದಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ, ಅಷ್ಟೇ ಅಲ್ಲದೇ ಮಿಡ್ ಲೈಫ್ ಅಪ್‌ಗ್ರೇಡೇಶನ್ ಆಫ್ ಡಾರ್ನಿಯರ್ ಏರ್‌ಕ್ರಾಫ್ಟ್ ಖರೀದಿಗೂ ಕೇಂದ್ರ ಅನುಮೋದನೆ ನೀಡಿದೆ.
* ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (HAL) ನಿಂದ ಲಿಂಕ್ಸ್ ಯು2 ನಾವಲ್ ಗನ್‌ಫೈರ್ ಕಂಟ್ರೋಲ್ ಸಿಸ್ಟಂ ಖರೀದಿಗೆ ಕೇಂದ್ರ ರಕ್ಷಣ ಸಚಿವಾಲಯ ಅನುಮೋದನೆ ನೀಡಿದೆಎಂದುತಿಳಿದುಬಂದಿದೆ.

## 05- 11- 2021

## 'ದಿಪ್ರಾಮಿಸ್'ಕೃತಿಗೆಬೂಕರ್‌ಪ್ರಶಸ್ತಿಪಡೆದಲೇಖಕಡೇಮನ್



* ದಕ್ಷಿಣ ಆಫ್ರಿಕಾದ ಲೇಖಕ ಡೇಮನ್ ಗಾಲ್ಗಟ್ ಅವರು ರಚಿಸಿರುವ ಕಾದಂಬರಿ 'ದಿ ಪ್ರಾಮಿಸ್' ಕೃತಿಗೆ ಬೂಕರ್ ಪ್ರಶಸ್ತಿಗೆ ಆಯ್ಕೆಯಾಗಿದೆ.
* ಲೇಖಕ ಡೇಮನ್ ಗಾಲ್ಗಟ್ ಅವರು ಈ ಕಾದಂಬರಿ ದಕ್ಷಿಣ ಆಫ್ರಿಕಾ ರಾಷ್ಟ್ರದಲ್ಲಿನ ವರ್ಣಭೇದ ನೀತಿ ಹಾಗೂ ಬಿಳಿಯ ವರ್ಣದ ಕುಟುಂಬದ ನೀತಿ ಕಥೆಯನ್ನು ಒಳಗೊಂಡಿದೆ.
* ಪ್ರಸ್ತುತ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ಕಥೆಯನ್ನು ಹೊಂದಿರುವ 'ದಿ ಪ್ರಾಮಿಸ್' ಕೃತಿಗೆ ಬ್ರಿಟನ್‌ನ ಬೂಕರ್ ಪ್ರಶಸ್ತಿ ಲಭಿಸಿದೆ, ಈ ಬೂಕರ್ ಪ್ರಶಸ್ತಿಯು 50 ಲಕ್ಷ ರೂ. ಬಹುಮಾನವನ್ನು ಹೊಂದಿರಲಿದೆ.
* ದಕ್ಷಿಣ ಆಫ್ರಿಕಾದ ಲೇಖಕ ಡೇಮನ್ ಗಾಲ್ಗಟ್ ಅವರ ಕಾದಂಬರಿಯು ಈ ಬೂಕರ್ ಪ್ರಶಸ್ತಿಯ ಆಯ್ಕೆ ಪಟ್ಟಿಗೆ ಈ ಮೊದಲು ಎರಡು ಬಾರಿ ಸೇರ್ಪಡೆಯಾಗಿತ್ತು, ಇದೀಗ 3ನೇಬಾರಿಗೆ ಈ ಪ್ರಶಸ್ತಿ ಲಭಿಸಿದೆ.
* ಇದೇ ಲೇಖಕನ 'ದಿ ಗುಡ್ ಡಾಕ್ಟರ್' ಹಾಗೂ 'ಇನ್ ಎ ಸ್ಟ್ರೇಂಜ್ ರೂಂ' ಕೃತಿಗಳು ಕ್ರಮವಾಗಿ 2003 ಮತ್ತು 2010ರಲ್ಲಿ ಈ ಬೂಕರ್ ಪ್ರಶಸ್ತಿ ಆಯ್ಕೆ ಪಟ್ಟಿಗೆ ಸೇರಿಕೊಂಡಿದ್ದವು.
* ಈ ಮೊದಲು ಅಂದರೆ 1969ರಿಂದ ಇಂಗ್ಲಿಷ್‌ನಲ್ಲಿ ಪ್ರಕಟವಾಗಿರುವ ಕೃತಿಗಳಿಗೆ ಬೂಕರ್ ಪ್ರಶಸ್ತಿಗಳನ್ನೂ ಪ್ರಧಾನಮಾಡಲಾಗುತ್ತಿದೆ.

## ಮಹಾತ್ಮ ಗಾಂಧಿಜೀ ಚಿತ್ರವಿರುವ ನಾಣ್ಯ ಬಿಡುಗಡೆಮಾಡಿದ ಯುಕೆ (UK)



* ಇದೀಗ ಯುಕೆ(UK) ರಾಷ್ಟ್ರವು ದೀಪಾವಳಿಯ ಹಬ್ಬದಂದು ಮಹಾತ್ಮಾ ಗಾಂಧಿಜೀ ಚಿತ್ರವಿರುವ 5 ಪೌಂಡ್. ನಾಣ್ಯವನ್ನು ಯುಕೆಯಲ್ಲಿ ಬಿಡುಗಡೆಗೊಳಿಸಲಾಗಿದೆ, ಈ ನಾಣ್ಯವು ಮಹಾತ್ಮಾ ಗಾಂಧಿಜೀ ಅವರ ಜೀವನ ಮತ್ತು ಪರಂಪರೆಯನ್ನು ತೋರಲಿದೆ ಎಂದಿದ್ದಾರೆ.
* ಯುಕೆ(UK) ರಾಷ್ಟ್ರದ ಚಾನ್ಸಲರ್ ರಿಷಿ ಸುನಕ್ ಅವರು ಮಹಾತ್ಮಾ ಗಾಂಧಿಜೀ ಅವರು 5 ಪೌಂಡ್. ನಾಣ್ಯವನ್ನು ಬಿಡುಗಡೆ ಗೊಳಿಸಿದರು.
* ಪ್ರಸ್ತುತ ಭಾರತದ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ಗಾಂಧಿಜೀ ಅವರು ಈ ನಾಣ್ಯವು ಬಿಡುಗಡೆಯಾಗಿದೆ, ಈ ನಾಣ್ಯವು ಚಿನ್ನ ಹಾಗೂ ಬೆಳ್ಳಿಯ ಮಾನದಂಡಗಳಲ್ಲಿ ಲಭ್ಯವಿದೆ.
*ಈನಾಣ್ಯವನ್ನುಹೀನಾಗ್ಲೋವರ್ಅಭಿವೃದ್ಧಿಪಡಿಸಿದ್ದಾರೆ.

## ಕೇಂದ್ರಸರ್ಕಾರದಿಂದತೈಲಬೆಲೆಇಳಿಕೆ




* ಕೇಂದ್ರ ಸರ್ಕಾರವು ಇತ್ತೀಚಿಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕ್ರಮವಾಗಿ 5 ರೂ. ಮತ್ತು 10 ರೂ. ಇಳಿಕೆ ಮಾಡಿದೆ, ಇದರಿಂದಾಗಿ ಸಾರ್ವಜನಿಕರ ಮುಖದಲ್ಲಿ ಸಂತಸ ಮೂಡಿದೆ.
* ಈ ದಿನದವರೆಗೂ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರ 113.93 ರೂ. ಇತ್ತು, ಇದೀಗ ಬೆಲೆ ಇಳಿಕೆಯಾದ ನಂತರ 95.50 ರೂ. ಹಾಗೂ ಲೀಟರ್ ಡೀಸೆಲ್ ದರವು 104.50 ರೂ. ಆಗಿತ್ತು ಬೆಲೆ ಇಳಿಕೆಯಾದ ನಂತರ ಡೀಸೆಲ್ ದರವು 81.50 ರೂ.ಗೆ ಇಳಿಕೆ ಯಾದಂತಾಗಿದೆ.
* ಕೇಂದ್ರ ಸರ್ಕಾರದ ಬೆನ್ನಲೇ ಕರ್ನಾಟಕ ರಾಜ್ಯ ಸರ್ಕಾರವು ಪೆಟ್ರೋಲ್, ಡೀಸೆಲ್ ಮೇಲಿನ ಸುಂಕವನ್ನು ತಲಾ 7 ರೂ ಕಡಿಮೆಮಾಡಲು ತೀರ್ಮಾನಿಸಿದೆ, ಈ ಮಾಹಿತಿಯನ್ನು ಮುಖ್ಯ ಮಂತ್ರಿ ಬೊಮ್ಮಾಯಿ ಅವರು ಟ್ವೀಟರ್ ಮೂಲಕ ತಿಳಿಸಿದ್ದಾರೆ.
* ಈ ತೈಲಗಳ ಬೆಲೆ ಇಳಿಕೆಯಿಂದಾಗಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಅಂದಾಜು 2100 ಕೋಟಿ ರೂಪಾಯಿ ಕೆ.ಎಸ್.ಟಿ ಯಿಂದ ಬೊಕ್ಕಸಕ್ಕೆ ನಷ್ಟವಾಗಲಿದೆ ಎಂದು ತಿಳಿಸಿದ್ದಾರೆ.

## ರಾಹುಲ್ದ್ರಾವಿಡ್ಅವರುಭಾರತಕ್ರಿಕೆಟ್ತಂಡದಮುಖ್ಯಕೋಚ್ಆಗಿ ನೇಮಕ



* ಪ್ರಸ್ತುತ ರಾಹುಲ್ ದ್ರಾವಿಡ್ ಅವರುನ್ನು ಭಾರತ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ ಎಂದು ಬಿಸಿಸಿಐ(BCCI) ಪ್ರಕಟಣೆಯನ್ನು ಹೊರಡಿಸಿದೆ.
* ಬಿಸಿಸಿಐ(BCCI)ನ ಕ್ರಿಕೆಟ್ ಸಲಹಾ ಸಮಿತಿಯು ಭಾರತದ ಮಾಜಿ ವೇಗಿ ಆರ್‌ಪಿ ಸಿಂಗ್ ಹಾಗೂ ಸುಲಕ್ಷಣಾ ನಾಯಕ್ ಅವರನ್ನು ಒಳಗೊಂಡಿದೆ.
* ಈ ಮೊದಲು ಭಾರತೀಯ ಕ್ರಿಕೆಟ್ ತಂಡದ ಮುಖ್ಯ ಕೋಚ್ ಶ್ರೀ ರವಿ ಶಾಸ್ತ್ರಿ ಅವರಾಗಿದ್ದರು, ಇವರ ಮುಂದಾಳತ್ವದಲ್ಲಿ ಭಾರತೀಯ ಕ್ರಿಕೆಟ್ ತಂಡವು ಉತ್ತಮವಾಗಿ ಪ್ರದರ್ಶಿಸಿದೆ.
* ಈ ಮೊದಲು ರಾಹುಲ್ ದ್ರಾವಿಡ್ಅವರು U19 ಮತ್ತು ಇಂಡಿಯಾ A ಸೆಟಪ್‌ನಲ್ಲಿ ಹೆಚ್ಚಿನ ಹುಡುಗರೊಂದಿಗೆ ಕೆಲಸ ಮಾಡಿದ್ದಾರೆ.
* 2018 19ರಲ್ಲಿ ಮೊದಲ ಬಾರಿಗೆ ರವಿ ಶಾಸ್ತ್ರಿ ನೇತೃತ್ವದಲ್ಲಿ ಭಾರತ ತಂಡವು ಆಸ್ಟ್ರೇಲಿಯಾದಲ್ಲಿ ಸರಣಿಯನ್ನು ಜಯಿಸಿತ್ತು, ಮತ್ತೇ 2020 21ರಲ್ಲಿ ಮತ್ತೊಮ್ಮೆ ಸರಣಿಯನ್ನು ಜಯಿಸಿತು, ಅಷ್ಟೇ ಅಲ್ಲದೇ ನ್ಯೂಜಿಲೆಂಡ್ ವಿರುದ್ಧ 5 0 ಅಂತರದಲ್ಲಿ T20I ಸರಣಿಯನ್ನು ಜಯಿಸಿತ್ತು.
* ರಾಹುಲ್ ಅವರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರಾಗಿ ಭಾರತೀಯ ಕ್ರಿಕೆಟ್‌ಗೆ ಸೇವೆ ಸಲ್ಲಿಸಿದ್ದಾರೆ.

## 'ಕೃಷಿ ಉಡಾನ್'ಗೆ ಹುಬ್ಬಳ್ಳಿ ವಿಮಾನ ನಿಲ್ದಾಣ ಆಯ್ಕೆ



* ಉತ್ತರ ಕರ್ನಾಟಕದ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮದ ಬೆಳವಣಿಗೆಗೆ ಸಹಾಯ ನೀಡಲು ಕಾರ್ಗೋ ಸೌಲಭ್ಯವನ್ನು ಇಲ್ಲಿನ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಅಧಿಕೃತವಾಗಿ ಪ್ರಾರಂಭಿಸಲಾಗಿದೆ.
* ಈ ಕಾರ್ಗೋ ಸೌಲಭ್ಯದಿಂದ ತ್ವರಿತವಾಗಿ ಕೊರಿಯರ್, ತುರ್ತು ಅಗತ್ಯದ ಸಾಮಗ್ರಿಗಳನ್ನೂ ಸಾಗಿಸಲು, ಇದರ ಜೊತೆಗೆ ಇ ಕಾಮರ್ಸ್ ಕಂಪನಿಗಳ ಉದ್ಯಮಿಗಳಿಗೆ ಸಹಾಯವಾಗಲಿದೆ.
* ಇದೀಗ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಇಂಡಿಗೊ, ಸ್ಟಾರ್ ಏರ್ ಹಾಗೂ ಅಲಯನ್ಸ್ ಏರ್ ಸಂಸ್ಥೆಗಳು ಪ್ರಯಾಣಿಕ ಸೌಲಭ್ಯಗಳನ್ನು ನೀಡುತ್ತಿವೆ, ಈ ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಚೆನ್ನೈ, ಬೆಂಗಳೂರು, ಮುಂಬೈ, ಕೊಚ್ಚಿ ಹಾಗೂ ಹೈದರಾಬಾದ್ ನಂತಹ ವ್ಯಾಣಿಜ್ಯ ನಗರಗಳಿಗೆ ವಿಮಾನವನ್ನು ಕಲ್ಪಿಸಲಾಗಿದೆ.
* ಕೇಂದ್ರ ವಿಮಾನಯಾನ ಸಚಿವಾಲಯ 2021 22ರ ಬಜೆಟ್‌ನಲ್ಲಿ ರೈತರ ಉತ್ಪನ್ನಗಳನ್ನು ವೇಗವಾಗಿ ದೇಶ ಮತ್ತು ವಿದೇಶಕ್ಕೆ ರವಾನಿಸಲು ದೇಶದಲ್ಲಿನ 53 ವಿಮಾನ ನಿಲ್ದಾಣಗಳಲ್ಲಿ ಕೃಷಿ ಉಡಾನ್ ಸೌಲಭ್ಯ ಪ್ರಾರಂಭಿಸಲಾಗುತ್ತದೆ ಎಂದು ತಿಳಿಸಲಾಗಿತ್ತು.
* ಈ ಕಾರ್ಗೋ ಸೇವೆಯಿಂದ ವೇಗವಾಗಿ ಸಾಮಗ್ರಿಗಳನ್ನು ತರಿಸಿಕೊಳ್ಳಲು ಮತ್ತು ರವಾನಿಸಲು ಸಹಾಯವಾಗಲಿದೆಎಂದುತಿಳಿಸಿದ್ದಾರೆ.

## ಜಾಗತಿಕಪವರ್ಗ್ರಿಡ್ಯೋಜನೆಗೆಚಾಲನೆ



* ಭಾರತ ಮತ್ತು ಬ್ರಿಟನ್ ದೇಶಗಳು ವಿಶ್ವದ ಬಡ ರಾಷ್ಟ್ರಗಳಿಗೆ ನವೀಕರಿಸಬಹುದಾದ ಮೂಲದ ವಿದ್ಯುತ್'ನ್ನು ಪೂರೈಸುವ ವಿಶ್ವ ಪವರ್ ಗ್ರಿಡ್ ಯೋಜನೆಗೆ ಚಾಲನೆಯನ್ನು ನೀಡಿವೆ.
* ಈ ಉಭಯ ದೇಶಗಳು ಈ ಯೋಜನೆಯನ್ನು ಜಂಟಿಯಾಗಿ ಘೋಷಣೆ ಮಾಡಿವೆ.
*ಸೌರಶಕ್ತಿ ಮೂಲಕ ಅತೀ ಹೆಚ್ಚಿನ ವಿದ್ಯುತ್'ನ್ನು ಉತ್ಪಾದಿಸುವ ದೇಶಗಳು, ಸೌರಶಕ್ತಿ ಲಭ್ಯವಿಲ್ಲದ ದೇಶಗಳಿಗೆ ಅ ಹೆಚ್ಚಿನ ವಿದ್ಯುತ್'ನ್ನು ಪೂರೈಸಲು ಈ ಪವರ್ ಗ್ರಿಡ್ ಯೋಜನೆ ಸಹಾಯ ಮಾಡಲಿದೆ, ಅಷ್ಟೇ ಅಲ್ಲದೇ ಇದರಿಂದಾಗಿ ಇಂಗಾಲದ ಹೊರಸೂಸುವಿಕೆಯನ್ನು ತಡೆಗಟ್ಟಲು ಮತ್ತು ಬಡ ರಾಷ್ಟ್ರಗಳಿಗೆ ನೆರವಾಗಲು ಈ ಪವರ್ ಗ್ರಿಡ್ ಅನುಕೂಲ ಮಾಡಿಕೊಡಲಿದೆ ಎಂದು ತಿಳಿದು ಬಂದಿದೆ.

* ಈ ಜಾಗತಿಕ ಪವರ್ ಗ್ರಿಡ್ ಯೋಜನೆಗೆ ಸುಮಾರು 80 ದೇಶಗಳು ತಮ್ಮ ಬೆಂಬಲ ಸೂಚಿಸಿವೆ.
*ಬ್ರಿಟನ್ ದೇಶವು 'ನೆಟ್‌ಝೀರೋ' ಗುರಿ ಸಾಧಿಸಲು ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಮರುರಚಿಸಲು ಸಿದ್ಧವಾಗಿದೆ ಎಂದು ಬ್ರಿಟನ್ ಹಣಕಾಸು ಸಚಿವ ರಿಷಿ ಸುನಕ್ ಅವರು ತಿಳಿಸಿದ್ದಾರೆ.
* ಬ್ರಿಟನ್ ದೇಶವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ 1,000 ಕೋಟಿ ರೂ. ನೆರವು ನೀಡಲಿದೆ ಎಂದು ತಿಳಿಸಲಾಗಿದೆ.

## ರಾಜ್ಯಗಳಿಗೆಜಿಎಸ್‌ಟಿ(GST)ಪರಿಹಾರಬಿಡುಗಡೆ




* ಪ್ರಸ್ತುತ ಕೇಂದ್ರ ಸರ್ಕಾರವು ರಾಜ್ಯಗಳಿಗೆ ತಮ್ಮ ಆದಾಯದ ಕೊರತೆಯನ್ನು ನಿವಾರಿಸಿಕೊಳ್ಳಲು ಸರಿಸುಮಾರು 17,000 ಕೋಟಿ.ರೂ.ಜಿಎಸ್‌ಟಿ ಪರಿಹಾರವನ್ನು ಬಿಡುಗಡೆ ಮಾಡಿದೆ.
* ಒಟ್ಟಾರೆ 2021 22ರಲ್ಲಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಬಿಡುಗಡೆ ಮಾಡಲಾಗಿರುವ ಜಿಎಸ್‌ಟಿ(GST) ಪರಿಹಾರ ಒಟ್ಟು ಮೊತ್ತ 60,000 ಕೋಟಿ.ರೂ.ಗಳಾಗಿದೆ ಎಂದು ವಿತ್ತ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.
* ವಿತ್ತ ವರ್ಷದಲ್ಲಿ ರಾಜ್ಯಗಳಿಗೆ ಪಾವತಿಸಬೇಕಿರುವ ಜಿಎಸ್‌ಟಿ ಪರಿಹಾರದಲ್ಲಿ 2.59 ಲಕ್ಷ .ಕೋಟಿ.ರೂ.ಗಳ ಕೊರತೆಯನ್ನು ಕೇಂದ್ರಸರ್ಕಾರವು ಆನಂದಾಜಿಸಿ ತಿಳಿಸಿದೆ, ಇದರಲ್ಲಿ 1.59 ಲಕ್ಷ .ಕೋಟಿ.ರೂ.ಗಳನ್ನು ಈ ವರ್ಷ ಸಾಲವಾಗಿ ಪಡೆದುಕೊಳ್ಳಬೇಕಾಗಿದೆಎಂದುತಿಳಿಸಲಾಗಿದೆ.

## ಜೈಭೀಮ್ಮುಖ್ಯಮಂತ್ರಿಪ್ರತಿಭಾವಿಕಾಸಯೋಜನೆ



* ಪ್ರಸ್ತುತ 2021 ರ ಜೈ ಭೀಮ್ ಮುಖ್ಯಮಂತ್ರಿ ಪ್ರತಿಭಾ ವಿಕಾಸ್ ಯೋಜನೆ ಅಡಿಯಲ್ಲಿ ಸರಿಸುಮಾರು 15,000 ವಿದ್ಯಾರ್ಥಿಗಳು ಕೋಚಿಂಗ್ ತರಗತಿಗಳಿಗೆ ದಾಖಲಾಗಿದ್ದಾರೆ.
* ದೆಹಲಿ ಸರ್ಕಾರವು ಜೈ ಭೀಮ್ ಮುಖ್ಯಮಂತ್ರಿ ಪ್ರತಿಭಾ ವಿಕಾಸ್ ಯೋಜನೆಯನ್ನು ಆರಂಭಿಸಿದೆ, ಈ ಯೋಜನೆಯನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಆರಂಭಿಸಲಾಗಿದೆ, ಮುಖ್ಯವಾಗಿ ಈ ಯೋಜನೆಯು ಆರ್ಥಿಕವಾಗಿ ಬಡ ಸಮುದಾಯದಲ್ಲಿನ ಮಕ್ಕಳಿಗಾಗಿ ಆರಂಭಿಸಲಾಗಿದೆ.
* ದೆಹಲಿ ಸರ್ಕಾರವು ವಿದ್ಯಾರ್ಥಿಗಳಿಗೆ ಉಚಿತ ಕೋಚಿಂಗ್, ಹಾಗೂ 2,500 ರೂ. ಪ್ರಯಾಣ ಸ್ಟೈಫಂಡ್ ಹಣವನ್ನು ನೀಡುತ್ತದೆ.
* ವಾರ್ಷಿಕ ರೂ.8 ಲಕ್ಷಕ್ಕಿಂತ ಕಡಿಮೆ ಆದಾಯನ್ನು ಹೊಂದಿರುವ ಕುಟುಂಬವು ಈ ಯೋಜನೆಯ ಉಪಯೋಗಗಳನ್ನು ಪಡೆಯಬಹುದಾಗಿದೆ ಎಂದಿದ್ದಾರೆ.
* ವಿದ್ಯಾರ್ಥಿಗಳು ಈ ಯೋಜನೆ ಅಡಿಯಲ್ಲಿ 46 ಕೋಚಿಂಗ್ ಸೆಂಟರ್‌ಗಳಲ್ಲಿ ಉಚಿತ ಕೋಚಿಂಗ್ ತರಗತಿಯನ್ನು ಪಡೆಯಬಹುದಾಗಿದೆ, ಹಾಗೂ UPSC, CDS, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಪ್ರವೇಶ, ಬ್ಯಾಂಕಿಂಗ್ ಪರೀಕ್ಷೆಗಳು, ಮ್ಯಾನೇಜ್‌ಮೆಂಟ್ ಶಾಲೆಯ ಪರೀಕ್ಷೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನು ನೀಡಲಿದೆ.
* ಈ ಹಿಂದೆ 2018 ರಲ್ಲಿ ಜೈ ಭೀಮ್ ಮುಖ್ಯಮಂತ್ರಿ ಪ್ರತಿಭಾ ವಿಕಾಸ ಯೋಜನೆಯನ್ನು ಆರಂಭಿಸಲಾಗಿದೆ, ಈ ಯೋಜನೆಯನ್ನು ಪ್ರಾರಂಭದ ವರ್ಷದಲ್ಲಿ SC ಮತ್ತು ST ವಿದ್ಯಾರ್ಥಿಗಳಿಗೆ ಮಾತ್ರ ಆರಂಭಿಸಲಾಗಿದೆ, ಮತ್ತೆ 2019 ರಲ್ಲಿ ಈ ಯೋಜನೆಗೆ OBC ಹಾಗೂ EWSವರ್ಗಕ್ಕೆಸೇರಿದವಿದ್ಯಾರ್ಥಿಗಳಿಗೆಯೋಜನೆಯನ್ನುಆರಂಭಿಸಲಾಯಿತು.

# 06- 11- 2021

## 'ಮರೆತುಹೋದ ರಾಜ್ಯಗಳನ್ನು' ಸಂಶೋಧಿಸಲಿರುವ ಸೌದಿ ಅರೇಬಿಯಾ



* ಸೌದಿ ಅರೇಬಿಯಾ ಸಾಮ್ರಾಜ್ಯವು ದಾಡಾನೈಟ್ ಹಾಗೂ ಲಿಹ್ಯನೈಟ್ ನಾಗರಿಕತೆಗಳಿಗೆ ಸಂಬಂಧಿಸಿದ 'ಐದು ಸಾಮ್ರಾಜ್ಯಗಳನ್ನು' ಸಂಶೋಧಿಸಲು ಸಿದ್ಧವಾಗಿದೆ.
* ಫ್ರೆಂಚ್ ಮತ್ತು ಸೌದಿ ಪುರಾತತ್ವಶಾಸ್ತ್ರಜ್ಞರ ತಂಡದಿಂದ ಈ ಸಂಶೋಧನೆ ನಡೆಯಲಿದೆ, ಈ 2 ನಾಗರಿಕತೆಗಳು ಸುಮಾರು 2000 ವರ್ಷಗಳ ಹಿಂದೆ ಪ್ರಮುಖ ಪ್ರಾದೇಶಿಕ ಶಕ್ತಿಗಳಾಗಿದ್ದವು ಎನ್ನಲಾಗಿದೆ, ಹಾಗೂ 100 CE ವರೆಗೆ ಸಾಮ್ರಾಜ್ಯಗಳು ಸರಿಸುಮಾರು 900 ವರ್ಷಗಳವರೆಗೆ ವ್ಯಾಪಿಸಿವೆ.
* ಸೌದಿ ಅರೇಬಿಯಾ ಈ ಹಿಂದೆ 2019 ರಲ್ಲಿ ಅಲ್ ಉಲಾ ಎಂಬ ಪ್ರಮುಖ ಪ್ರವಾಸಿ ತಾಣವನ್ನು ತರೆದಿದೆ, ಈ ತಾಣವು ಸುಮಾರು 2000 ವರ್ಷಗಳಷ್ಟು ಹಳೆಯ ನಗರವಾಗಿದೆ.
*ಇದನ್ನು ಮದೈನ್ ಸಲೇಹ್‌ನ್ನು ಹೆಗ್ರಾ ಎಂದೂ ಕರೆಯುತ್ತಾರೆ, ಇದೊಂದು ಸೌದಿ ಅರೇಬಿಯಾದ ಹೆಜಾಜ್‌ನ ಮದೀನಾ ಪ್ರಾಂತ್ಯದ ಅಲ್ ಉಲಾ ಪ್ರದೇಶದಲ್ಲಿ ನೆಲೆಗೊಂಡಿರುವ ಪುರಾತತ್ತ್ವ ಶಾಸ್ತ್ರದ ತಾಣವಾಗಿದೆ.
* 2008 ರಲ್ಲಿ UNESCO ಮದಾಯಿನ್ ಸಲೇಹ್ ನ್ನು ಪಿತೃತ್ವದ ಸ್ಥಳವೆಂದು ಘೋಷಣೆ ಮಾಡಲಾಗಿದೆ, ಈ ಕಾರಣದಿಂದ ಈ ಸೈಟ್ ಸೌದಿ ಅರೇಬಿಯಾದಮೊದಲವಿಶ್ವತಾಣವಾಗಿದೆ.

## ರಾಷ್ಟ್ರೀಯಆಯುರ್ವೇದದಿನ



* ಆಯುಷ್ ಸಚಿವಾಲಯವು ಪ್ರತಿ ವರ್ಷವು ದೇಶಾದ್ಯಂತ ನವೆಂಬರ್. 2 ರಂದು ರಾಷ್ಟ್ರೀಯ ಆಯುರ್ವೇದ ದಿನವನ್ನು ಆಚರಿಸುತ್ತದೆ.
* ಆಯುರ್ವೇದವು ಇದೊಂದು ಭಾರತ ದೇಶದ ಆರೋಗ್ಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಅಷ್ಟೇ ಅಲ್ಲದೇ ಇದು WHO ದಿಂದ ಸಾಂಪ್ರದಾಯಿಕ ಔಷಧ ವ್ಯವಸ್ಥೆ ಎಂದು ಪರಿಗಣಿಸಲಾಗಿದೆ.
* ಈ ಹಿಂದೆ 2016 ರಲ್ಲಿ ಕೇಂದ್ರ ಆಯುಷ್ ಸಚಿವಾಲಯವು ಧನ್ವಂತರಿ ಜಯಂತಿಯನ್ನು ಆಯುರ್ವೇದ ದಿನ ಎಂದು ಆಚರಿಸಲು ಆರಂಭಿಸಿದೆ.
* 2021 ರ ರಾಷ್ಟ್ರೀಯ ಆಯುರ್ವೇದ ದಿನವನ್ನು 'ಆಯುರ್ವೇದ ಪೋಷಣೆ' ಎಂಬ ಧ್ಯೇಯ ವಾಕ್ಯ ಅಡಿಯಲ್ಲಿ ಆಚರಿಸಲಾಗಿದೆ.
* ಭಗವಾನ್ ಧನ್ವಂತರಿಯು ಆಯುರ್ವೇದ ಔಷಧದ ದೇವರು. ಹೀಗಾಗಿ, ಪ್ರತಿಯೊಬ್ಬರ ಯೋಗಕ್ಷೇಮಕ್ಕಾಗಿ ಪ್ರತಿ ವರ್ಷ ಧನ್ತೇರಸ್ ದಿನವನ್ನು ಆಚರಣೆ ಮಾಡಲಾಗುತ್ತದೆ.

## ವಾರ್ಷಿಕ ಬರ್ಡ್ ಆಫ್ ದಿ ಇಯರ್ ಪ್ರಶಸ್ತಿ ಆಯೋಜಿಸಿದ ನ್ಯೂಜಿಲೆಂಡ್



* ಪ್ರಸ್ತುತ ನ್ಯೂಜಿಲೆಂಡ್‌ನಲ್ಲಿರುವ ಸ್ವತಂತ್ರ ಸಂರಕ್ಷಣಾ ಸಂಸ್ಥೆಯು ಫಾರೆಸ್ಟ್ & ಬರ್ಡ್ ಇತ್ತೀಚಿಗೆ ವಾರ್ಷಿಕ ಬರ್ಡ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಆಯೋಜಿಸಿದೆ.
* 2021 ನೇ ವರ್ಷದವಾರ್ಷಿಕಪಕ್ಷಿಪ್ರಶಸ್ತಿಯನ್ನುನ್ಯೂಜಿಲೆಂಡ್‌ನಸ್ಥಳೀಯಬಾವಲಿಜಾತಿಯ ಪೆಕಪೆಕಾ ಟೌ ರೋವಾ ಪಡೆದುಕೊಂಡಿದೆ.
*ಪೆಕಪೆಕಾ ಟೌ ರೋವಾ ಇದನ್ನು ಉದ್ದ ಬಾಲದ ಬಾವಲಿ ಎನ್ನುತ್ತಾರೆ, ಅಷ್ಟೇ ಅಲ್ಲದೇ ಇದೊಂದು ನ್ಯೂಜಿಲೆಂಡ್‌ನ 2 ಭೂ ಸಸ್ತನಿಗಳಲ್ಲಿ ಒಂದಾಗಿದೆ.
* 2021 ರಲ್ಲಿ ಮೊದಲ ಬಾರಿಗೆ ಈ ಬಾವಲಿಯನ್ನು ಸಂಸ್ಥೆಯು ಸ್ಥಳೀಯ ಸ್ಪರ್ಧೆಗೆ ಪ್ರವೇಶಿಸಲು ಅನುಮತಿಯನ್ನು ನೀಡಿದೆ.
* ನ್ಯೂಜಿಲೆಂಡ್‌ನ ಉದ್ದ ಬಾಲದ ಬ್ಯಾಟ್ ಇದು ಕೂಡ ಒಂದು ನ್ಯೂಜಿಲೆಂಡ್'ನಸ್ಥಳೀಯವಾಗಿ ಉಳಿದು ಕೊಂಡಿರುವ 2 ಜಾತಿಗಳಲ್ಲಿ ಇದು ಒಂದಾಗಿದೆ.
*ಅರಣ್ಯ ಹಾಗೂಪಕ್ಷಿಸಂಸ್ಥೆಯಿಂದವರ್ಷದಹಕ್ಕಿಸ್ಪರ್ಧೆಯನ್ನುಆರಂಭಿಸಲಾಗಿದೆ.

## ಭಾರತವು ಶ್ರೀನಗರ ಶಾರ್ಜಾ ವಿಮಾನ ಹಾರಾಟಕ್ಕೆ ಪಾಕಿಸ್ತಾನ ವಾಯುಪ್ರದೇಶಬಳಸಲುಅನುಮತಿಕೇಳಿದೆ



* ಭಾರತದ ಶ್ರೀನಗರ ಶಾರ್ಜಾ ವಿಮಾನ ಹಾರಾಟವು ಪಾಕಿಸ್ತಾನದ ವಾಯುಪ್ರದೇಶ ಬಳಸಲು ಅನುಮತಿ ಕೋರಿದೆ, ಇದೀಗ ಭಾರತವು ರಾಜತಾಂತ್ರಿಕ ಮಾರ್ಗಗಳ ಮೂಲಕ ಪಾಕಿಸ್ತಾನ ರಾಷ್ಟ್ರಕ್ಕೆ ಮನವಿಯನ್ನು ಮಾಡಿದೆ ಎಂದಿದ್ದಾರೆ.
* ಭಾರತ ಸರ್ಕಾರವು ಶ್ರೀನಗರ ಶಾರ್ಜಾ ನಡುವಿನ ಮಾರ್ಗದ ಸಾಮಾನ್ಯ ಪ್ರಯಾಣಿಕರ ಹಿತಾಸಕ್ತಿಯನ್ನು ಪರಿಗಣಿಸಿ ಈ ಮನವಿಯನ್ನು ಮಾಡಿದೆ ಎನ್ನಲಾಗಿದೆ.
* ಇತ್ತೀಚಿಗೆ ಪಾಕಿಸ್ತಾನ ರಾಷ್ಟ್ರವು 'ಗೋ ಫರ್ಸ್ಟ್' ವಿಮಾನಯಾನ ಸಂಸ್ಥೆಯ ಶ್ರೀನಗರ ಶಾರ್ಜಾ ನಡುವಿನ ವಿಮಾನ ಹಾರಾಟದ ವಾಯುಪ್ರದೇಶವನ್ನು ಬಳಸಲು ಅನುಮತಿ ನಿರಾಕರಿಸಿದೆ, ಈ ಕಾರಣದಿಂದ ಭಾರತ ಸರ್ಕಾರವು ಅನುಮತಿಯನ್ನು ಕೋರಲು ಮುಂದಾಗಿದೆ.
* ಇದೇ ಅಕ್ಟೋಬರ್. 23 ರಿಂದ ಶ್ರೀನಗರ ಮತ್ತು ಶಾರ್ಜಾ ಮಧ್ಯೆ ನೇರ ವಿಮಾನಯಾನವನ್ನು 'ಗೋ ಫರ್ಸ್ಟ್' ವಿಮಾನಯಾನ ಸಂಸ್ಥೆಯು ಆರಂಭಿಸಿದೆ, ಇದನ್ನು 'ಗೋ ಏರ್' ಎಂದು ಕರೆಯುತ್ತಾರೆ.
* ಗೋ ಫರ್ಸ್ಟ್ ಸಂಸ್ಥೆಯ ಶ್ರೀನಗರ ಶಾರ್ಜಾ ಶ್ರೀನಗರ ಸೇವೆಗೆ ಇದೇ ಅಕ್ಟೋಬರ್. 31 ರವರೆಗೆ ಪಾಕಿಸ್ತಾನದ ವಾಯುಪ್ರದೇಶವನ್ನುಬಳಕೆಮಾಡಲಾಗುತ್ತಿತ್ತುಎಂದುಅಧಿಕಾರಿಗಳಮಾಹಿತಿನೀಡಿದ್ದಾರೆ.

## ಅತ್ಯಂತಕಳಪೆಹಾಗೂಉತ್ತಮಆಡಳಿತದರಾಜ್ಯಗಳು



* ಪ್ರಸ್ತುತ ಉತ್ತರ ಪ್ರದೇಶ ರಾಜ್ಯವು ಅತ್ಯಂತ ಕಳಪೆ ಆಡಳಿತವನ್ನು ನಡೆಸುತ್ತಿರುವ ದೊಡ್ಡ ರಾಜ್ಯ ಎಂಬ ಅಪಖ್ಯಾತಿಗೆ ಪಾತ್ರವಾಗಿದೆ.
* ಪ್ರಸ್ತುತ ಬೆಂಗಳೂರು ಮೂಲದ 'ಥಿಂಕ್ ಟ್ಯಾಂಕ್ ಪಬ್ಲಿಕ್ ಎಫೇರ್ಸ್ ಸೆಂಟರ್' ಸಂಸ್ಥೆಯು ರಾಜ್ಯಗಳ ಆಡಳಿತವನ್ನು ಮೌಲ್ಯಮಾಪನವನ್ನು ಸಿದ್ಧಪಡಿಸಿದೆ, ಈ ಸೂಚ್ಯಂಕದ ಪ್ರಕಾರ ಉತ್ತರ ಪ್ರದೇಶ ಸರ್ಕಾರವು ಅತ್ಯಂತ ಕಳಪೆ ಆಡಳಿತವನ್ನು ನೀಡಿದೆ ಎಂದು ತಿಳಿದುಬಂದಿದೆ.
* ಈ ಸೂಚ್ಯಂಕದ ಪ್ರಕಾರ ಉತ್ತರ ಪ್ರದೇಶ ರಾಜ್ಯವು 18 ನೇ ಸ್ಥಾನವನ್ನು ಪಡೆದಿದೆ.
* ಪ್ರಸ್ತುತ ರಾಜ್ಯದ ಬೆಳವಣಿಗೆ,ನೀತಿ ಮತ್ತು ಸುಸ್ಥಿರತೆ ಈ ಮೂರು ಅಂಶಗಳನ್ನು ಆಧರಿಸಿ ರಾಜ್ಯಗಳಿಗೆ ಸಮಗ್ರ ಅಂಕಗಳನ್ನು ನೀಡಲಾಗಿದೆ ಎಂದು ತಿಳಿಸಿದೆ, ಒಟ್ಟು 43 ಸೂಚಕಗಳನ್ನು ಆಧರಿಸಿ ಈ ಯಾರ್ಂಕಿಂಗ್ ನೀಡಲಾಗುತ್ತದೆ ಎಂದು ತಿಳಿಸಿದೆ.
* ಇದೀಗ ಕೇರಳ ರಾಜ್ಯವು ದೇಶದಲ್ಲೇ ಅತ್ಯುತ್ತಮ ಆಡಳಿತವಿರುವ ರಾಜ್ಯಎಂಬ ಖ್ಯಾತಿಯನ್ನು ಪಡೆದುಕೊಂಡಿದೆ, ಅಷ್ಟೇ ಅಲ್ಲದೇ ಕೇರಳ ರಾಜ್ಯವು ನಂ.1 ಸ್ಥಾನವನ್ನು ಪಡೆದುಕೊಂಡಿದೆ.
* ಈ ಹಿಂದೆ ಅಂದರೆ 5 ವರ್ಷಗಳಿಂದ ಪಿಎಸಿಯು ಈ ಯಾರ್ಂಕಿಂಗ್' ನ್ನು ಪ್ರಕಟಿಸಲು ಪ್ರಾರಂಭಿಸಿದೆ, ಆವಾಗಿನಿಂದಲೂ ಕೇರಳ ರಾಜ್ಯವು ಸತತವಾಗಿ ಪ್ರಥಮ ಸ್ಥಾನವನ್ನು ಪಡೆದುಕೊಳ್ಳುತ್ತಾ ಬಂದಿದೆ.
* ಈ ಪೈಕಿ ಕರ್ನಾಟಕ ರಾಜ್ಯವು 4 ನೇಸ್ಥಾನವನ್ನುಪಡೆದುಕೊಂಡಿದೆ.

## ಶ್ರೀಲಂಕಾಕ್ಕೆ100ಟನ್‌ಸಾರಜನಕರಸಗೊಬ್ಬರರವಾನಿಸಿದಭಾರತ



* ಶ್ರೀಲಂಕಾ ಸರ್ಕಾರವು ಸಂಪೂರ್ಣ ಸಾವಯವ ಕೃಷಿ ಸಾಧಿಸುವ ನಿಟ್ಟಿಯಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯನ್ನು ನಿಷೇಧಿಸುವ ನಿರ್ಧಾರವನ್ನು ಕೈಗೊಂಡಿದೆ, ಇದೀಗ ಅಲ್ಲಿನ ರೈತರು ರಸಗೊಬ್ಬರಕ್ಕಾಗಿ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ.
* ಶ್ರೀಲಂಕಾದ ರೈತರ ಪ್ರತಿಭಟನೆ ನಡುವೆ ಇದೀಗ ಭಾರತವು ವಾಯುಪಡೆಯ 2 ವಿಮಾನಗಳ ಮೂಲಕ ಶ್ರೀಲಂಕಾಕ್ಕೆ ನ್ಯಾನೋ ಸಾರಜನಕ ರಸಗೊಬ್ಬರವನ್ನು ರವಾನಿಸಿದೆ.
* ಶ್ರೀಲಂಕಾ ಸರ್ಕಾರದ ವಿನಂತಿಯ ಮೇರೆಗೆ ಭಾರತೀಯ 2 ಐಎಎಫ್ ಸಿ 17 ಗ್ಲೋಬ್‌ಮಾಸ್ಟರ್ ವಿಮಾನಗಳ ಮೂಲಕ 1,00,000 ಕೆಜಿ ನ್ಯಾನೊ ಸಾರಜನಕವನ್ನು ಶ್ರೀಲಂಕಾದ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಿಸಲಾಗಿದೆ ಎಂದು ಭಾರತೀಯ ಹೈಕಮಿಷನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
* ಶ್ರೀಲಂಕಾದಲ್ಲಿ ಪ್ರತಿ ವರ್ಷ ಸಾವಿರಾರು ಜನರು ಮೂತ್ರಪಿಂಡ ಕಾಯಿಲೆಯಿಂದಾಗಿ ಸಾವುಗಳು ಉಂಟಾಗುತ್ತಿವೆಎಂಬಕಾರಣನೀಡಿಶ್ರೀಲಂಕಾಅಧ್ಯಕ್ಷಗೋಟಬಯ ರಾಜಪಕ್ಸೆಅವರು ರಾಸಾಯನಿಕ ಗೊಬ್ಬರದ ಆಮದು ಮಾಡಿಕೊಳ್ಳುವದನ್ನು ಏಪ್ರಿಲ್‌ನಲ್ಲಿ ನಿಷೇಧಿಸಲು ನಿರ್ಧಾರವನ್ನು ತಗೆದುಕೊಂಡಿತ್ತು.

## ಪ್ರಧಾನಿ ಮೋದಿಅವರಿಂದ ಕೇದಾರನಾಥದಲ್ಲಿ ಶ್ರೀ ಆದಿ ಶಂಕರಾಚಾರ್ಯರಪ್ರತಿಮೆಅನಾವರಣ



* ಉತ್ತರಾಖಂಡದ ಕೇದಾರನಾಥದಲ್ಲಿ ಶ್ರೀ ಆದಿಶಂಕರಾಚಾರ್ಯರ ಪ್ರತಿಮೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದ್ದರು.
* ಇತ್ತೀಚಿಗೆ ಪ್ರಧಾನಮಂತ್ರಿ ಮೋದಿ ಅವರು 2 ದಿನಗಳ ಕಾಲ ಕೇದಾರನಾಥ ಪ್ರವಾಸವನ್ನು ಕೈಗೊಂಡಿದ್ದಾರೆ.
* ಶ್ರೀ ಆದಿಶಂಕರಾಚಾರ್ಯರ 12 ಅಡಿ ಪ್ರತಿಮೆಯನ್ನು ಮೈಸೂರಿನ ಖ್ಯಾತ ಶಿಲ್ಪಿ ಯೋಗಿರಾಜ್ ಅವರು ನಿರ್ಮಿಸಿದ್ದಾರೆ, ಈ ಹಿಂದೆ 2013 ರಲ್ಲಿ ಉತ್ತರಾಖಂಡದಲ್ಲಿ ಭಾರೀ ಪ್ರವಾಹ ಉಂಟಾಗಿತ್ತು ಅ ಸಂಧರ್ಭದಲ್ಲಿ ಈ ಪ್ರತಿಮೆಯು ನಾಶವಾಗಿತ್ತು, ಈ ಕಾರಣದಿಂದಾಗಿ ಶ್ರೀ ಗುರು ಶಂಕರಾಚಾರ್ಯರ ಪ್ರತಿಮೆಯನ್ನು ನಿರ್ಮಾಣ ಮಾಡಲು ಸೂಚನೆ ನೀಡಲಾಗಿತ್ತು ಎಂದು ತಿಳಿಸಿದ್ದರು.
* ಮೋದಿ ಅವರು ಶ್ರೀ ಆದಿ ಶಂಕರಾಚಾರ್ಯರ ಪ್ರತಿಮೆ ಅನಾವರಣದ ಜೊತೆಗೆ ಕೇದಾರನಾಥದಲ್ಲಿ 180 ಕೋಟಿ ರೂ ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡಿದರು.
* ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೇದಾರನಾಥದಿಂದ ಜಮ್ಮು ಮತ್ತು ಕಾಶ್ಮೀರದ ರಜೌರಿಯ ನೌಶೇರಾ ಸೆಕ್ಟರ್‌ನ ಮುಂಭಾಗದ ಪ್ರದೇಶವನ್ನು ತಲುಪಿ ಅಲ್ಲಿನ ಯೋಧರೊಂದಿಗೆ ದೀಪಾವಳಿಹಬ್ಬವನ್ನುಆಚರಣೆಮಾಡಿದರು.

## ಕೋವಿಡ್ 19 ಸೋಂಕು ನಿರೋಧಕ ಮಾತ್ರೆಗೆ ಬ್ರಿಟನ್ ಅನುಮೋದನೆ



* ಕೋವಿಡ್ 19 ಸೋಂಕಿನ ವಿರುದ್ಧ ಹೋರಡುವ ಮೋಲ್ನುಪಿರವಿರ್ ಮಾತ್ರೆಗೆ ಬ್ರಿಟನ್ ರಾಷ್ಟ್ರವು ಅನುಮೋದನೆಯನ್ನು ನೀಡಿದೆ, ಇದೀಗ ಬ್ರಿಟನ್ ದೇಶವು ಕೋವಿಡ್ 19 ಸೋಂಕು ನಿರೋಧಕ ಮಾತ್ರೆಗೆ ಅನುಮೋದನೆ ನೀಡಿದ ವಿಶ್ವದ ಮೊದಲ ರಾಷ್ಟ್ರವಾಗಿ ಹೊರಹೊಮ್ಮಿದೆ.
* ಈ ಕೊರೊನಾ ನಿರೋಧಕ ಮಾತ್ರೆಯನ್ನು ಅಮೇರಿಕ ಮೂಲದ ಮರ್ಕ್ ಮತ್ತು ರಿಡ್ಜ್‌ಬ್ಯಾಕ್ ಬಯೋ ಥೆರಪಿಸ್ಟಿಕ್ಸ್ ಕಂಪನಿಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ.
* ಕೊರೊನಾ ಸೋಂಕು ದೃಢಪಟ್ಟಿರುವ ರೋಗಿಗೆ 5ದಿನಗಳ ಒಳಗೆ ದಿನಕ್ಕೆ 2 ಮಾತ್ರೆಗಳ ರೀತಿಯಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ಒಟ್ಟಾರೆ 775 ರೋಗಿಗಳ ಮೇಲೆ ಮೆರ್ಕ್ ಮಾತ್ರೆಗಳ ಕ್ಲಿನಿಕಲ್ ಪ್ರಯೋಗವನ್ನು ನಡೆಸಲಾಗಿದೆ, ಇದರಲ್ಲಿ ಮೊದಲ 29 ದಿನಗಳಲ್ಲಿ ಯಾವುದೇ ವ್ಯಕ್ತಿಯು ಕೂಡ ಕೋವಿಡ್ 19 ಸೋಂಕಿನಿಂದ ಮೃತಪಟ್ಟಿಲ್ಲ ಎಂದು ತಿಳಿಸಿದ್ದಾರೆ.

## ಟಿ 20ವಿಶ್ವಕಪ್‌ಬಳಿಕಕ್ರಿಕೆಟ್‌ಗೆವಿದಾಯಹೇಳಲಿರುವಡ್ವೇನ್‌ಬ್ರಾವೋ



*ವೆಸ್ಟ್‌ಇಂಡೀಸ್‌ಆಲೌರೌಂಡರ್‌ಡ್ವೇನ್‌ಬ್ರಾವೋಅವರುಟಿ 20ವಿಶ್ವಕಪ್‌ಬಳಿಕಅಂತಾರಾಷ್ಟ್ರೀಯಕ್ರಿಕೆಟ್ ಗೆ ವಿದಾಯ ತಿಳಿಸುವದಾಗಿ ಘೋಷಣೆ ಮಾಡಿದ್ದಾರೆ.
* ಇತ್ತೀಚಿಗಷ್ಟೇ ವೆಸ್ಟ್ ಇಂಡೀಸ್ ತಂಡವು ಟಿ 20 ವಿಶ್ವಕಪ್'ನಲ್ಲಿ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಸೋಲು ಅನುಭವಿಸಿ ಟಿ 20 ವಿಶ್ವಕಪ್ ನಿಂದ ಹೊರನಡೆದಿದೆ.
* ಇದೇ ಸಂಧರ್ಭದಲ್ಲಿ ವೆಸ್ಟ್ ಇಂಡೀಸ್ ಆಲೌರೌಂಡರ್ ಡ್ವೇನ್ ಬ್ರಾವೋ ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಘೋಷಣೆ ಮಾಡಲಿದ್ದೇನೆ ಎಂದು ತಿಳಿಸಿದ್ದಾರೆ.
* ಡ್ವೇನ್ ಬ್ರಾವೋ ಅವರು 2006 ರಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಅಂತಾರಾಷ್ಟ್ರೀಯ ಟಿ 20 ಮೂಲಕ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದಾರೆ.
* ಡ್ವೇನ್ ಬ್ರಾವೋ ಅವರು ಒಟ್ಟಾರೆ ಇಲ್ಲಿಯತನಕ 90 ಪಂದ್ಯಗಳಲ್ಲಿ ಆಟವಾಡಿದ್ದಾರೆ, ಅವುಗಳಲ್ಲಿ 1,245 ರನ್ ಸಿಡಿಸಿ, 78 ವಿಕೆಟ್'ಗಳನ್ನೂ ಪಡೆದುಕೊಂಡಿದ್ದಾರೆ.
* ಈ ಹಿಂದೆ 2018 ರಲ್ಲಿ ಡ್ವೇನ್ ಬ್ರಾವೋ ಅವರು ಕ್ರಿಕೆಟ್ ಗೆ ವಿದಾಯವನ್ನು ತಿಳಿಸಿದ್ದರು, ಮತ್ತೇ 2019 ರಲ್ಲಿ ತಮ್ಮ ವಿದಾಯವನ್ನು ಮರಳಿಪಡೆದು ತಂಡಕ್ಕೆ ಸೇರಿಕೊಂಡರು.

## ಅಯೋಧ್ಯೆಯಲ್ಲಿನ ರಾಮ ಮಂದಿರ 2023 ರ ಡಿಸೆಂಬರ್ ವೇಳೆಗೆಸಿದ್ಧವಾಗಲಿದೆಎಂದವಿಶ್ವಹಿಂದೂಪರಿಷತ್

* ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ರಾಮ ಮಂದಿರವು 2023 ರ ಡಿಸೆಂಬರ್ ವೇಳೆಗೆ ಸಿದ್ಧವಾಗಲಿದೆ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಕೇಂದ್ರೀಯ ಸಹಮಂತ್ರಿಯಾದ ಗೋಪಾಲ್ ತಿಳಿಸಿದ್ದಾರೆ.
* ಗೋಪಾಲ್ ಅವರು ವಿಶ್ವ ಹಿಂದೂ ಪರಿಷತ್ ನಾಯಕ ಮತ್ತು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಯಾದ ಚಂಪತ್ ರಾಯ್ ಅವರೊಂದಿಗೆ ಸಂಪರ್ಕದಲ್ಲಿದ್ದು, ದೇವಾಲಯ ನಿರ್ಮಾಣದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತಿದ್ದಾರೆ.
* ಇನ್ನು 15 ದಿನಗಳಲ್ಲಿ ಮಿರ್ಜಾಪುರ ಮತ್ತು ಬೆಂಗಳೂರು ಗ್ರಾನೈಟ್ ಬಳಸಿ ದೇವಸ್ಥಾನದ ತಳಪಾಯ ಕಾಮಗಾರಿ ಪೂರ್ಣಗೊಳ್ಳಲಿದ್ದು, ದೇವಾಲಯವು 360 ಅಡಿ ಉದ್ದ ಮತ್ತು 235 ಅಡಿ ಅಗಲವನ್ನು ಹೊಂದಿದ್ದು, 5 ಶಿಖರ್ ಗಳನ್ನು ಒಳಗೊಂಡಿರುತ್ತದೆ, 2023 ರ ಡಿಸೆಂಬರ್ ರಿಂದ ದರ್ಶನಕ್ಕಾಗಿ ದೇವಾಲಯವನ್ನು ತೆರೆಯುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಗೋಪಾಲ್ ಅವರು ತಿಳಿಸಿದ್ದಾರೆ.
* ದೇವಾಲಯದ ನಿರ್ಮಾಣಕ್ಕೆ ಸುಮಾರು 700 800 ಕೋಟಿ ರೂ. ವೆಚ್ಚವಾಗಲಿದ್ದು, 3,000 ಕೋಟಿ ದೇಣಿಗೆ ಸಂಗ್ರಹಿಸಲಾಗಿದೆ ಎಂದು ದೇವಾಲಯದ ಟ್ರಸ್ಟ್ ಪ್ರಾಧಿಕಾರ ತಿಳಿಸಿದೆ.
* ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಪ್ರವಾಸೋದ್ಯಮ ಸಚಿವರಾದ ಗಂಗಾಪುರಂ ಕಿಶನ್ ರೆಡ್ಡಿ ಅವರು ಅಯೋಧ್ಯೆ ಎಲ್ಲ ರಾಜ್ಯಗಳಿಗೂ ಸಂಪರ್ಕ ಕಲ್ಪಿಸಲಿದ್ದು, ವಿವಿಧ ರಾಜ್ಯಗಳ ಮತ್ತು ದೇಶಗಳ ಜನರು ಇಲ್ಲಿಗೆ ಭೇಟಿ ನೀಡಲು ಸಹಕಾರಿಯಾಗುತ್ತದೆ, ಅಲ್ಲದೆ ನಾವು ಅಯೋಧ್ಯೆಯನ್ನು ಅಂತರರಾಷ್ಟ್ರೀಯ ಪ್ರವಾಸೋದ್ಯಮದ ಅತ್ಯಂತ ಜನಸಂದಣಿ ಸ್ಥಳವನ್ನಾಗಿ ಮಾಡಲು ಎಲ್ಲ ರೀತಿಯ ಕ್ರಮವನ್ನು ಕೈಗೊಳ್ಳಲಿದ್ದೇವೆ ಎಂದು ಅವರುಹೇಳಿದರು.

# 08-11-2021

## ಅಬುಧಾಬಿ ಸರ್ಕಾರವು ಮುಸ್ಲಿಮೇತರರಿಗೆ ಕೌಟುಂಬಿಕ ಕಾನೂನು ಸವಲತ್ತು ಒದಗಿಸಲುನಿರ್ಧಾರ



* ಅಬುಧಾಬಿ ಸರ್ಕಾರವು ಇದೀಗ ಅಬುಧಾಬಿಯಲ್ಲಿನ ಮುಸ್ಲಿಮೇತರ ವ್ಯಕ್ತಿಗಳು ಪರಸ್ಪರ ಮದುವೆಯಾಗಲು, ಹಾಗೂ ವಿಚ್ಛೇದನ ಪಡೆಯಲು, ಮಗುವಿನ ಪಾಲನೆಯ ಹೊಣೆ ಹೊರುವ ಅವಕಾಶ ಒದಗಿಸಲಾಗಿದೆ, ಈ ಮಾಹಿತಿಯನ್ನು ಅಬುಧಾಬಿಯ ಶೇಖ್ ಖಲೀಫಾ ಬಿನ್ ಝಾಯೇದ್ ಅಲ್ ನಹಯಾನ್ ತಿಳಿಸಿದ್ದಾರೆ ಹಾಗೂ ಆದೇಶವನ್ನು ಹೊರಡಿಸಿದ್ದಾರೆ.
* ಅಬುಧಾಬಿಯ ಶೇಖ್ ಖಲೀಫಾ ಬಿನ್ ಝಾಯೇದ್ ಅಲ್ ನಹಯಾನ್ ಅವರು UAE ಯ 7 ಎಮಿರೇಟ್ಸ್‌ಗಳ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ.
* ಅಬುಧಾಬಿಯಲ್ಲಿ ಮುಸ್ಲಿಮೇತರ ಕುಟುಂಬಗಳಿಗಾಗಿ ವಿಚಾರಣೆ ನಡೆಸಲು ಪ್ರತ್ಯೇಕ ನ್ಯಾಯಾಲಯವನ್ನು ರೂಪಿಸಲಾಗುತ್ತದೆ, ಈ ನ್ಯಾಯಾಲಯವು, ಇಂಗ್ಲೀಷ್ ಹಾಗೂ ಅರೇಬಿಕ್ ಭಾಷೆಗಳಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ತಿಳಿಸಿದ್ದಾರೆ.
* ಅಬುಧಾಬಿಯ ಮುಸ್ಲಿಮೇತರರಿಗಾಗಿ ಕೌಟುಂಬಿಕ ಕಾನೂನುಗಳ ಸವಲತ್ತು ಕಲ್ಪಿಸಿದ ಮೊದಲ ಇಸ್ಲಾಂ ರಾಷ್ಟ್ರವಾಗಿದೆ.

## '6' ಜೆಯುಡಿ ಉಗ್ರರ ಖುಲಾಸೆಗೊಳಿಸಿದ ಪಾಕಿಸ್ತಾನಹೈಕೋರ್ಟ್




* ಪ್ರಸ್ತುತ ಪಾಕಿಸ್ತಾನದ ನ್ಯಾಯಾಲಯವು ಉಗ್ರರಿಗೆ ಹಣಕಾಸು ನೆರವು ನೀಡುವ ಆರೋಪದಲ್ಲಿ 26/11 ರ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ಎಂದೇ ಹೆಸರುವಾಸಿಯಾಗಿದ್ದ ಹಫೀಜ್ ಸಯೀದ್ ಅವರು ಸ್ಥಾಪಿಸಿದ ಉಗ್ರ ಸಂಘಟನೆ ಜಮಾತ್ ಉದ್ ದಾವಾದ'ನ '6' ಉಗ್ರರನ್ನು ಖುಲಾಸೆಗೊಳಿಸಿದೆ ಎಂದು ತಿಳಿದು ಬಂದಿದೆ.
* ಇದೀಗ ಪಾಕಿಸ್ತಾನದ ಲಾಹೋರ್ ಹೈಕೋರ್ಟ್ ಈ 6 ಮಂದಿ ಉಗ್ರರನ್ನು ಆರೋಪಿಗಳೆಂದು ನೀಡಿರುವ ಆದೇಶವನ್ನು ವಜಾ ಮಾಡ, ಇದೀಗ ಈ '6' ಆರೋಪಿಗಳನ್ನೂ ಖುಲಾಸೆಗೊಳಿಸಿದೆ.

## ದಯಾಮರಣಜಾರಿಮಾಡಿದನ್ಯೂಜಿಲೆಂಡ್



* ಇದೀಗ ನ್ಯೂಜಿಲೆಂಡ್ ದೇಶದಲ್ಲಿ ದಯಾಮರಣ ಕಾನೂನು ಜಾರಿಗೆ ತರಲಾಗಿದೆ, ದಯಾಮರಣ ಎಂದರೆ ಇದೀಗ ಜನರು ತಮ್ಮ ಸ್ವ ಇಚ್ಛೆಯಿಂದ ಸಾಯಬಹುದು ಎಂದು ಈ ಕಾನೂನು ಅಡಿಯಲ್ಲಿ ತಿಳಿಸಲಾಗಿದೆ.
* ಈ ಕಾನೂನು ದಯಾಮರಣ ಜೀವನದ ಆಯ್ಕೆಯ ಅಂತ್ಯದ ಕಾಯಿದೆಯಾಗಿದೆ ಎಂದಿದ್ದಾರೆ.
* ನ್ಯೂಜಿಲೆಂಡ್ ಅಷ್ಟೇ ಅಲ್ಲದೇ ಕೊಲಂಬಿಯಾ, ಕೆನಡಾ, ಆಸ್ಟ್ರೇಲಿಯಾ, ಲಕ್ಸೆಂಬರ್ಗ್, ಸ್ಪೇನ್, ನೆದರ್ಲ್ಯಾಂಡ್ಸ್ ಮತ್ತು ಸ್ವಿಟ್ಜರ್ಲೆಂಡ್ ಈ ಎಲ್ಲ ದೇಶಗಳಲ್ಲಿ ಈ ದಯಾಮರಣ ಕಾನೂನ್ನು ಕಾನೂನುಬದ್ಧಗೊಳಿಸಲಾಗಿದೆಎಂದುತಿಳಿದುಬಂದಿದೆ.

## ಭಾರತದ ಈ 9 ನಗರಗಳು ಮುಳುಗುವ ಭೀತಿಯಲ್ಲಿ



* ಪ್ರತಿದಿನವು ನವದೆಹಲಿಯಲ್ಲಿ ಹವಾಮಾನ ಬದಲಾವಣೆ ಹೆಚ್ಚಾಗುತ್ತಿದ್ದು, ತಾಪಮಾನವು ಕೂಡ ಏರಿಕೆಯಾಗುತ್ತಿದೆ, ಈ ಕಾರಣಗಳಿಂದ ಹಿಮನದಿಗಳು ಕರಗುತ್ತಿವೆ ಇದರಿಂದಾಗಿ ಸಮುದ್ರದ ನೀರಿನ ಮಟ್ಟದಲ್ಲಿ ಏರಿಕೆ ಕಂಡು ಬರುತ್ತಿದೆ.
* ಪ್ರಸ್ತುತ ಸಮುದ್ರದ ನೀರಿನ ಮಟ್ಟ ಏರಿಕೆಯಾಗುವದರಿಂದ ಭಾರರತದಲ್ಲಿನ ಸುಮಾರು 9 ನಗರಗಳು ಮುಳುಗಡೆಯ ಭೀತಿಯನ್ನು ಎದುರಿಸಬೇಕಾಗಿದೆ ಎಂದಿದ್ದಾರೆ.
* ಪ್ರಸ್ತುತ ಇಂಟರ್‌ಗವರ್ನಮೆಂಟಲ್ ಪ್ಯಾನೆಲ್ ಆನ್ ಕ್ಲೈಮೇಟ್ ಚೇಂಜ್ (IPCC) ಭಾರತದಲ್ಲಿನ ಸುಮಾರು 12 ಕರಾವಳಿ ನಗರಗಳಿಗೆ ಎಚ್ಚರಿಕೆ ಮಾಹಿತಿಯನ್ನು ರವಾನಿಸಿದೆ.
* 2050 ರ ವೇಳೆಗೆ ಸಮುದ್ರ ಮಟ್ಟದಲ್ಲಿ ಏರಿಕೆ ಯಾಗಲಿದೆ ಇದರಿಂದಾಗಿ ಭಾರತದಲ್ಲಿನ 40 ದಶಲಕ್ಷಕ್ಕೂ ಅಧಿಕ ಜನರಿಗೆ ತೊಂದರೆ ಅನುಭವಿಸಲಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿ ಮಾಡಿದೆ.
* ಮುಳುಗಡೆ ಭೀತಿಯಲ್ಲಿರುವ ನಗರಗಳು: ಕಾಂಡ್ಲಾ ಗುಜರಾತ್ ಪರದೀಪ್, ಒಡಿಶಾ ಭಾವನಗರ, ಮುಂಬೈ ಮಹಾರಾಷ್ಟ್ರ ಓಖಾ, ಗುಜರಾತ್ ಮೊರ್ಮುಗೋ, ಗೋವಾ, ಕೊಚ್ಚಿನ್ ಕೇರಳ,ಆಂಧ್ರ ಪ್ರದೇಶ, ಖಿದಿರ್ಪುರ್ ಪಶ್ಚಿಮ ಬಂಗಾಳ, ಮಂಗಳೂರು ಕರ್ನಾಟಕ, ಚೆನ್ನೈ ತಮಿಳುನಾಡು, ಟುಟಿಕೋರಿನ್ ತಮಿಳುನಾಡು, ಈ ಎಲ್ಲ ನಗರ ಪ್ರದೇಶಗಳು ಮುಳುಗಡೆ ಭೀತಿಯಲ್ಲಿವೆ ಎಂದು ವಿಶ್ವಸಂಸ್ಥೆಯವರದಿಮಾಡಿದೆ.

## 'T20'ವಿಶ್ವಕಪ್‌ನಿಂದಭಾರತದತಂಡಹೊರಕ್ಕೆ



* 'ಟಿ 20' ವಿಶ್ವಕಪ್'ನಿಂದ ಭಾರತದ ತಂಡವು ಹೊರಬಿದ್ದಿದೆ, ಇತೀಚಿಗೆ ನ್ಯೂಜಿಲೆಂಡ್ ತಂಡವು ಅಫ್ಘಾನಿಸ್ತಾನ್ ವಿರುದ್ಧ ಜಯ ಸಾಧಿಸಿರುವ ಹಿನ್ನಲೆಯಿಂದಾಗಿ ಭಾರತದ ತಂಡವು ಹೊರ ನಡೆದಿದೆ.
* ನ್ಯೂಜಿಲೆಂಡ್ ತಂಡವು ಅಫ್ಘಾನಿಸ್ತಾನ್ ವಿರುದ್ಧ ಜಯ ಸಾಧಿಸಿರುವ ಹಿನ್ನಲೆಯಿಂದ ಇದೀಗ ಈ ತಂಡವು ಸೆಮಿಫೈನಲ್ ಹಂತಕ್ಕೆ ತಲುಪಿದೆ, ಈ ಕಡೆ ಭಾರತೀಯ ತಂಡವು 'ಟಿ 20' ವಿಶ್ವಕಪ್'ನಿಂದ ಹೊರ ನಡೆದಿದೆ.
* ಅಫ್ಘಾನಿಸ್ತಾನ್ ತಂಡವು ನ್ಯೂಜಿಲೆಂಡ್ ತಂಡದ ವಿರುದ್ಧ ಜಾವ ಸಾಧಿಸಿದ್ದಾರೆ ಮಾತ್ರ ಭಾರತ ತಂಡಕ್ಕೆ ಸೆಮಿಫೈನಲ್‌ಹಂತಕ್ಕೆಅವಕಾಶಸಿಗತಿತ್ತುಎನ್ನಲಾಗಿತ್ತು.

## IRCTC ಯಿಂದ 'ರಾಮಾಯಣ ಯಾತ್ರಾ' ಪ್ರವಾಸಕ್ಕೆ ವಿಶೇಷ ರೈಲುಸೌಲಭ್ಯ



* ಪ್ರಸ್ತುತ ಭಾರತೀಯ ರೈಲ್ವೆ ಕೇಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮ (IRCTC) ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಇದೀಗ 'ರಾಮಾಯಣ ಯಾತ್ರಾ' ಪ್ರವಾಸ ಸರಣಿಯು ವಿಶೇಷ ರೈಲುನ್ನು ಸಫ್ದರ್‌ಜಂಗ್ ರೈಲು ನಿಲ್ದಾಣದಿಂದ ಪ್ರಾರಂಭಿಸಿದೆ.
* ಇದೀಗ ದೇಶದಲ್ಲಿ ಕೋವಿಡ್ 19 ಸಾಂಕ್ರಾಮಿಕ ರೋಗವು ಒಂದು ಹಂತಕ್ಕೆ ನಿಯಂತ್ರಣಕ್ಕೆ ಬರುತ್ತಿದೆ, ಈ ಹಿನ್ನಲೆಯಿಂದ ದೇಶೀ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ರೈಲುಗಳನ್ನು ಪುನಃ ಆರಂಭಿಸಲಾಗುತ್ತಿದೆ IRCTC ತಿಳಿಸಿದೆ.
* ಈ 'ರಾಮಾಯಣ ಯಾತ್ರಾ' ಪ್ರವಾಸವು ಸುಮಾರು 13 ರಿಂದ 17 ದಿನಗಳ ಪ್ರಯಾಣವಾಗಿದೆ, ಈ ಯಾತ್ರಾ ಪ್ರವಾಸದಲ್ಲಿ ಪ್ರವಾಸಿಗರನ್ನು ಅಯೋಧ್ಯೆ ಹಾಗೂ ಇನ್ನು ಅನೇಕ ರಾಮಾಯಣಕ್ಕೆ ಸಂಬಂಧ ಪಟ್ಟಿರುವ ಸ್ಥಳಗಳಿಗೆ ಕರೆದುಕೊಂಡು ಹೋಗಲಾಗುತ್ತದೆ ಎಂದು ತಿಳಿಸಲಾಗಿದೆ.
* ದಕ್ಷಿಣ ಹಾಗೂ ಉತ್ತರ ಭಾರತದ ಪ್ರವಾಸಿಗರ ಅವಶ್ಯಕತೆ ಪೂರೈಸಲು, ಈ ವಿಶೇಷ ರೈಲು ಪ್ರವಾಸವು

ನವೆಂಬರ್. 16 ರಂದು ಹಾಗೂ ನವೆಂಬರ್. 25 ರಂದು ಪ್ರಾರಂಭವಾಗಲಿದೆ ಎಂದು IRCTC ಪ್ರಕಟಣೆಯಲ್ಲಿ ತಿಳಿಸಿದೆ.

## ಭಾರತದ ಮನು ಭಾಕರ್, ಇರಾನ್‌ನ ಜವಾದ್ ಫರೋಗಿ ಜೋಡಿಗೆ ಶೂಟಿಂಗ್ ವಿಭಾಗದಲ್ಲಿ ಚಿನ್ನ



* ಪ್ರಸ್ತುತ ಪೋಲೆಂಡ್ ದೇಶದಲ್ಲಿ ಜರಗುತ್ತಿರುವ ಐಎಸ್‌ಎಸ್‌ಎಫ್ ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್‌ನ ಏರ್ ಪಿಸ್ತೂಲು ಮಿಶ್ರ ವಿಭಾಗದಲ್ಲಿ ಭಾರತದ ಮನು ಭಾಕರ್ ಮತ್ತು ಇರಾನ್‌ನ ಜವಾದ್ ಫರೋಗಿ ಜೋಡಿಯು ಚಿನ್ನದ ಪದಕವನ್ನು ಪಡೆದುಕೊಂಡಿದೆ.
* ಪ್ರಸ್ತುತ ಭಾರತದ ಮನು ಭಾಕರ್ ಮತ್ತು ಇರಾನ್‌ನ ಜವಾದ್ ಫರೋಗಿ ಜೋಡಿಯು ಫೈನಲ್ ಪಂದ್ಯದಲ್ಲಿ ಫ್ರಾನ್ಸ್'ನ ಮಥಿಲ್ಡ ರಮೊಲಿ ಹಾಗೂ ರಷ್ಯಾದ ಆರ್ಟೆಮ್ ಚೆರ್ನೋಸೊವ್ ಜೋಡಿಯ ವಿರುದ್ಧ ಜಯ ಸಾಧಿಸಿದ್ದಾರೆ.

## ಖ್ಯಾತ ಕ್ರಿಕೆಟ್ ಕೋಚ್ ತಾರಕ್ ಸಿನ್ಹಾ ವಿಧಿವಶ



* ಕ್ರಿಕೆಟ್'ನ ಇತಿಹಾಸದಲ್ಲೇ 'ಉಸ್ತಾದ್ ಜೀ' ಎಂದೇ ಪ್ರಖ್ಯಾತಿ ಪಡೆದಿರುವ ಕೋಚ್ ತಾರಕ್ ಸಿನ್ಹಾ ಅವರು ಅನಾರೋಗ್ಯದ ಹಿನ್ನಲೆಯಿಂದಾಗಿ ತಮ್ಮ 71 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ.
* ತಾರಕ್ ಸಿನ್ಹಾ ಅವರು ದೆಹಲಿಯ ಕ್ರಿಕೆಟ್ ವಲಯದಲ್ಲಿ ದ್ರೋಣಾಚಾರ್ಯ ಎಂದು ಪ್ರಖ್ಯಾತಿ ಪಡೆದಿದ್ದರು, ಹಾಗೂ ಇವರು ಸಾನೆಟ್ ಕ್ರಿಕೆಟ್ ಕ್ಲಬ್ ನ ಸಂಸ್ಥಾಪಕರಾಗಿದ್ದರು, ಅಷ್ಟೇ ಅಲ್ಲದೇ ಇವರು ಸುಮಾರು '5' ದಶಕಗಳಿಂದ ಕ್ರಿಕೆಟ್ ತರಬೇತಿಯನ್ನು ನೀಡುತ್ತಿದ್ದರು.
* ತಾರಕ್ ಸಿನ್ಹಾ ಅವರ ಕೈಯಲ್ಲಿ ರಿಷಭ್ ಪಂತ್ ಕ್ರಿಕೆಟ್ ತರಬೇತಿಯನ್ನು ಪಡೆದುಕೊಂಡಿದ್ದಾರೆ, ಇದೀಗ ಇವರ ನಿಧನಕ್ಕೆ ಸಂತಾಪವನ್ನು ಸೂಚಿಸಿದ್ದಾರೆ.
* ತಾರಕ್ ಸಿನ್ಹಾ ಅವರಿಗೆ ಈ ಹಿಂದೆ 2018 ರಲ್ಲಿ ಜೀವಮಾನ ಸಾಧನೆಗಾಗಿ ದ್ರೋಣಾಚಾರ್ಯ ಪುರಸ್ಕಾರ ಲಭಿಸಿದೆ.

## ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ ಆಚರಣೆ



* ಪ್ರತಿ ವರ್ಷವು ಭಾರತದಲ್ಲಿ ನವೆಂಬರ್. 7 ರಂದು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು ಆಚರಣೆ ಮಾಡಲಾಗುತ್ತದೆ, ಅಷ್ಟೇ ಅಲ್ಲದೇ ಈ ದಿನದಂದು ಜನ ಸಾಮಾನ್ಯರಿಗೆ ಕ್ಯಾನ್ಸರ್ ತಡೆಗಟ್ಟುವಿಕೆ, ಹಾಗೂ ಈ ಕಾಯಿಲೆಯ ಬಗೆಗಿನ ಜಾಗೃತಿಯ ಮಹತ್ವವನ್ನು ತಿಳಿಸಲಿದೆ.
* ಪ್ರಸ್ತುತ ದೇಶದಲ್ಲಿ ಈ ಹಿಂದೆ 1975 ರಲ್ಲಿ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಲು ರಾಷ್ಟ್ರೀಯ ಕ್ಯಾನ್ಸರ್ ನಿಯಂತ್ರಣ ಕಾರ್ಯಕ್ರಮವನ್ನು ಆರಂಭಿಸಲಾಗಿದೆ.
* ಪ್ರತಿವರ್ಷವು ಭಾರತದಲ್ಲಿ ಸರಿ ಸುಮಾರು 1.1 ಮಿಲಿಯನ್ ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ, ಅಷ್ಟೇ ಅಲ್ಲದೇ ಭಾರತದಲ್ಲಿ ಪ್ರತೀ 8 ನಿಮಿಷಕ್ಕೆ ಒಬ್ಬ ಮಹಿಳೆ ಗರ್ಭಕೋಶದ ಕ್ಯಾನ್ಸರ್‌ನಿಂದ ಮೃತಳಾಗುತ್ತಿದ್ದಾಳೆ.
* ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ತಂಬಾಕು ಸೇವನೆಯು ಕ್ಯಾನ್ಸರ್ ಸಾವಿಗೆ ಅತೀ ದೊಡ್ಡ ಕಾರಣವಾಗಿದೆ ಎಂದು ತಿಳಿಸಿದ್ದಾರೆ, ಪ್ರಪಂಚದಾದ್ಯಂತ ವಾರ್ಷಿಕವಾಗಿ ಅಂದಾಜು '6' ಮಿಲಿಯನ್ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ.

## ಸತತ 2 ನೇ ಬಾರಿಗೆ ಅಗ್ರನಾಯಕರಾಗಿ ಹೊರಹೊಮ್ಮಿದ ಪ್ರಧಾನಿ ಮೋದಿ



* ಪ್ರಸ್ತುತ ವಿಶ್ವ ಮಾನ್ಯ ನಾಯಕರ ಪಟ್ಟಿಯಲ್ಲಿ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಅವರು ಸತತ 2 ನೇ ಬಾರಿಗೆ ಅಗ್ರಸ್ಥಾನವನ್ನು ಪಡೆದುಕೊಂಡಿದ್ದಾರೆ.
* ಇತ್ತೀಚಿಗೆ ಅಮೆರಿಕದ 'ಮಾರ್ನಿಂಗ್ ಕನ್ಸಲ್ಟ್' ಎಂಬ ಸಂಸ್ಥೆಯು, ದೇಶದಲ್ಲಿನ ನಾಯಕತ್ವ ಮತ್ತು ಆಡಳಿತ ವೈಖರಿಯನ್ನು ಪರಿಗಣಿಸಿ ಈ ಪಟ್ಟಿಯನ್ನು ಸಿದ್ಧಪಡಿಸಿದೆ.
* ಈ ಸಮೀಕ್ಷೆಯನ್ನು ಒಟ್ಟಾರೆ 13 ದೇಶಗಳ ಬಲಿಷ್ಠ ನಾಯಕರ ಬಗ್ಗೆ ಕೈಗೊಳ್ಳಲಾಗಿದೆ, ಈ ಸಮೀಕ್ಷೆಯಲ್ಲಿ ಶೇ.70 ರಷ್ಟು ಜನರು ಪ್ರಧಾನಿ ಮೋದಿಯವರನ್ನು ಉತ್ತಮ ನಾಯಕರಾಗಿದ್ದಾರೆ, ಹಾಗೂ ಅವರ ಆಡಳಿತ ವೈಖರಿಯನ್ನು ಮೆಚ್ಚಿಕೊಂಡಿದ್ದಾರೆ.
* ಕಳೆದ ವರ್ಷ ಇದೇ 'ಮಾರ್ನಿಂಗ್ ಕನ್ಸಲ್ಟ್' ಎಂಬ ಸಂಸ್ಥೆಯು ಸಮೀಕ್ಷೆಯನ್ನು ನಡೆಸಿತ್ತು ಆ ಸಂಧರ್ಭದಲ್ಲಿ ಭಾರತೀಯ ಪ್ರಧಾನಿ ಮೋದಿ ಅಗ್ರಗಣ್ಯ ನಾಯಕರಾಗಿದ್ದರು.
* ಅಗ್ರಗಣ್ಯ ನಾಯಕರ ಪಟ್ಟಿಯಲ್ಲಿ ಮೆಕ್ಸಿಕೋದ ಅಧ್ಯಕ್ಷ ಆಯಂಡ್ರೆಸ್ ಮ್ಯಾನ್ಯುಯೆಲ್ ಲೊಪೇಜ್ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ, ಹಾಗೂ ಇಟಲಿಯ ಮರಿಯೊ ಡ್ರಾ 3 ನೇ ಸ್ಥಾನ, ಜರ್ಮನಿಯ ಪ್ರಧಾನಿ ಆಯಂಜೆಲಾ ಮಾರ್ಕೆಲ್ 4 ನೇ ಸ್ಥಾನ, ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮೊರಿಸನ್ ಅವರು ಅಗ್ರ 5 ನೇ ಸ್ಥಾನ, ಅಮೆರಿಕ ಅಧ್ಯಕ್ಷ ಜೊ ಬೈಡನ್ 6 ನೇ ಸ್ಥಾನದಲ್ಲಿದ್ದಾರೆ ಎಂದು ಈ ಸಂಸ್ಥೆ ವರದಿ ಮಾಡಿದೆ.

## ದೆಹಲಿಯಲ್ಲಿ 29 ಮಹಿಳೆಯರು, ಓರ್ವ ತೃತೀಯ ಲಿಂಗಿ ಸೇರಿದಂತೆ 119 ಜನರಿಗೆ 'ಪದ್ಮ' ಪ್ರಶಸ್ತಿ ಪ್ರಧಾನ



* ರಾಷ್ಟ್ರಪತಿ ಭವನದಲ್ಲಿ ನಡೆಯುತ್ತಿರುವ 2021 ನೇ ಸಾಲಿನ ಪ್ರಶಸ್ತಿ ಸಮಾರಂಭ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಸಾಧಕರಿಗೆ ಪ್ರಶಸ್ತಿ ಪ್ರಧಾನ ಮಾಡಿದರು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.
* ಈ ಸಮಯದಲ್ಲಿ 7 ಪದ್ಮವಿಭೂಷಣ, 10 ಪದ್ಮಭೂಷಣ, 102 ಪದ್ಮಶ್ರೀ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಯಿತು. ಪ್ರಶಸ್ತಿ ಪಡೆದವರಲ್ಲಿ 29 ಮಹಿಳೆಯರು, ಓರ್ವ ತೃತೀಯ ಲಿಂಗಿ ಸೇರಿದಂತೆ 119 ಜನರಿಗೆ 'ಪದ್ಮ' ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪದ್ಮವಿಭೂಷಣ ಪ್ರಶಸ್ತಿ ಪಡೆದವರು : ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ, ಕರ್ನಾಟಕದ ಪೇಜಾವರ ಶ್ರೀ, ಡಾ. ಬಿ. ಎಂ. ಹೆಗ್ಡೆ, ಗಾಯಕ ಎಸ್. ಪಿ. ಬಾಲಸುಬ್ರಮಣ್ಯಂ (ಮರಣೋತ್ತರ), ನರಿಂದರ್ ಸಿಂಗ್ ಕಪಾನಿ (ಮರಣೋತ್ತರ), ಮೌಲಾನಾ ವಹೀದುದ್ದೀನ್ ಖಾನ್, ಬಿ. ಬಿ. ಲಾಲ್ ಮತ್ತು ಸುದರ್ಶನ್ ಸಾಹೋ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪದ್ಮಭೂಷಣ ಪ್ರಶಸ್ತಿ ಪಡೆದವರು : ಕೃಷ್ಣನ್


ನಾಯರ್ ಶಾಂತಾ ಕುಮಾರಿ ಚಿತ್ರಾ, ತರುಣ್ ಗೊಗಯ್ (ಮರಣೋತ್ತರ), ಚಂದ್ರ ಶೇಖರ ಕಂಬಾರ, ಸುಮಿತ್ರಾ ಮಹಾಜನ್, ನೃಪೇಂದ್ರ ಮಿಶ್ರಾ, ರಾಮ್ ವಿಲಾಸ್ ಪಾಸ್ವಾನ್ (ಮರಣೋತ್ತರ), ಕೇಶುಭಾಯ್ ಪಟೇಲ್ (ಮರಣೋತ್ತರ), ಕಲ್ಬೆ ಸಾದಿಕ್ (ಮರಣೋತ್ತರ), ರಜನಿಕಾಂತ್ ದೇವಿದಾಸ್ ಶ್ರಾಫ್ ಮತ್ತು ತರ್ಲೋಚನ್ ಸಿಂಗ್ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಪಡೆದವರು : ಕೃಷ್ಣನ್ ನಾಯರ್ ಶಾಂತಾ ಕುಮಾರಿ ಚಿತ್ರಾ, ತರುಣ್ ಗೊಗಯ್ (ಮರಣೋತ್ತರ), ಚಂದ್ರ ಶೇಖರ ಕಂಬಾರ, ಸುಮಿತ್ರಾ ಮಹಾಜನ್, ನೃಪೇಂದ್ರ ಮಿಶ್ರಾ, ರಾಮ್ ವಿಲಾಸ್ ಪಾಸ್ವಾನ್ (ಮರಣೋತ್ತರ), ಕೇಶುಭಾಯ್ ಪಟೇಲ್ (ಮರಣೋತ್ತರ), ಕಲ್ಬೆ ಸಾದಿಕ್ (ಮರಣೋತ್ತರ), ರಜನಿಕಾಂತ್ ದೇವಿದಾಸ್ ಶ್ರಾಫ್, ತರ್ಲೋಚನ್ ಸಿಂಗ್ ಪದ್ಮಭೂಷಣ ಪ್ರಶಸ್ತಿ ಪಡೆದಿದ್ದಾರೆ. ಸಿನಿ ರಂಗದಲ್ಲಿ ಕಂಗನಾ ರಣಾವತ್, ಕರಣ್ ಜೋಹರ್ ಅವರು ಪದ್ಮಶ್ರೀ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಪಡೆದ ಕನ್ನಡಿಗರು : ಒಟ್ಟು 102 ಸಾಧಕರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು ಅದರಲ್ಲಿ ಕರ್ನಾಟಕದ ಮಾತಾ ಬಿ. ಮಂಜಮ್ಮ ಜೋಗತಿ (ಕಲೆ), ರಂಗಸ್ವಾಮಿ ಲಕ್ಷ್ಮೀನಾರಾಯಣ ಕಶ್ಯಪ್ (ಸಾಹಿತ್ಯ ಮತ್ತು ಶಿಕ್ಷಣ) ಮತ್ತು ಕೆ. ವೈ. ವೆಂಕಟೇಶ್ (ಕ್ರೀಡೆ) ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಪಡೆದ ಹಾಜಬ್ಬ: ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಹರೇಕಳ ಹಾಜಬ್ಬಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಪದ್ಮಶ್ರೀ ಪ್ರಶಸ್ತಿಯನ್ನು ಪ್ರಧಾನಮಾಡಿದರು.

## ಮುಂಬೈ ಕರ್ನಾಟಕಕ್ಕೆ 'ಕಿತ್ತೂರು ಕರ್ನಾಟಕ'ವೆಂದು ನಾಮಕರಣ ಮಾಡಲುರಾಜ್ಯಸಚಿವಸಂಪುಟಸಭೆಯಲ್ಲಿನಿರ್ಣಯ



* ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದಂತ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಮುಂಬೈ ಕರ್ನಾಟಕಕ್ಕೆ ಕಿತ್ತೂರು ಕರ್ನಾಟಕವೆಂದು ನಾಮಕರಣ ಪ್ರಸ್ತಾವನೆಗೆ, ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.
* ಸಚಿವ ಸಂಪುಟ ಸಭೆಯ ನಂತ್ರ ಸುದ್ದಿಗಾರರೊಂದಿಗೆ ಮಾತನಾಡಿದಂತ ಸಚಿವ ಜೆ.ಸಿ. ಮಾಧುಸ್ವಾಮಿಯವರು ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳ ಪ್ರದೇಶಗಳನ್ನು ಕಿತ್ತೂರು ಕರ್ನಾಟಕ ಪ್ರದೇಶ ಎಂದು ನಾಮಕರಣ ಮಾಡುವ ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸಲ್ಲಿಸಿತ್ತು.
* ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕಡತಕ್ಕೆ ಅನುಮೋದನೆ ನೀಡಲಾಗಿದೆ ಎಂದ ಅವರು ಇನ್ನುಮುಂದೆ ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳ ಪ್ರದೇಶಗಳನ್ನು ಕಿತ್ತೂರು ಕರ್ನಾಟಕ ಪ್ರದೇಶ ಎಂಬುದಾಗಿಕರೆಯಲ್ಪಡುತ್ತವೆ ಎಂದುತಿಳಿಸಿದರು.

## 46 ವರ್ಷದ ವಿಶ್ವದ ಬಾಡಿ ಬಿಲ್ಡಿಂಗ್ ಚಾಂಪಿಯನ್ ಶಾನ್ ರೋಡೆನ್ ಹೃದಯಾಘಾತದಿಂದನಿಧನ



* ಮಾಜಿ ಮಿಸ್ಟರ್ ಒಲಂಪಿಯಾ ಚಾಂಪಿಯನ್ ಶಾನ್ ರೋಡೆನ್ ಅವರು 46 ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಸಾವನ್ನಪಿರುವುದಾಗಿ ಅವರ ತರಬೇತುದಾರರು ದೃಢಪಡಿಸಿದ್ದಾರೆ.
* ಶಾನ್ ರೋಡೆನ್ ಪ್ರಪಂಚದಾದ್ಯಂತ ಬಾಡಿಬಿಲ್ಡಿಂಗ್ ಸಮುದಾಯದಲ್ಲಿ ಗುರುತಿಸಿಕೊಂಡಿದ್ದು, ರೋಡೆನ್ 2018 ರಲ್ಲಿ 43 ನೇ ವಯಸ್ಸಿನಲ್ಲಿ ಒಲಂಪಿಯಾ ಟ್ರೋಫಿಯನ್ನು ಗೆದ್ದಿದ್ದರು. ಆದ್ದರಿಂದ ಇವರನ್ನುಒಲಿಂಪಿಯಾವನ್ನುಗೆದ್ದರೋಡೆನ್ಕ್ರೀಡಾದಂತಕಥೆಎಂದುಕರೆಯುತ್ತಿದ್ದರು.

# 09- 11- 2021

## ಸಿಎಂ ಬೊಮ್ಮಾಯಿ ಅವರಿಂದ ಅಮೃತ ಯೋಜನೆಯಡಿ ರಾಜ್ಯದ 7,500 ಸ್ತ್ರೀ ಶಕ್ತಿ ಗುಂಪುಗಳಿಗೆ ಅನುದಾನ



* ಕರ್ನಾಟಕ ಮುಖ್ಯಮಂತ್ರಿ ಬೊಮ್ಮಾಯಿ ಅವರು ಅಮೃತ ಯೋಜನೆಯಡಿ ರಾಜ್ಯದ 7,500 ಸ್ತ್ರೀ ಶಕ್ತಿ ಗುಂಪುಗಳಿಗೆ ಸ್ವಯಂ ಉದ್ಯೋಗಕ್ಕಾಗಿ 1 ಲಕ್ಷ ರೂ. ಅನುದಾನ ನೀಡುವದಾಗಿ ಘೋಷಣೆ ಮಾಡಿದೆ.
* ಇತ್ತೀಚಿಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಕೇಂದ್ರ ಪಂಚಾಯತ್ ರಾಜ್ ಸಚಿವ ಕಪಿಲ್ ಮೊರೇಶ್ವರ ಪಾಟೀಲ್ ಅವರೊಡನೆ ಸಭೆ ನಡೆಸಿ ಈ ಮಾಹಿತಿಯನ್ನು ಬಹಿರಂಗ ಪಡಿಸಿದರು.
* ಪ್ರಸ್ತುತ ಕರ್ನಾಟಕ ರಾಜ್ಯದ 5,690 ಗ್ರಾಮ ಪಂಚಾಯಿತಿಗಳಿಗೆ ಈಗಾಗಲೇ ಅಂತರ್ಜಾಲ ವ್ಯವಸ್ಥೆ ಒದಗಿಸಲಾಗಿದೆಎಂದುತಿಳಿಸಿದ್ದಾರೆ.

## ಕರ್ನಾಟಕದರಾಜ್ಯದ12ಜಿಲ್ಲೆಗಳಲ್ಲಿ 'ಗ್ರಾಮ ಒನ್' ಯೋಜನೆ ಅನುಷ್ಠಾನ



* ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣ ಜನತೆಗಾಗಿ ವಿದ್ಯುನ್ಮಾನ ನಾಗರಿಕ ಸೇವಾ ವಿತರಣೆ ನಿರ್ದೇಶನಾಲಯದಿಂದ 'ಗ್ರಾಮ ಒನ್' ಯೋಜನೆಯನ್ನು ಅನುಷ್ಠಾನಗೊಳಿಸಲು ಸಿದ್ಧತೆ ನಡೆಸಿದೆ, ಇದೀಗ ರಾಜ್ಯದ 12 ಜಿಲ್ಲೆಗಳಲ್ಲಿ'ಗ್ರಾಮ ಒನ್' ಯೋಜನೆಯನ್ನು ಅನುಷ್ಠಾನಗೊಳ್ಳಲಿದೆ ಎಂದು ತಿಳಿಸಿದ್ದಾರೆ.
* ಇದೀಗ ರಾಜ್ಯವು ಕರ್ನಾಟಕ ಒನ್ ಮಾದರಿಯಲ್ಲಿ ನಗರ ಪ್ರದೇಶಗಳಲ್ಲಿ ಒದಗಿಸುತ್ತಿರುವ ಸೇವೆಯನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲು ರಾಜ್ಯ ಸರ್ಕಾರವು ಸಿದ್ಧತೆಯನ್ನು ನಡೆಸಿದೆ ಎನ್ನಲಾಗಿದೆ.
* ಕರ್ನಾಟಕದ `ಗ್ರಾಮ ಒನ್' ಯೋಜನೆ ಅನುಷ್ಠಾನಕ್ಕೆ ಸಿದ್ಧವಾಗಿರುವ ಜಿಲ್ಲೆಗಳು: ಬಳ್ಳಾರಿ, ಕೊಪ್ಪಳ, ವಿಜಯಪುರ, ಬೆಳಗಾವಿ, ಬೀದರ್, ದಾವಣಗೆರೆ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಉಡುಪಿ ಜಿಲ್ಲೆಗಳಲ್ಲಿ ಫ್ರಾಂಚೈಸಿ ಅಡಿಯಲ್ಲಿ ಈ `ಗ್ರಾಮ ಒನ್' ಸೇವಾ ಕೇಂದ್ರ ಪ್ರಾರಂಭಿಸಲು ಸರ್ಕಾರವು ನಿರ್ಧಾರವನ್ನು ಕೈಗೊಂಡಿದೆ.
* ರಾಜ್ಯದ ಈ `ಗ್ರಾಮ ಒನ್' ಸೇವಾ ಕೇಂದ್ರಗಳಲ್ಲಿ ಸೇವಾಸಿಂಧುಯೋಜನೆಯ 750 ಕ್ಕೂ ಅಧಿಕ ನಾಗರಿಕ ಸೇವೆಗಳನ್ನು ಪಡೆಯಲು ಅರ್ಜಿ ಸ್ವೀಕಾರಮಾಡಲಾಗುತ್ತದೆ, ಪ್ರಸ್ತುತ ಈ ಕೇಂದ್ರಗಳು ಬೆಳಗ್ಗೆ 8 :00 ರಿಂದ ರಾತ್ರಿ 8:00 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತವೆ ಎಂದು ತಿಳಿಸಿದ್ದಾರೆ.

## ಕೇಂದ್ರ ಸರಕಾರದಿಂದ 'ಝೈಕೋವ್ ಡಿ' ಲಸಿಕೆಗೆ 265 ರೂ.ದರ ನಿಗದಿ




* ಕೇಂದ್ರ ಸರ್ಕಾರವು ಮಕ್ಕಳಿಗಾಗಿ ಲಸಿಕೆಯನ್ನು ನೀಡುವ ನಿಟ್ಟಿನಲ್ಲಿ ಝೈಡಸ್ ಕ್ಯಾಡಿಲಾದಿಂದ 'ಝೈಕೋವ್ ಡಿ' ಎಂಬ ಲಸಿಕೆಯ 1 ಕೋಟಿ ಡೋಸ್‌ಗಳನ್ನು ಖರೀದಿಸಲಿದೆ ಎಂದು ತಿಳಿಸಿದೆ.
* ಈ 'ಝೈಕೋವ್ ಡಿ' ಎಂಬ ಲಸಿಕೆಯ ಪ್ರತಿ ಡೋಸ್‌ಗೆ 265 ರೂ. ಹಾಗೂ ಅದರ ಜೆಟ್ ಆಯಪ್ಲಿಕೇಟರ್ ಎಂಬ ವ್ಯವಸ್ಥೆಗೆ 93 ರೂ. ದರ ನಿಗದಿ ಪಡಿಸಿದೆ, ಒಟ್ಟಾರೆ ಇದಕ್ಕೆ 358 ರೂ. ವೆಚ್ಚ ತಗುಲಲಿದೆ ಎಂದು ಕೇಂದ್ರ ತಿಳಿಸಿದೆ.
* ಮಕ್ಕಳಿಗೆ ಫಾರ್ಮಾ ಜೆಟ್ ಎಂಬ ಸೂಜಿ ರಹಿತ ವ್ಯವಸ್ಥೆಯ ಮೂಲಕ '3' ಡೋಸ್ ಕೋವಿಡ್ 19 ಪ್ರತಿರೋಧಕ ಲಸಿಕೆಯನ್ನು ನೀಡಲು ಕೇಂದ್ರ ಸರ್ಕಾರ ತಿಳಿಸಿದೆ.
* ಈ 'ಝೈಕೋವ್ ಡಿ' ಎಂಬ ಲಸಿಕೆಯನ್ನು 12 ರಿಂದ 17 ವರ್ಷ ವಯೋಮಿತಿಯ ಮಕ್ಕಳಿಗೆ ನೀಡಲು ಉದ್ದೇಶಿಸಲಾಗಿದೆ.

## ಬಾರ್ಸಿಲೋನಾ ತಂಡದ ಹೊಸ ಕೋಚ್ ಆಗಿ 'ಕ್ಸಾವಿ ಹೆರ್ನಾಂಡಜ್' ನೇಮಕ



* ಇತ್ತೀಚಿಗೆ 'ಕ್ಸಾವಿ ಹೆರ್ನಾಂಡಜ್' ಅವರು ಬಾರ್ಸಿಲೋನಾ ತಂಡದ ಹೊಸ ಕೋಚ್ ಆಗಿ ನೇಮಕಮಾಡಲಾಗಿದೆ.
* ಇಲ್ಲಿಯವರೆಗೆ 'ಕ್ಸಾವಿ ಹೆರ್ನಾಂಡಜ್' ಬಾರ್ಸಿಲೋನಾ ತಂಡವನ್ನು ಪ್ರತಿನಿಧಿಸಿದ್ದರು, ಇದೀಗ ಇವರು ಕೋಚ್ ಆಗಿ ಕ್ಲಬ್‌ಗೆ ನೇಮಕವಾಗಿ ವಾಪಸಾಗಿದ್ದಾರೆ, ಈ ಸುದ್ದಿಯನ್ನು ಕೇಳಿ ಫುಟ್‌ಬಾಲ್ ಪ್ರೇಮಿಗಳು ಸಂಭ್ರಮಿಸಿದರು.
* 'ಕ್ಸಾವಿ ಹೆರ್ನಾಂಡಜ್' ಅವರು ಬಾರ್ಸಿಲೋನಾ ಅಧ್ಯಕ್ಷ ಜಾನ್ ಲಾಪೋರ್ಟ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಿದರು.
* 'ಕ್ಸಾವಿ ಹೆರ್ನಾಂಡಜ್' ಅವರು ಬಾರ್ಸಿಲೋನಾ ತಂಡದ ಪರವಾಗಿ ಒಟ್ಟಾರೆ 767 ಪಂದ್ಯಗಳಲ್ಲಿ ಆಟವಾಡಿದ್ದಾರೆ, ಈ ಹಿಂದೆ ಇವರು 6 ವರ್ಷಗಳ ಹಿಂದೆ ಅಲ್ ಸಡ್ ತಂಡದ ಪರವಾಗಿ ಆಡಲು ಕತಾರ್‌ಗೆ ಪ್ರಯಾಣ ಬೆಳೆಸಿದ್ದರು, 'ಕ್ಸಾವಿ ಹೆರ್ನಾಂಡಜ್' ಅವರು ಇದೀಗ ಮರಳಿ ಬಾರ್ಸಿಲೋನಾ ಕ್ಲಬ್ ಗೆ ಸೇರ್ಪಡೆಯಾಗಿದ್ದಾರೆ.

## ಫೇಸ್ ರೆಕಗ್ನಿಷನ್ ವ್ಯವಸ್ಥೆ ಗುಡ್‌ಬೈ ತಿಳಿಸಿಲಿರುವ ಫೇಸ್‌ಬುಕ್



* ಫೇಸ್‌ಬುಕ್ ಸಂಸ್ಥೆಯು ತನ್ನ ಫೇಸಿಯಲ್ ರೆಕಗ್ನಿಷನ್ ವ್ಯವಸ್ಥೆಯನ್ನು ಕೆಲವೇ ಕೆಲವು ದಿನಗಳಲ್ಲಿ ಮುಚ್ಚಲಿದೆ ಎಂದು ತಿಳಿಸಿದೆ.
* ಫೇಸ್ಬುಕ್ ಈ ಹಿಂದೆ 2010 ರಲ್ಲಿ ಫೇಸಿಯಲ್ ರೆಕಗ್ನಿಷನ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿತ್ತು, ಆದರೆ ಈ ವ್ಯವಸ್ಥೆ ಬಗ್ಗೆ ನಾನಾ ದೂರುಗಳು ಕೇಳಿಬಂದ ಹಿನ್ನಲೆಯಿಂದಾಗಿ ಇನ್ನೇನು ಕೆಲವೇ ಕೆಲವು ದಿನಗಳಲ್ಲಿ ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ತಿಳಿಸಿದೆ.
* ಪ್ರಸ್ತುತ ಫೇಸ್‌ಬುಕ್‌ನ 3 ನೇ ಒಂದು ಭಾಗದಷ್ಟು ಜನರು ಈ ಫೇಸಿಯಲ್ ರೆಕಗ್ನಿಷನ್ ಸಾಫ್ಟ್‌ವೇರ್ ಬಳಸಿಕೊಂಡು ಬೇರೆ ಬೇರೆ ಜನರಿಗೆ ಫೋಟೋ ಗಳನ್ನೂ ಟ್ಯಾಗ್ ಮಾಡುತ್ತಿದ್ದರು, ಸದ್ಯ ಇದೀಗ ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸುವದರಿಂದ ಕೋಟ್ಯಂತರ ಜನರ ಫೇಸಿಯಲ್ ರೆಕಗ್ನಿಷನ್ ಟೆಂಪ್ಲೇಟ್ ಗಳು ಡಿಲೀಟ್ ಆಗಲಿವೆ ಎಂದು ಫೇಸ್ಬುಕ್ ತಿಳಿಸಿದೆ.
* ಪ್ರಸ್ತುತ ಅಮೇರಿಕದ ನ್ಯೂಯಾರ್ಕ್ ಟೈಮ್ಸ್ ಸುದ್ದಿವಾಹಿನಿ ನೀಡಿರುವ ಮಾಹಿತಿಯ ಪ್ರಕಾರ ಇದೇ ಡಿಸೆಂಬರ್ ವೇಳೆಗೆ ಫೇಸಿಯಲ್ ರೆಕಗ್ನಿಷನ್‌ನ ಟೆಂಪ್ಲೇಟ್‌ಗಳನ್ನು ಡಿಲೀಟ್ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

## 'ಜೀವಸಮೃದ್ಧಿ'ಪ್ರಶಸ್ತಿಪಡೆದಸಾಲುಮರದತಿಮ್ಮಕ್ಕ



* ಇತ್ತೀಚಿಗೆ ಕೇರಳ ರಾಜ್ಯದ ಸಮತಾ ಸಂಸ್ಥೆಯು 2020 ನೇ ಸಾಲಿನ ಜೀವ ಸಮೃದ್ಧಿ ಪ್ರಶಸ್ತಿಗೆ ಸಾಲು ಮರದ ತಿಮ್ಮಕ್ಕರನ್ನು ಆಯ್ಕೆ ಮಾಡಿದೆ.
* ಈ ಜೀವ ಸಮೃದ್ಧಿ ಪ್ರಶಸ್ತಿ ಗೌರವ ಪುರಸ್ಕಾರವನ್ನು ಕರ್ನಾಟಕ ಮತ್ತು ಪುರೋಗಮನ ಕಲಾ ಸಾಹಿತ್ಯ ಸಂಘದ ಸಹಯೋಗದಲ್ಲಿ ಪ್ರಧಾನ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಖ್ಯಾತ ಪರಿಸರ ಕಾರ್ಯಕರ್ತೆ ಕೀನ್ಯಾದ ವಾಂಗಾರಿ ಮಾತಾಯಿಯವರ ಸ್ಮರಣೆಯಲ್ಲಿ ಈ ಪ್ರಶಸ್ತಿಯನ್ನು ಸಾಲು ಮರದ ತಿಮ್ಮಕ್ಕಗೆ ಸಮತಾ ಸಂಸ್ಥೆಯು ನೀಡುತ್ತಿದೆ.

## ರಾಷ್ಟ್ರೀಯಕಾನೂನುಸೇವೆಗಳದಿನ




* ಪ್ರತಿ ವರ್ಷವು ನವೆಂಬರ್. 9 ರಂದು ರಾಷ್ಟ್ರೀಯ ಕಾನೂನು ಸೇವೆಗಳ ದಿನ ಆಚರಣೆ ಮಾಡಲಾಗುತ್ತದೆ, ನಾಗರಿಕ ಪ್ರಜೆಗಳಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಣೆ ಮಾಡಲಾಗುತ್ತದೆ, ಅಷ್ಟೇ ಯಾವುದೇ ಪ್ರಜೆ ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತವಾಗಿ ಕಾನೂನು ಸಲಹೆಗಳನ್ನು ಪಡೆಯಬಹುದಾಗಿದೆ.
* ಕಾನೂನು ಸೇವೆಗಳ ಪ್ರಾಧಿಕಾರದ ಕಾಯ್ದೆಯ 12 ರ ಅಡಿಯಲ್ಲಿ ಉಲ್ಲೇಖಿಸಿರು ಹಾಗೆ ಮಹಿಳೆಯರು ಮತ್ತು ಮಕ್ಕಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಅಂಗವಿಕಲರು, ಕಾರ್ಮಿಕ ವರ್ಗ, ಮಾನವ ಕಳ್ಳಸಾಗಣೆಗೆ ಒಳಗಾದವರು, ಕಾರ್ಮಿಕ ವರ್ಗ, ಕಸ್ಟಡಿಯಲ್ಲಿರುವ ಆರೋಪಿ, ಪ್ರಾಕೃತಿಕ ವಿಕೋಪಕ್ಕೆ ತುತ್ತಾದವರು, ವಾರ್ಷಿಕ 3 ಲಕ್ಷಕ್ಕೂ ಕಡಿಮೆ ಆದಾಯ ಇರುವ ವ್ಯಕ್ತಿಗಳಿಗೆ ಉಚಿತವಾಗಿ ಕಾನೂನು ನೆರವು ನೀಡಲಾಗುತ್ತದೆ, ಅಷ್ಟೇ ಅಲ್ಲದೇ ನ್ಯಾಯಾಲಯದ ಪ್ರಕರಣಗಳಲ್ಲಿ ಕಾನೂನು ಪ್ರಾಧಿಕಾರದಿಂದಲೇ ವಕೀಲರನ್ನೂ ನೇಮಕ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.
* ದೇಶದ ಪ್ರತಿ ಪ್ರಜೆಯ ಮನೆ ಬಾಗಿಲಿಗೆ ಕಾನೂನು ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ, ಈ ಹಿಂದೆ 1987 ರಲ್ಲಿ ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯ್ದೆಯನ್ನು ಸ್ಥಾಪಿಸಲಾಗಿದೆ, ಕೇಂದ್ರ ಕಾನೂನು ಸೇವೆಗಳ ಪ್ರಾಧಿಕಾರವು ಈ ಕಾಯ್ದೆಯನ್ನು 1995 ರಲ್ಲಿ ಕಾರ್ಯರೂಪಕ್ಕೆ ತರಲು ಸುಪ್ರೀಂಕೋರ್ಟ್ ಅಡಿಯಲ್ಲಿ ಕೆಲಸ ಮಾಡಿತು.
* ಕಾನೂನು ಸೇವೆಗಳ ಪ್ರಾಧಿಕಾರವು ಈ ಕಾಯ್ದೆಯನ್ನು 'ಸರ್ವರಿಗೂ ನ್ಯಾಯ ಸರ್ವಸಮಾನ' ಎಂಬ ಧ್ಯೇಯವಾಕ್ಯದಅಡಿಯಲ್ಲಿ ರಚಿಸಿದೆ.

## ಪ್ಯಾರಿಸ್‌ಮಾಸ್ಟರ್ಸ್‌ಪ್ರಶಸ್ತಿಪಡೆದ'ನೊವಾಕ್‌ಜೊಕೊವಿಕ್'



* ಪ್ಯಾರಿಸ್ ಮಾಸ್ಟರ್ಸ್ ಟೆನಿಸ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಸರ್ಬಿಯದ ಟೆನಿಸ್ ಆಟಗಾರ ನೊವಾಕ್ ಜೊಕೊವಿಕ್ ಅವರು ರಷ್ಯಾದ ಡನೀಲ್ ಮೆಡ್ವೆಡೆವ್‌ರನ್ನು ಸೋಲಿಸುವ ಮೂಲಕ ಈ ಪ್ರಶಸ್ತಿ ಜಯಿಸಿದ್ದಾರೆ.
* ಸರ್ಬಿಯದ ಟೆನಿಸ್ ಆಟಗಾರ ನೊವಾಕ್ ಜೊಕೊವಿಕ್ ಅವರು ಈ ಪ್ರಶಸ್ತಿಯನ್ನು ಸೇರಿಸಿ 37 ನೇ ಮಾಸ್ಟರ್ಸ್ ಪ್ರಶಸ್ತಿಯನ್ನು ಪಡೆದುಕೊಂಡಂತಾಗಿದೆ.
* ಜೊಕೊವಿಕ್ ಅವರು ಜಯಿಸಿರುವ 6 ನೇ ಪ್ಯಾರಿಸ್ ಮಾಸ್ಟರ್ಸ್ ಪ್ರಶಸ್ತಿಯಾಗಿದೆ, ಹಾಗೂ ಮೆಡ್ವೆಡೆವ್ 4 ಬಾರಿ ಪ್ಯಾರಿಸ್ ಮಾಸ್ಟರ್ಸ್ ಪ್ರಶಸ್ತಿ ಜಯಿಸಿದ್ದಾರೆ.
* ಇದೀಗ ಮಾಸ್ಟರ್ಸ್ ಪ್ರಶಸ್ತಿಗಳನ್ನು ಪಡೆಯುವದರಲ್ಲಿ ರಫೇಲ್ ನಡಾಲ್ ಅವರಿಗಿಂತ ಕೇವಲ ಒಂದು ಪ್ರಶಸ್ತಿಯಿಂದ ನೊವಾಕ್ ಜೊಕೊವಿಕ್ ಅವರು ಹಿಂದಿದ್ದಾರೆ.
* ಪ್ರಸ್ತುತ ನೊವಾಕ್ ಜೊಕೊವಿಕ್ ಹಾಗೂ ರಫೇಲ್ ನಡಾಲ್ ಅವರು ತಲಾ 20 ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳನ್ನುಜಯಿಸಿದ್ದಾರೆ.

## ಹಣಕಾಸಿನ ಒಳಗೊಳ್ಳುವಿಕೆಯಲ್ಲಿ ಚೀನಾ ಹಿಂದಿಕ್ಕಿದ ಭಾರತ



* ಇದೀಗ ದೇಶದಲ್ಲಿ ಹಣಕಾಸು ಒಳಗೊಳ್ಳುವಿಕೆಯ ಮಾಪಕಗಳಲ್ಲಿ ಭಾರತವು ಚೀನಾ ದೇಶಕ್ಕಿಂತ ಒಂದು ಹೆಜ್ಜೆ ಮುಂದೆ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (SBI) ವರದಿ ಮಾಡಿದೆ.
* 2020 ನೇ ವರ್ಷದಲ್ಲಿ ದೇಶದಲ್ಲಿನ ಪ್ರತಿ ಸಾವಿರ ವ್ಯಕ್ತಿಗಳಿಗೆ 13,615 ಇಂಟರ್ನೆಟ್ ಬ್ಯಾಂಕಿಂಗ್ ವಹಿವಾಟುಗಳನ್ನು ಮಾಡಿಕೊಡಲಾಗುತ್ತಿದೆ ಎಂದು SBI ತಿಳಿಸಿದೆ.
* ಈ ಹಿಂದೆ 2015 ರಲ್ಲಿ ಪ್ರತಿ ಸಾವಿರವ್ಯಕ್ತಿಗಳಿಗೆ183ವಹಿವಾಟುಗಳುಮಾತ್ರನಡೆಸಲಾಗಿತ್ತು,ಆದರೆ ಇದೀಗ ದೇಶದಲ್ಲಿ 2020 ನೇ ವರ್ಷದಲ್ಲಿ ಪ್ರತಿ 1 ಲಕ್ಷ ವಯಸ್ಕರಿಗೆ ಶೇ. 14.7 ರಷ್ಟು ಬ್ಯಾಂಕ್ ಶಾಖೆಗಳು ಇದ್ದವು, ಈ ಬ್ಯಾಂಕ್ ಶಾಖೆಗಳು 2015 ರಲ್ಲಿ ಶೇ. 13.6 ರಷ್ಟು ಮಾತ್ರ ಇದ್ದವು ಎಂದು ತಿಳಿಸಿದೆ.
* ಪ್ರಸ್ತುತ SBI ವರದಿ ಮಾಡಿರುವ ಪ್ರಕಾರ 2020 ರಲ್ಲಿ ಭಾರತದಲ್ಲಿನ ಒಟ್ಟು ಬ್ಯಾಂಕ್ ಶಾಖೆಗಳ ಪ್ರಮಾಣವು ಜರ್ಮನಿ, ಚೀನಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪ್ರತಿ ಸಾವಿರ ಜನರಿಗೆ ಇರುವ ಶಾಖೆಗಳಿಗಿಂತ ಜಾಸ್ತಿ ಇವೆ ಎಂದು ತಿಳಿಸಿದೆ.
* ಪ್ರಸ್ತುತ ಭಾರತದಲ್ಲಿ ಶೂನ್ಯ ಬ್ಯಾಲೆನ್ಸ್ ಅಥವಾ ಅತ್ಯಂತ ಕಡಿಮೆ ಬ್ಯಾಲೆನ್ಸ್‌ನ ಬ್ಯಾಂಕ್ ಖಾತೆ ಆರಂಭಿಸುವ ಯೋಜನೆಗಳ ಅಡಿಯಲ್ಲಿ ಬ್ಯಾಂಕ್ ಖಾತೆ ಹೊಂದಿರುವವರ ಸಂಖ್ಯೆಯು ಹೆಚ್ಚಿವೆ ಎಂದು ತಿಳಿಸಿದ್ದಾರೆ.
* ಕಳೆದ '7' ವರ್ಷಗಳಿಂದ ಆರ್ಥಿಕ ಒಳಗೊಳ್ಳುವಿಕೆಗೆ ಬಗೆಗಿನ ಅಭಿಯಾನದಲ್ಲಿ 43.7 ಕೋಟಿ ಶೂನ್ಯ ಬ್ಯಾಲೆನ್ಸ್ ಖಾತೆಗಳನ್ನು ಪ್ರಾರಂಭಿಸಲಾಗಿದೆಎಂದುSBIತಿಳಿಸಿದೆ.

## ಭಾರತದಗ್ರ್ಯಾಂಡ್‌ಮಾಸ್ಟರ್‌ಆಗಿಹೊರಹೊಮ್ಮಿದಸಂಕಲ್ಪ್‌ಗುಪ್ತಾ



* ಪ್ರಸ್ತುತ ಭಾರತದ 71 ನೇ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರ ಹೊಮ್ಮಿದ ಮಹಾರಾಷ್ಟ್ರದ ನಾಗ್ಪುರದ ಸಂಕಲ್ಪ್ ಗುಪ್ತಾ.
* ಇತ್ತೀಚಿಗೆ ಸರ್ಬಿಯಾದ ಅರಂಜೆಲೊವಾಕ್‌ನಲ್ಲಿ ಜರುಗಿದ ಜಿಎಂ ಆಸ್ಕ 3 ರೌಂಡ್ ರಾಬಿನ್ ಟೂರ್ನಿಯಲ್ಲಿ 2 ನೇ ಸ್ಥಾನ ಪಡೆದುಕೊಳ್ಳುವದರ ಜೊತೆಗೆ ಇವರು ಗ್ರ್ಯಾಂಡ್‌ಮಾಸ್ಟರ್ ನಾರ್ಮ್ ಪಡೆದುಕೊಂಡಿದ್ದಾರೆ.
* ಮಹಾರಾಷ್ಟ್ರದ ನಾಗ್ಪುರದ ಸಂಕಲ್ಪ್ ಗುಪ್ತಾ ಅವರು ಟೂರ್ನಿಯಲ್ಲಿ ಒಟ್ಟು 6.5 ಪಾಯಿಂಟ್ ಕಲೆ ಹಾಕಿದ್ದಾರೆ ಎಂದು ತಿಳಿದು ಬಂದಿದೆ.
* ಸಂಕಲ್ಪ್ ಗುಪ್ತಾ ಅವರು 24 ದಿನಗಳಲ್ಲಿ 3 ಟೂರ್ನಿಗಳಲ್ಲಿ ಸತತವಾಗಿ ಆಟವಾಡುವ ಮೂಲಕ ಜಿಎಂ ನಾರ್ಮ್ ಪಡೆದುಕೊಂಡಿದ್ದಾರೆ, ಈ 3 ಟೂರ್ನಿಗಳಲ್ಲಿ ಇವರು 2599 ಕ್ಕೂ ಹೆಚ್ಚಿನ ರೇಟಿಂಗ್ ಸಾಧನೆ ಪಡೆದಿದ್ದಾರೆ.
* ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಅವರು ಭಾರತದ 71 ನೇ ಗ್ರ್ಯಾಂಡ್‌ಮಾಸ್ಟರ್ ಆಗಿರುವ ಗ್ರ್ಯಾಂಡ್‌ಮಾಸ್ಟರ್ ಸಂಕಲ್ಪ್ ಗುಪ್ತಾ ಅವರನ್ನು ಅಭಿನಂದನೆಗಳನ್ನೂ ತಿಳಿಸಿದ್ದಾರೆ.

# 10- 11- 2021

## '96 ರಾಷ್ಟ್ರ'ಗಳು ಭಾರತದ ಕೋವಿಡ್ 19 ಲಸಿಕೆ ಪ್ರಮಾಣ ಪತ್ರಗಳಪರಸ್ಪರಸ್ವೀಕಾರಕ್ಕೆಸಮ್ಮತಿನೀಡಿವೆ



* ಪ್ರಸ್ತುತ ವಿಶ್ವಾದ್ಯಂತ '96 ದೇಶ'ಗಳು ಭಾರತದ ಜೊತೆಗೆ ಲಸಿಕೆ ಪ್ರಮಾಣಪತ್ರಗಳನ್ನು ಪರಸ್ಪರ ಸ್ವೀಕಾರ ಮಾಡಿಕೊಳ್ಳಲು ಸಮ್ಮತಿಯನ್ನು ನೀಡಿವೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ ಸುಖ್ ಮಾಂಡವಿಯಾ ಅವರು ಹೇಳಿಕೆ ನೀಡಿದ್ದಾರೆ.
* ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ ಕೇಂದ್ರ ಸರ್ಕಾರವು ವಿಶ್ವದ ಬೇರೆ ಬೇರೆ ಭಾಗಗಳೊಂದಿಗೆ ಸಂವಹನದಲ್ಲಿ ಸಂವಾದವನ್ನು ನಡೆಸುತ್ತಿದೆ ಎಂದು ಕೇಂದ್ರ ಸಚಿವ ಮನ್ಸುಖ್ ಮಾಂಡವಿಯಾ ಅವರು ತಿಳಿಸಿದ್ದಾರೆ.
* ಇದೀಗ ವಿಶ್ವದ ಅತಿದೊಡ್ಡ ಕೋವಿಡ್ 19 ಲಸಿಕೆ ಕಾರ್ಯಕ್ರಮದ ಮೂಲಕ ಫಲಾನುಭವಿಗಳನ್ನ ಅಂಗೀಕರಿಸಲಾಗುತ್ತದೆ, ಆ ಮೂಲಕ ಶಿಕ್ಷಣ, ವ್ಯಾಪಾರ ಮತ್ತು ಪ್ರವಾಸೋದ್ಯಮ ಉದ್ದೇಶಗಳಿಗಾಗಿ ಪ್ರಯಾಣವನ್ನು ಬೆಳೆಸಲು ಸಾರ್ವಜನಿಕರಿಗೆ ಸಹಾಯವಾಗಲಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಭಾರತ ದೇಶದಲ್ಲಿ ಇಲ್ಲಿಯವರೆಗೆ 109 ಕೋಟಿ ಡೋಸ್'ಗಳನ್ನು ಜನರಿಗೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವರು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ 'ಹರ್ ಘರ್ ದಸ್ತಕ್' ಯೋಜನೆ ಅಡಿಯಲ್ಲಿ ಆರೋಗ್ಯ ಕಾರ್ಯಕರ್ತರು ಲಸಿಕೆ ಅಭಿಯಾನವನ್ನ ನಡೆಸಲು ಎಲ್ಲಾ ಮನೆಗಳಿಗೆ ತೆರಳುತ್ತಿದ್ದಾರೆ.
* ಇದೀಗ ಕೊವಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆಯನ್ನು '96ದೇಶ'ಗಳುಗುರುತಿಸಿವೆಎಂದು ತಿಳಿಸಲಾಗಿದೆ.

## ಜಲಾಂತರ್ಗಾಮಿ 'ಐಎನ್‌ಎಸ್‌ವೇಲಾ' ನೌಕಾಪಡೆಗೆ ಹಸ್ತಾಂತರ



* ಇದೀಗ ಜಲಾಂತರ್ಗಾಮಿ 'ಐಎನ್‌ಎಸ್ ವೇಲಾ'ವನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ, ಈ ಜಲಾಂತರ್ಗಾಮಿಯು ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ಅಡಿಯಲ್ಲಿ ನಿರ್ಮಿಸಲಾಗಿದೆ, ಅಷ್ಟೇ ಅಲ್ಲದೇ ಇದು 'ಸ್ಕಾರ್ಪಿಯಾನ್' ಸರಣಿಯ 4 ನೇ ಜಲಾಂತರ್ಗಾಮಿ ನೌಕೆ ಇದಾಗಿದೆ.
* ಪ್ರಸ್ತುತ 'ಆತ್ಮನಿರ್ಭರ ಭಾರತ' ಮತ್ತು 'ಮೇಕ್ ಇನ್ ಇಂಡಿಯಾ'ದ ಮಹತ್ವಾಕಾಂಕ್ಷೆಯ ಯೋಜನೆಗ ಅಡಿಯಲ್ಲಿ ಈ ಜಲಾಂತರ್ಗಾಮಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ.
* ಈಗಾಗಲೇ ಭಾರತೀಯ ನೌಕಾ ಪಡೆಗೆ ಐಎನ್‌ಎಸ್(INS) ಕಲ್ವರಿ, ಐಎನ್‌ಎಸ್(INS) ಖಂಡೇರಿ ಮತ್ತು ಐಎನ್‌ಎಸ್(INS) ಕಾರಂಜ್ ಜಲಾಂತರ್ಗಾಮಿಗಳನ್ನು ನೌಕಾಪಡೆಗೆ ಹಸ್ತಾಂತರಿಸಲಾಗಿದೆ.
* ಇದೀಗ ಭಾರತವು ಅತ್ಯಾಧುನಿಕ ಜಲಾಂತರ್ಗಾಮಿಗಳನ್ನು ನಿರ್ಮಿಸುವ ದೇಶಗಳ ಪಟ್ಟಿಗೆ ಸೇರ್ಪಡೆಯಾಗಿದೆ.
* ಇವಷ್ಟೇ ಅಲ್ಲದೇ 5 ನೇ ಜಲಾಂತರ್ಗಾಮಿ ಐಎನ್‌ಎಸ್(INS) ವಾಗಿರ್ ಇದೇ ಡಿಸೆಂಬರ್ ತಿಂಗಳಿನಲ್ಲಿ ತನ್ನ ಕಾರ್ಯಾಚರಣೆ ಪರಂಬಿಸುವ ನಿರೀಕ್ಷೆ ಇದೆ, ಹಾಗೂ 6 ನೇ ಜಲಾಂತರ್ಗಾಮಿ 'ಐಎನ್‌ಎಸ್(INS) ವಾಗ್ಶೀರ್' ನಿರ್ಮಾಣಕಾರ್ಯವು ಮುಕ್ತಾಯದ ಹಂತವನ್ನು ತಲುಪಿದೆ ಎಂದು ತಿಳಿದುಬಂದಿದೆ.

## ವಿಶ್ವಾದ್ಯಂತ ಇನ್‌ಸ್ಟಾಗ್ರಾಂ ಡೌನ್‌ಲೋಡ್‌ಗೆ ಭಾರತದ ಬಹುಪಾಲು



* ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಟಿಕ್‌ಟಾಕ್ ಆಪ್ ಸ್ಥಗಿತ (ಬ್ಯಾನ್)ವಾದ ಬಳಿಕ ಇನ್‌ಸ್ಟಾಗ್ರಾಂ ಈ ಟಿಕ್‌ಟಾಕ್ ಆಪ್ ನ ಸ್ಥಾನ ತುಂಬಲು ಆರಂಭಿಸಿದೆ, ಅಷ್ಟೇ ಅಲ್ಲದೇ ಇದೀಗ ದೇಶದಲ್ಲಿ ಇನ್‌ಸ್ಟಾಗ್ರಾಂ ಬಳಕೆದಾರರ ಸಂಖ್ಯೆ ಅತೀ ಹೆಚ್ಚಾಗುತ್ತಿದೆ.
* ಇದೀಗ ವಿಶ್ವಾದ್ಯಂತ ಇನ್‌ಸ್ಟಾಗ್ರಾಂ ಡೌನ್‌ಲೋಡ್ ಸಂಖ್ಯೆಯಲ್ಲಿ ಭಾರತ ದೇಶವೇ ಅತೀ ಹೆಚ್ಚಿನ ಬಹುಪಾಲನ್ನು ಹೊಂದಿದೆ.
* ಇಲ್ಲಿಯವರೆಗೂ ಅತಿ ಹೆಚ್ಚು ಡೌನ್‌ಲೋಡ್ ಆಗಿರುವ ನಾನ್ ಗೇಮಿಂಗ್ ಆಯಪ್‌ಗಳ ಪಟ್ಟಿಯಲ್ಲಿ ಟಿಕ್ ಟಾಕ್ ಅಗ್ರಸ್ಥಾನದಲ್ಲಿದೆ, ಅಷ್ಟೇ ಅಲ್ಲದೇ ಈ ಆಪ್ ವಿಶ್ವಾದ್ಯಂತ ಅಕ್ಟೋಬರ್ ತಿಂಗಳಿನಲ್ಲಿ ಟಿಕ್‌ಟಾಕ್ 5.7 ಕೋಟಿ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಆಗಿದೆ ಎಂದು ವರದಿಯಾಗಿದೆ, ಆದರೆ ಕಳೆದ 10 ತಿಂಗಳುಗಳಿಂದ ಟಿಕ್‌ಟಾಕ್ ಈ ಅಗ್ರಸ್ಥಾನವನ್ನು ಉಳಿಸಿಕೊಂಡು ಮುನ್ನಡೆದಿದೆ.
* ಇದೀಗ ಇನ್‌ಸ್ಟಾಗ್ರಾಂ 5.6 ಕೋಟಿ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಆಗಿ 2 ನೇ ಸ್ಥಾನದಲ್ಲಿದೆ.
* ಇತ್ತೀಚಿನ ದಿನಗಳಲ್ಲಿ ಇನ್‌ಸ್ಟಾಗ್ರಾಂ'ನ್ನು ಹೊಸದಾಗಿ ಡೌನ್‌ಲೋಡ್ ಮಾಡಿಕೊಂಡವರಲ್ಲಿ ಶೇ. 39 ಜನ ಭಾರತೀಯರೇ ಇದ್ದಾರೆ ಎಂದು ತಿಳಿದುಬಂದಿದೆ.
* ಅತಿ ಹೆಚ್ಚು ಡೌನ್‌ಲೋಡ್ ಆದ ನಾನ್ ಗೇಮಿಂಗ್ ಆಯಪ್‌ಗಳಲ್ಲಿ ಟಿಕ್ ಟಾಕ್ ಮತ್ತು ಇನ್‌ಸ್ಟಾಗ್ರಾಂ'ನ್ನು ಬಿಟ್ಟರೆ, ಫೇಸ್‌ಬುಕ್, ವಾಟ್ಸ್‌ಆಯಪ್ ಹಾಗೂ ಟೆಲಿಗ್ರಾಂ ಆಪ್'ಗಳು 3, & 4, ಹಾಗೂ 5 ನೇ ಸ್ಥಾನದಲ್ಲಿವೆ.

## ಭಾರತದ 72 ನೇ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರ ಹೊಮ್ಮಿದ ಮಿತ್ರಾಭ ಗುಹಾ



* ಭಾರತದ 72 ನೇ ಗ್ರ್ಯಾಂಡ್‌ಮಾಸ್ಟರ್ ಆಗಿ ಕೋಲ್ಕತ್ತದ ಮಿತ್ರಾಭ ಗುಹಾ ಅವರು ಹೊರ ಹೊಮ್ಮಿದ್ದಾರೆ.
* ಇತ್ತೀಚಿಗೆ ಸರ್ಬಿಯಾದಲ್ಲಿ ನಡೆದ ಚೆಸ್ ಟೂರ್ನಿಯಲ್ಲಿ ಅಗತ್ಯವಿದ್ದ 3 ನೇ ಹಾಗೂ ಅಂತಿಮ ನಾರ್ಮ್ ನ್ನು ಮಿತ್ರಾಭ ಗುಹಾ ಅವರು ಪೂರ್ಣಗೊಳಿಸಿದ್ದಾರೆ.
* ಭಾರತದ ಕೋಲ್ಕತ್ತದ ಮಿತ್ರಾಭ ಗುಹಾ ಅವರು ಈ ಚೆಸ್ ಟೂರ್ನಿಯಲ್ಲಿನ 9 ನೇ ಸುತ್ತಿನಲ್ಲಿ ಸರ್ಬಿಯಾದ ಗ್ರ್ಯಾಂಡ್‌ಮಾಸ್ಟರ್ ನಿಕೋಲಾ ಸೆಡ್ಲಾಕ್ ಅವರನ್ನು ಸೋಲಿಸಿ ಗ್ರ್ಯಾಂಡ್‌ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ.
* ಭಾರತೀಯ ಮಿತ್ರಾಭ ಗುಹಾ ಅವರು ಕೆಲ ದಿನಗಳ ಹಿಂದೆ ಬಾಂಗ್ಲಾದೇಶದಲ್ಲಿ ಜರುಗಿದ ಶೇಖ್ ರಸೆಲ್ ಗ್ರ್ಯಾಂಡ್‌ಮಾಸ್ಟರ್ ಟೂರ್ನಿಯಲ್ಲಿ 2 ನೇ ಜಿಎಂ ನಾರ್ಮ್ ಪಡೆದುಕೊಂಡು, ಅದೇ 2 ನೇ ಸುತ್ತಿನಲ್ಲಿ 2500 ಎಲೋರೇಟಿಂಗ್‌ನ್ನು ಪಡೆದುಕೊಂಡಿದ್ದಾರೆ.

## ಪಾಕಿಸ್ತಾನ ರಾಷ್ಟ್ರಕ್ಕೆ ಸುಧಾರಿತ ಯುದ್ಧನೌಕೆ ರವಾನಿಸಿದ ಚೀನಾ



* ಇತ್ತೀಚಿನ ದಿನಗಳಲ್ಲಿ ಚೀನಾ ಮತ್ತು ಪಾಕಿಸ್ತಾನ ದೇಶಗಳ ನಡುವಿನ ಗೆಳತನ ಇನ್ನಷ್ಟು ಉತ್ತಮವಾಗುತ್ತಿದೆ, ಈ ಹಿನ್ನಲೆಯಿಂದಾಗಿ ಚೀನಾ ತನ್ನ ಸುಧಾರಿತ ಯುದ್ಧನೌಕೆಯನ್ನು ಪಾಕಿಸ್ತಾನಕ್ಕೆ ರವಾನಿಸಿದೆ.
* ಭಾರತವು ಅಫ್ಘಾನಿಸ್ತಾನ ರಾಷ್ಟ್ರದ ಬಗೆಗಿನ ಸಭೆಯನ್ನು ಆಯೋಜಿಸುತ್ತಿದೆ, ಈ ಸಭೆಯಿಂದ ಚೀನಾ ಮತ್ತು ಪಾಕಿಸ್ತಾನ ರಾಷ್ಟ್ರಗಳು ಹಿಂದೆ ಸರಿದಿವೆ, ಅಷ್ಟೇ ಅಲ್ಲದೇ ಚೀನಾ ದೇಶವು ಹಿಂದೂ ಮಹಾಸಾಗರ ಹಾಗೂ ಅರಬ್ಬಿ ಸಮುದ್ರದಲ್ಲೂ ತನ್ನ ಪ್ರಾಬಲ್ಯ ಉತ್ತವಾಗಿಸಿಕೊಳ್ಳಲು ಎಲ್ಲಿಲ್ಲದ ಕಸರತ್ತು ನಡೆಸುತ್ತಿದೆ.
* ಹಿಂದೂ ಮಹಾಸಾಗರದಲ್ಲಿ ಶಾಂತಿ, ಸ್ಥಿರತೆ ಕಾಪಾಡಲು ಪಾಕಿಸ್ತಾನದ ಸಾಮರ್ಥ್ಯವನ್ನು ಪಿಎನ್‌ಎಸ್ ತುಘ್ರಿಲ್ ಹೆಚ್ಚಿಸಲಿದೆ ಎಂದು ಚೀನಾ ರಾಷ್ಟ್ರಕ್ಕೆ ಪಾಕಿಸ್ತಾನದ ರಾಯಭಾರಿ ಮೊಯಿನ್ ಉಲ್ ಹಕ್ ಅವರು ತಿಳಿಸಿದ್ದಾರೆ.
* ಚೀನಾ ದೇಶವು ಈ ಯುದ್ಧನೌಕೆ ಸ್ಟೇಟ್ ಶಿಪ್ ಬಿಲ್ಡಿಂಗ್ ಕಾರ್ಪೊರೇಷನ್ ಲಿಮಿಟೆಡ್ ಅಡಿಯಲ್ಲಿ ನಿರ್ಮಿಸಿದೆ, ಇತ್ತೀಚಿಗೆ ಈ ನೌಕೆಯನ್ನು ಶಾಂಘೈನಲ್ಲಿ ಜರುಗಿದ ಸಭೆಯೊಂದರಲ್ಲಿ ಪಾಕಿಸ್ತಾನಕ್ಕೆ ಹಸ್ತಾಂತರಿಸಲಾಗಿದೆ, ಈ ಯುದ್ಧ ನೌಕೆಗೆ ಪಿಎನ್‌ಎಸ್ ತುಘ್ರಿಲ್ ಎಂದು ನಾಮಕರಣ ಮಾಡಲಾಗಿದೆ ಎಂದು ಗ್ಲೋಬಲ್ ಟೈಮ್ಸ್ ಮಾಹಿತಿ ನೀಡಿದೆ.
* ಪಿಎನ್‌ಎಸ್ ತುಘ್ರಿಲ್ ಯುದ್ಧ ನೌಕೆಯು 2017 ರಲ್ಲಿ ತನ್ನ ನಿರ್ಮಾಣ ಕಾರ್ಯ ಪ್ರಾರಂಭಿಸಿತ್ತು, ಈ ನೌಕೆ ಅತ್ಯಾಧುನಿಕವಾಗಿದೆ, ಈ ನೌಕೆಯ ಗಾಳಿಯಲ್ಲಿರುವ ವಿಮಾನಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಶಕ್ತಿ ಸಾಮರ್ಥ್ಯವನ್ನು ಹೊಂದಿದೆ.
* ಪಾಕಿಸ್ತಾನಕ್ಕಾಗಿಯೇ ಚೀನಾ ದೇಶವು ಸಿದ್ಧಪಡಿಸುತ್ತಿರುವ 054 ಮಾದರಿಯ 4 ಯುದ್ಧನೌಕೆಗಳಲ್ಲಿ ಇದು ಮೊದಲನೇ ಯುದ್ಧ ನೌಕೆಯಾಗಿದೆ, ಇನ್ನುಳಿದ ನೌಕೆಗಳನ್ನು ಚೀನಾ ಸ್ಟೇಟ್ ಶಿಪ್ ಬಿಲ್ಡಿಂಗ್ ಕಾರ್ಪೊರೇಷನ್ ಲಿಮಿಟೆಡ್'ನಲ್ಲಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಚೀನಾ ತಿಳಿಸಿದೆ.

## ಕಲ್ಲಿದ್ದಲು ಗಣಿ ಯೋಜನೆ ಸಂತ್ರಸ್ತರಿಗೆ 10,000 ಕೋಟಿ ರೂ. ಪರಿಹಾರಘೋಷಣೆ



* ಪ್ರಸ್ತುತ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳ ರಾಜ್ಯದಲ್ಲಿನಬಿರ್ಭೂಮ್‌ಜಿಲ್ಲೆಯದಿಯೋಚ ಪಚಮಿಕಲ್ಲಿದ್ದಲುಗಣಿಗಾರಿಕೆಯೋಜನೆಯ ಅಡಿಯಲ್ಲಿನ ಸಂತ್ರಸ್ತರಿಗೆ 10,000 ಕೋಟಿ ರೂ. ಪರಿಹಾರ ಘೋಷಣೆ ಮಾಡಿದ್ದಾರೆ.
* ಈ ಕಲ್ಲಿದ್ದಲು ಗಣಿ ಯೋಜನೆಯು ವಿಶ್ವದ 2 ನೇ ಅತಿದೊಡ್ಡ ಕಲ್ಲಿದ್ದಲು ಗಣಿಗಾರಿಕೆ ಯೋಜನೆಯಾಗಿದೆ, ಇದ್ದಕಾಗಿಯೇ ದಿಯೋಚ ಪಚಮಿ ಹರಿಸಿಂಘ ದೇವಾಂಗ್‌ಗಂಜ್‌ಗೆ ಕೆಲ ವರ್ಷಗಳ ಹಿಂದೆ ಪಶ್ಚಿಮ ಬಂಗಾಳ ಸರ್ಕಾರವೇ ಭೂಮಿ ಮಂಜೂರು ಮಾಡಿಕೊಟ್ಟಿದೆ ಎಂದು ತಿಳಿದು ಬಂದಿದೆ.
* ಇತ್ತೀಚಿಗೆ ಪಶ್ಚಿಮ ಬಂಗಾಳ ರಾಜ್ಯದ ಸಿಂಗೂರ್‌ನಲ್ಲಿ ನಡೆದ ದುರ್ಘಟನೆ ಇನ್ನು ಮುಂದೇ ನಡೆಯಲು ನಾವುಬಿಡುವುದಿಲ್ಲ ಎಂದುಪಶ್ಚಿಮಬಂಗಾಳತಿಳಿಸಿದೆ.

## ಭಾರತಆಯೋಜಿಸಿದ್ದಅಫ್ಘಾನ್‌ಕುರಿತುಸಭೆಯಿಂದಹೊರಗುಳಿದ ಚೀನಾ,ಪಾಕಿಸ್ತಾನ



* ಭಾರತವು ಇತ್ತೀಚಿಗೆ ಅಫ್ಘಾನಿಸ್ತಾನ ಕುರಿತು ಚರ್ಚೆ ನಡೆಸಲು ಸಭೆಯನ್ನು ಆಯೋಜಿಸಿದ್ದು, ಈ ಸಭೆಯಿಂದ ಪಾಕಿಸ್ತಾನ ಮತ್ತು ಚೀನಾ ದೇಶಗಳು ಹಿಂದೆ ಸರಿದಿವೆ.
* ಭಾರತವು ಆಯೋಜಿಸಿರುವ ಈ ಸಭೆಗೆ ನೆರೆಯ ರಾಷ್ಟ್ರಗಳಾದ ಕಜಕಿಸ್ತಾನ್, ಕಿರ್ಗಿಸ್ತಾನ್, ತಜಕಿಸ್ತಾನ್, ತುರ್ಕಮೆನಿಸ್ತಾನ್ ಹಾಗೂ ಉಜ್ಬೇಕಿಸ್ತಾನ್ ಉನ್ನತ ಭದ್ರತಾ ಅಧಿಕಾರಿಗಳು ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ, ಅಷ್ಟೇ ಅಲ್ಲದೇ ಈ ಸಭೆಯು ಅಜಿತ್ ದೋವಲ್ ಅವರ ಸಮ್ಮುಖದಲ್ಲಿ ಜರುಗಲಿದೆ..
* ಈ ಸಭೆಗೆ ರಷ್ಯಾ ಹಾಗೂ ಇರಾನ್ ದೇಶದ ಪ್ರತಿನಿಧಿಗಳು ಕೂಡ ನಾಳೆ ಪಾಲ್ಗೊಳ್ಳಲಿದ್ದಾರೆ, ಪ್ರಸ್ತುತ ಭಯೋತ್ಪಾದನೆ, ಮಾದಕವಸ್ತುಗಳಕಳ್ಳಸಾಗಣೆಬೆದರಿಕೆಗಳನ್ನುಒಟ್ಟಾಗಿಎದುರಿಸುವಹಿನ್ನಲೆಯಿಂದಾಗಿ ಈ ಸಭೆಯನ್ನು ಆಯೋಜಿಸಲಾಗಿದೆ.
* ಈ ಹಿಂದೆ ಪ್ರಾದೇಶಿಕ ಭದ್ರತೆಗೆ ಸಂಬಂಧಿಸಿದಂತೆ 2018 ರ ಸೆಪ್ಟೆಂಬರ್ ಹಾಗೂ 2019 ರ ಡಿಸೆಂಬರ್ ನಲ್ಲಿ ಇರಾನ್ ನಲ್ಲಿ ಸಭೆ ಜರುಗಿವೆ.
* ಭಾರತ ಆಯೋಜಿಸಿರುವ ಈ ಸಭೆಯು ದೆಹಲಿ ಪ್ರಾದೇಶಿಕ ಸಂವಾದ ಎಂಬ ಹೆಸರಿನಲ್ಲಿ ನಡೆಯತ್ತಿದೆ.

## ಪಾಕಿಸ್ತಾನ ಇದೀಗ ತನ್ನ ಎಲ್ಲಾ ಅಂತಾರಾಷ್ಟ್ರೀಯ ವಿಮಾನಗಳಿಗೆ ಅನುಮತಿನೀಡಿದೆ



* ಪ್ರಸ್ತುತ ಪಾಕಿಸ್ತಾನಕ್ಕೆ ಆಗಮಿಸುವ ಮತ್ತು ಅಲ್ಲಿದಂಲೇ ನಿರ್ಗಮಿಸುವ ಎಲ್ಲಾ ಅಂತಾರಾಷ್ಟ್ರೀಯ ವಿಮಾನಗಳಿಗೆ ಇದೇ ನವೆಂಬರ್ 10 ರಿಂದ ಪೂರ್ಣ ಪ್ರಮಾಣದ ಪ್ರಯಾಣಿಕ ಸಾಮರ್ಥ್ಯ ಜೊತೆ ಕಾರ್ಯನಿರ್ವಹಿಸಲು ಪಾಕಿಸ್ತಾನ ರಾಷ್ಟ್ರವು ಅನುಮತಿ ನೀಡುತ್ತಿದೆ ಎಂದು ತಿಳಿಸಿದೆ.
* ಅಷ್ಟೇ ಅಲ್ಲದೇ ಈ ವಿಷಯದ ಬಗೆಗಿನ ಮಾಹಿತಿಯನ್ನು ಪಾಕಿಸ್ತಾನದ ವಾಯುಯಾನ ಪ್ರಾಧಿಕಾರವು ತನ್ನ ಎಲ್ಲಾ ವೈಮಾನಿಕ ಸಿಬ್ಬಂದಿಗೆ ನೋಟಿಸ್ ನ್ನು ರವಾನಿಸಿದೆ.
* ಇತ್ತೀಚಿಗೆ ಪಾಕಿಸ್ತಾನ ರಾಷ್ಟ್ರವು 'ಗೋ ಫಸ್ಟ್' ವಿಮಾನಯಾನ ಸಂಸ್ಥೆಯ ಶ್ರೀನಗರ ಶಾರ್ಜಾ ನಡುವಿನ ವಿಮಾನ ಹಾರಾಟದ ವಾಯುಪ್ರದೇಶವನ್ನು ಬಳಸಲು ಅನುಮತಿ ನಿರಾಕರಿಸಿತ್ತು.
* ಇದಾದ ಬಳಿಕ ಇತ್ತೀಚಿಗಷ್ಟೇ ಭಾರತದ ಶ್ರೀನಗರ ಶಾರ್ಜಾ ವಿಮಾನ ಹಾರಾಟವು ಪಾಕಿಸ್ತಾನದ ವಾಯುಪ್ರದೇಶ ಬಳಸಲು ಅನುಮತಿಯನ್ನು ಕೋರಿತ್ತು, ಅಷ್ಟೇ ಅಲ್ಲದೇ ಭಾರತವು ರಾಜತಾಂತ್ರಿಕ ಮಾರ್ಗಗಳ ಮೂಲಕ ಪಾಕಿಸ್ತಾನ ರಾಷ್ಟ್ರಕ್ಕೆ ಮನವಿಯನ್ನು ಮಾಡಿ ಕೊಂಡಿತ್ತು.
* ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನ ದೇಶದಲ್ಲಿ ಕೋವಿಡ್ 19 ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗುತ್ತಿರುವ ಹಿನ್ನಲೆಯಲ್ಲಿ ರಾಷ್ಟ್ರೀಯ ಕಮಾಂಡ್ ಮತ್ತು ಕಾರ್ಯನಿರ್ವಹಣಾ ಕೇಂದ್ರವು ಈ ನಿರ್ಧಾರವನ್ನುತಗೆದುಕೊಂಡಿದೆಎಂದುತಿಳಿಸಿದೆ.

## ಮೇ 2022 ರವರೆಗೆ ಉಚಿತ ಪಡಿತರ ಯೋಜನೆ ಮುಂದುವರಿಸಲುನಿರ್ಧರಿಸಿದದೆಹಲಿಸರ್ಕಾರ



* ಪ್ರಸ್ತುತ ದೆಹಲಿ ಸರ್ಕಾರವು ಉಚಿತ ಪಡಿತರ ಯೋಜನೆಯನ್ನು ಇನ್ನೂ ಮುಂದಿನ ಆರು ತಿಂಗಳವರೆಗೆ ಅನಾದರೆ ಮೇ 2022 ರವರೆಗೆ ಮುಂದುವರಿಸಲು ದೆಹಲಿಯ AAP ಸರ್ಕಾರವು ತರ್ಮಾನಿಸಿದೆ, ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಳಿಸಿದ್ದಾರೆ.
* ಕೋವಿಡ್ 19 ನಿಂದಾಗಿ ಅದೆಷ್ಟೋ ಜನರು ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ, ಹಾಗೂ ಜನರು ದಿನಕ್ಕೆ ಎರಡು ಹೊತ್ತಿನ ಊಟಕ್ಕೂ ಪರದಾಡುತ್ತಿದ್ದಾರೆ, ಈ ಪರಿಸ್ಥಿತಿಯನ್ನು ಅರಿತ ದೆಹಲಿಯ ಸರ್ಕಾರವು ಉಚಿತ ಪಡಿತರ ಯೋಜನೆಯನ್ನು ಮುಂದಿನ '6' ತಿಂಗಳು ವಿಸ್ತರಿಸಲು ನಿರ್ಧರಿಸಿದೆ.
* ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯ ಮೂಲಕ ಉಚಿತ ಪಡಿತರ ವಿತರಣೆಯನ್ನು ನ.30ರ ವರೆಗೆ ಮಾತ್ರ ವಿತರಿಸಲಾಗುತ್ತದೆ ಎಂದು ತಿಳಿಸಿತ್ತು, ಇದೀಗ ಕೇಂದ್ರ ಸರ್ಕಾರವು ಪಡಿತರ ವಿತರಣೆಯ ಯಾವುದೇ ಪ್ರಸ್ತಾವ ತಿಳಿಸಿಲ್ಲ.
* ಇದೀಗ ದೆಹಲಿ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ಹಾಗೂ (PMJKY) ಪಿಎಂಜಿಕೆಎವೈ ಅಡಿಯಲ್ಲಿ ಫಲಾನುಭವಿಗಳಿಗೆ ಉಚಿತ ಪಡಿತರವನ್ನು ಮುಂದುವರೆಸಲು ಸಿದ್ಧವಾಗಿದೆ.
* ಪ್ರಸ್ತುತ ದೆಹಲಿಯಲ್ಲಿ 2,000 ಕ್ಕೂ ಅಧಿಕ ನ್ಯಾಯಬೆಲೆ ಅಂಗಡಿಗಳಿವೆ, 17.77 ಲಕ್ಷ ಪಡಿತರ ಚೀಟಿದಾರರು ಹಾಗೂ ಸುಮಾರು 72.78 ಲಕ್ಷ ಫಲಾನುಭವಿಗಳಿದ್ದಾರೆ, ಇದೀಗ ಉಚಿತ ಪಡಿತರವನ್ನು ನೀಡಲಾಗುತ್ತಿದೆ ಎಂದು ದೆಹಲಿ ಸರ್ಕಾರ ತಿಳಿಸಿದೆ.

## 'RCB' ತಂಡಕ್ಕೆ ಮುಖ್ಯ ಕೋಚ್ ಆಗಿ ಸಂಜಯ್ ಬಂಗಾರ್ ನೇಮಕ



* ಭಾರತ ತಂಡದ ಮಾಜಿ ಆಲ್ ರೌಂಡರ್ ಸಂಜಯ್ ಬಂಗಾರ್ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ (IPL) 15 ನೇ ಆವೃತ್ತಿಯ ಟೂರ್ನಿಗೆ ರಾಯಲ್ ಚಾಲೆಂಜರ್ಸ್

ಬೆಂಗಳೂರು (RCB) ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ, RCB ಮಾಹಿತಿ ನೀಡಿದೆ.
* ಈ ಮೊದಲು ಮೈಕ್ ಹೇಸನ್ ಅವರು RCB ತಂಡಕ್ಕೆ ಮುಖ್ಯ ಕೋಚ್ ಆಗಿ 2021 ರ ಟೂರ್ನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು, ಇದೀಗ ಇವರು ಆರ್ಸಿಬಿ(RCB)ಯ ಕ್ರಿಕೆಟ್ ಡೈರೆಕ್ಟರ್ ಆಗಿಮುಂದುವರೆಯಲಿದ್ದಾರೆಎಂದುRCBತಿಳಿಸಿದೆ.

## 11- 11- 2021

### ವೈಸ್ ಅಡ್ಮಿರಲ್ ಆರ್ ಹರಿಕುಮಾರ್ ಮುಂದಿನ ನೌಕಾಪಡೆ ಮುಖ್ಯಸ್ಥರಾಗಿನೇಮಕ



* ಪ್ರಸ್ತುತ ಕೇಂದ್ರ ರಕ್ಷಣಾ ಸಚಿವಾಲಯವು ವೈಸ್ ಅಡ್ಮಿರಲ್ ಆರ್ ಹರಿಕುಮಾರ್'ಅವರನ್ನು ಮುಂದಿನ ನೌಕಾಪಡೆ ಮುಖ್ಯಸ್ಥರಾಗಿ ನೇಮಕ ಮಾಡುವದಾಗಿ ಆದೇಶ ಹೊರಡಿಸಿದೆ.
* ವೈಸ್ ಅಡ್ಮಿರಲ್ ಆರ್ ಹರಿಕುಮಾರ್ ಅವರು ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಆಗಿದ್ದರು, ಇದೀಗ ಇವರು ಮುಂದಿನ ನೌಕಾಪಡೆ ಮುಖ್ಯಸ್ಥರಾಗಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ, ಅಷ್ಟೇ ಅಲ್ಲದೇ ನವೆಂಬರ್. 30 ರಂದು ಅಡ್ಮಿರಲ್ ಕರಂಬಿರ್ ಸಿಂಗ್ ಅವರು ನಿವೃತ್ತಿಯಾದ ನಂತರ ಅವರ ಈ ಸ್ಥಾನವನ್ನು ವೈಸ್ ಅಡ್ಮಿರಲ್ ಹರಿ ಕುಮಾರ್ ಅವರು ವಹಿಸಿಕೊಳ್ಳಲಿದ್ದಾರೆ.
* ವೈಸ್ ಅಡ್ಮಿರಲ್ ಹರಿ ಕುಮಾರ್ ಅವರು ಈ ಮೊದಲು ಹೆಡ್ಕ್ವಾರ್ಟರ್ಸ್ ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್'ನ ಇಂಟಿಗ್ರೇಟೆಡ್ ಸ್ಟಾಫ್ ಕಮಿಟಿಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ.
* ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಆಗಿದ್ದ ಹರಿ ಕುಮಾರ್ ಅವರು 1983 ಬ್ಯಾಚ್ ಅಧಿಕಾರಿಯಾಗಿದ್ದಾರೆ, ಹಾಗೂ ಇವರಿಗೆ PVSM, AVSM ಮತ್ತು VSM ಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಇವರು ಭಾರತೀಯ ನೌಕಾಪಡೆಯ ವಿಮಾನವಾಹಕ ನೌಕೆ INS ವಿರಾಟ್ ಗೆ ಕಮಾಂಡರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

### ಪಿಂಕ್‌ಬಾಲ್‌ಟೆಸ್ಟ್‌ಸಿದ್ಧಾಂತಾಪ್ರತಿಪಾದಕಬ್ರಾಡ್‌ಶಾನಿಧನ



* ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್‌ನ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪಿಂಕ್‌ಬಾಲ್ ಟೆಸ್ಟ್ ಪ್ರತಿಪಾದಕ ಕೀತ್ ಬ್ರಾಡ್‌ಶಾ ಅವರು ತಮ್ಮ 58 ನೇ ವಯಸ್ಸಿನಲ್ಲಿ ವಿಧಿವಶರಾಗಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ವರದಿ ಮಾಡಿದೆ.
* ಈ ಹಿಂದೆ ಇವರು 1980 ರಲ್ಲಿ ಆಸ್ಟ್ರೇಲಿಯಾದ ಟಾಸ್ಮೇನಿಯಾ ತಂಡದಲ್ಲಿ ಪ್ರಥಮ ದರ್ಜೆ ಕ್ರಿಕೆಟ್ ನಲ್ಲಿ ಭಾಗಿಯಾಗಿದ್ದರು, ತದನಂತರ ಅಲ್ಲಿಂದ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು, ಅಷ್ಟೇ ಅಲ್ಲದೇ ಎಂಸಿಸಿಗೆ ಪ್ರಥಮ ಬ್ರಿಟಿಷೇತರ ಸಿಇಒ ಆಗಿ 2006 ರಲ್ಲಿ ನೇಮಕಗೊಂಡರು.
* ಬ್ರಾಡ್‌ಶಾ ಅವರು ಮತ್ತೇ 2011 ರಲ್ಲಿ ಆಸ್ಟ್ರೇಲಿಯಾಕ್ಕೆ ವಾಪಸಾದರು ಅಲ್ಲಿಂದ ಅವರು ಸೌತ್ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆಗೆ CEOಆಗಿ ನೇಮಕಗೊಂಡರು.
* ಬ್ರಾಡ್‌ಶಾ ಅವರು ಹೊನಲು ಬೆಳಕಿನ ಟೆಸ್ಟ್ ಕ್ರಿಕೆಟ್'ನ್ನು ಆರಂಭಿಸಿದರು, 2015 ರಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ತಂಡಗಳ ಮಧ್ಯೆ ಅಡಿಲೇಡ್‌ನಲ್ಲಿ ಪಿಂಕ್ ಬಾಲ್ ಟೆಸ್ಟ್'ನ್ನುನಡೆಸಿದರು.

### ಹಿಂದು ದೇವಾಲಯವನ್ನು ಮರುನಿರ್ಮಾಣ ಮಾಡಿ ಉದ್ಘಾಟಿಸಿದ ಪಾಕಿಸ್ತಾನ'ಸುಪ್ರೀಂCJ'



* ಈ ಹಿಂದೆ ಪಾಕಿಸ್ತಾನ ರಾಷ್ಟ್ರದಲ್ಲಿನ ಹಿಂದು ದೇವಾಲಯವನ್ನು ದುಷ್ಕರ್ಮಿಗಳು ಹಾಳುಮಾಡಿದ್ದರು, ಇದೀಗ ಈ ಹಿಂದು ದೇವಾಲಯವನ್ನು ಮರುನಿರ್ಮಾಣ ಮಾಡಲಾಗಿದೆ.
* ಪಾಕಿಸ್ತಾನದಲ್ಲಿನ ಈ ಹಿಂದೂ ದೇವಾಲಯವನ್ನು ಅಲ್ಲಿನ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಗುಲ್ಜರ್ ಅಹ್ಮದ್ ಅವರು ಉದ್ಘಾಟಣೆ ಮಾಡಿದರು.
* ಇದೇ ಸಂಧರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಗುಲ್ಜರ್ ಅಹ್ಮದ್ ಅವರು ಅಲ್ಪಸಂಖ್ಯಾತರ ರಕ್ಷಣೆಗೆ ಪಾಕಿಸ್ತಾನ ದೇಶವು ಬದ್ಧವಾಗಿದೆ ಎಂದು ತಿಳಿಸಿದ್ದಾರೆ.
* ಈ ಹಿಂದೂ ದೇವಾಲಯವು ಪಾಕಿಸ್ತಾನ ರಾಷ್ಟ್ರದ ಕರಾಕ್ ಜಿಲ್ಲೆಯ ತೇರಿ ಗ್ರಾಮದಲ್ಲಿ ಶತಮಾನಕ್ಕೂ ಹಳೆಯದಾಗಿರುವ ಶ್ರೀ ಪರಮಹಂಸಜಿ ಮಹರಾಜ್ ದೇಗುಲವನ್ನು ಈ ಹಿಂದಿನ ವರ್ಷ ಡಿಸೆಂಬರ್‌ನಲ್ಲಿ ದುಷ್ಕರ್ಮಿಗಳ ಗುಂಪುವೊಂದು ಹಾಳುಮಾಡಿತ್ತು.
* ಇದೇ ಸಂಧರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ಗುಲ್ಜರ್ ಅಹ್ಮದ್ ಅವರು ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿನ ಪ್ರಥಮ ಹಿಂದು ದೇವಾಲಯ ನಿರ್ಮಿಸುವುದಕ್ಕಾಗಿ ಮಂಜೂರು ಮಾಡಲಿರುವ ಜಮೀನನ್ನು ಅಧಿಕಾರಿಗಳ ಮೂಲಕ ದೇವಾಲಯದ ಆಡಳಿತ ಮಂಡಳಿಗೆ ನೀಡಿದರು.
* ಈ ಹಿಂದೂ ದೇವಾಲಯ, ಹಾಗೂ ರುದ್ರಭೂಮಿ ಮತ್ತು ಸಮುದಾಯ ಕೇಂದ್ರ ಸ್ಥಾಪನೆ ಮಾಡಲುಈಹಿಂದೆ2016ರಲ್ಲಿಜಮೀನುಮಂಜೂರುಮಾಡಲಾಗಿತ್ತುಎಂದುತಿಳಿಸಲಾಗಿದೆ.

### ಟ್ವಿಟರ್'ನ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಮೋದಿ 2ನೇ ಸ್ಥಾನ ಮತ್ತುಸಚಿನತೆಂಡೂಲ್ಕರ್'ಗೆ35ನೇಸ್ಥಾನ



* ಪ್ರಸ್ತುತ ಅಮೇರಿಕದ ಗಾಯಕ ಟೇಲರ್ ಸ್ವಿಫ್ಟ್ ಮೊದಲ ಸ್ಥಾನದಲ್ಲಿದ್ದಾರೆ, ಇವರ ನಂತರದ ಸ್ಥಾನ ಅಂದರೆ 2ನೇ ದಲ್ಲಿ ಭಾರತೀಯ ಪ್ರಧಾನಿ ನರೇಂದ್ರ ಮೋದಿಯವರಿದ್ದಾರೆ.
* ಇತ್ತೀಚಿಗೆ ಟ್ವಿಟರ್'ನಲ್ಲಿನ ಅತ್ಯಂತ ಪ್ರಭಾವಶಾಲಿ 50 ವ್ಯಕ್ತಿಗಳ ಪಟ್ಟಿಯನ್ನು, ಗ್ರಾಹಕ ಗುಪ್ತಚರ ಕಂಪನಿ ಬ್ರಾಂಡ್ ವಾಚ್ ಬಹಿರಂಗ ಪಡಿಸಿದೆ, ಈ ಪ್ರಭಾವಶಾಲಿ 50 ವ್ಯಕ್ತಿಗಳ ಪಟ್ಟಿಯಲ್ಲಿ ಭಾರತೀಯ ಶ್ರೇಷ್ಠ ಕ್ರಿಕೆಟ ಆಟಗಾರ ಸಚಿನ್ ತೆಂಡೂಲ್ಕರ್ ಅವರು 35ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.
* ಗ್ರಾಹಕ ಗುಪ್ತಚರ ಕಂಪನಿ ಬ್ರಾಂಡ್ ವಾಚ್ ಬಹಿರಂಗ ಪಡಿಸಿರುವ ಅತ್ಯಂತ ಪ್ರಭಾವಶಾಲಿ ಪಟ್ಟಿಗಳಲ್ಲಿ ಭಾರತೀಯ ಶ್ರೇಷ್ಠ ಕ್ರಿಕೆಟ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಈ ಶ್ರೇಷ್ಠ ಬಲಗೈ ಬ್ಯಾಟ್ಸ್‌ಮ್ಯಾನ್, ಅಮೇರಿಕನ್ ನಟರಾದ ಡ್ವೇನ್ ಜಾನ್ಸನ್ ಹಾಗೂ ಲಿಯೊನಾರ್ಡೊ ಡಿ ಕ್ಯಾಪ್ರಿಯೋ, ಇವರಿಬ್ಬರಲ್ಲದೇ ಅಮೇರಿಕದ ಮಾಜಿ ಪ್ರಥಮ ಮಹಿಳೆ ಮಿಚೆಲ್ ಒಬಾಮಾ ಅವರಿಗಿಂತಲೂ ಮುಂಚೂಣಿಯಲ್ಲಿದ್ದಾರೆ.

## ಯುನೆಸ್ಕೋ ಮಾನ್ಯತೆ ಪಡೆದ ಶ್ರೀನಗರವು ತಿಂಗಳ ಸಂಭ್ರಮಾಚರಣೆಆರಂಭಿಸಿದೆ



* ಪ್ರಸ್ತುತ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ (UNESCO) ಶ್ರೀನಗರವನ್ನು ಯುನೆಸ್ಕೋ ಕ್ರಿಯೇಟಿವ್ ಸಿಟೀಸ್ ನೆಟ್ ವರ್ಕ್'ನ ಭಾಗವಾಗಿ ನೇಮಕ ಮಾಡಿದೆ.
* ಇದೀಗ ಜಮ್ಮು ಮತ್ತು ಕಾಶ್ಮೀರವು ವಿಶ್ವದಾದ್ಯಂತ 295 ಸೃಜನಶೀಲ ನಗರಗಳ ಜಾಲದ ಕ್ಲಬ್'ಗೆ ಪ್ರವೇಶವನ್ನು ಪಡೆದುಕೊಂಡಿದೆ.
* ಈ ಮೊದಲು ಮುಂಬೈ, ಚೆನ್ನೈ, ಹೈದರಾಬಾದ್, ವಾರಣಾಸಿ ಮತ್ತು ಜೈಪುರದ ನಗರಗಳು ಯುನೆಸ್ಕೋ ಮಾನ್ಯತೆಯನ್ನು ಪಡೆದಿವೆ, ಇದೀಗ ಈ ಪಟ್ಟಿಗೆ ಶ್ರೀನಗರವು ಸೇರಿಕೊಂಡಿದೆ.
* ಪ್ರಸ್ತುತ ಯುನೆಸ್ಕೋ ಮಾನ್ಯತೆ ಪಡೆದ ಶ್ರೀನಗರವು ಭಾರತೀಯ 6ನೇ ನಗರವಾಗಿದೆ.
* ಶ್ರೀನಗರಕ್ಕೆ ಸಿಕ್ಕಿರುವ ಮಾನ್ಯತೆಯ ಖುಷಿಯನ್ನು ಸಂಭ್ರಮಿಸಲು ಒಂದು ತಿಂಗಳುಗಳ ಕಾಲ ಸಂಭ್ರಮಾಚರಣೆ ಕಾರ್ಯಕ್ರಮಗಳನ್ನ ಆಯೋಜಿಸಲಾಗಿದೆ ಎಂದು ಜಮ್ಮು ಕಾಶ್ಮೀರದ ಶ್ರೀನಗರ ಮುನ್ಸಿಪಲ್ ಕಾರ್ಪೊರೇಷನ್ ಮೇಯರ್ ಜುನೈದ್ ಅಜೀಮ್ ಮಟ್ಟು ಅವರು ಮಾಹಿತಿ ನೀಡಿದ್ದಾರೆ.

## ಆಫ್ಘಾನಿಸ್ತಾನದನೆಲವುಉಗ್ರವಾದಕ್ಕೆಬಳಕೆಯಾಗದಂತೆತಡೆಯಲು ನಿರ್ಧಾರ



* ಪ್ರಸ್ತುತ ಭಾರತದ ನೇತೃತ್ವದ ಭದ್ರತಾ ಸಂವಾದದಲ್ಲಿ ಅಫ್ಘಾನಿಸ್ತಾನ ರಾಷ್ಟ್ರದ ನೆಲವನ್ನು ಜಾಗತಿಕವಾಗಿ ಭಯೋತ್ಪಾದನೆಗೆ ಬಳಕೆ ಮಾಡಿಕೊಳ್ಳಲು ಅವಕಾಶ ನೀಡದಂತೆ ನಿರ್ಧರಿಸಲಾಗಿದೆ.
* ಈ ನಿರ್ಧಾರಕ್ಕೆ ಭಾರತ, ರಷ್ಯಾ, ಇರಾನ್, ಮತ್ತು ಮಧ್ಯಪ್ರಾಚ್ಯದ ಐದು ರಾಷ್ಟ್ರಗಳು ದೆಹಲಿಯಲ್ಲಿ ನಡೆದ ಸಂವಾದವನ್ನು ನಡೆಸಿ ಈ ನಿರ್ಧಾರವನ್ನು ಕೈಗೊಂಡಿವೆ.
* ಈಗಿನ ಅಫ್ಘಾನಿಸ್ತಾನದಲ್ಲಿನ ಪರಿಸ್ಥಿತಿಯ ಬಗ್ಗೆ ಭಾರತವು ಆಯೋಜಿಸಿರುವ ಈ ಸಂವಾದದಲ್ಲಿ ಮುಕ್ತ ಹಾಗೂ ನೈಜವಾಗಿ ಎಲ್ಲರನ್ನೂ ಒಳಗೊಳ್ಳುವ ಸರ್ಕಾರ ಅಲ್ಲಿ ರಚನೆಯಾಗಬೇಕಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಆಫ್ಘಾನಿಸ್ತಾನದ ನೆಲವು ಕೇಂದ್ರ ಹಾಗೂ ಉಗ್ರ ಚಟುವಟಿಕೆಗಳ ಯೋಜನೆ, ಆರ್ಥಿಕ ಚಟುವಟಿಕೆಗಳಿಗೆ ಬಳಕೆಯಾಗದಂತೆ ಎಚ್ಚರದಿಂದ ಕಾರ್ಯ ನಿರ್ವಹಿಸಲು ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.
* ಭಾರತದ ನೇತೃತ್ವದ ಭದ್ರತಾ ಸಂವಾದದಲ್ಲಿ ಮಧ್ಯಪ್ರಾಚ್ಯದ ರಾಷ್ಟ್ರಗಳಾಗಿರುವ ಕಝಾಕಿಸ್ತಾನ್, ಕಿರ್ಗಿಸ್ತಾನ್, ತಜಿಕಿಸ್ತಾನ್, ತುರ್ಕಮೆನಿಸ್ತಾನ್ಮತ್ತುಉಜ್ಬೇಕಿಸ್ತಾನ್ರಾಷ್ಟ್ರಗಳುಪಾಲ್ಗೊಂಡಿದ್ದವು.

## ಕೇಂದ್ರಸಚಿವಸಂಪುಟವು'ಹತ್ತಿಬೆಳೆಗಾರರ'ಬೆಂಬಲಬೆಲೆಹಾಗೂ 2020 21ರ ವಿವಿಧ ಕಬ್ಬು ಆಧಾರಿತ ಕಚ್ಚಾ ವಸ್ತುಗಳಿಂದ ಪಡೆದ ಎಥೆನಾಲ್ ಬೆಲೆಗಳನ್ನಹೆಚ್ಚಿಸಲುನಿರ್ಧರಿಸಿದೆ.



* ಪ್ರಸ್ತುತ ಕೇಂದ್ರ ಸಚಿವ ಸಂಪುಟವು 2014 15 ರಿಂದ 2020 21ರ ವರೆಗಿನ ಹತ್ತಿ ಋತುಗಳಲ್ಲಿ ಭಾರತೀಯ ಕಾಟನ್ ಕಾರ್ಪೊರೇಷನ್'ಗೆ 17,408.85 ಕೋಟಿ ರೂ.ಗಳ ಬೆಂಬಲ ಬೆಲೆ ನೀಡಲು ಅನುಮೋದನೆ ನೀಡಿದೆ.
* ಕೇಂದ್ರ ಸಚಿವ ಸಂಪುಟವು ಹತ್ತಿ ಋತುವಿನಲ್ಲಿ ಹತ್ತಿಗೆ ಎಂಎಸ್‌ಪಿ ಆಪ್'ಗಳ ಅಡಿಯಲ್ಲಿನ ನಷ್ಟವನ್ನು ಭರಿಸಲು ಭಾರತೀಯ ಕಾಟನ್ ಕಾರ್ಪೊರೇಷನ್'ಗೆ 17,408.85 ಕೋಟಿ ರೂ.ಗಳ ಬೆಂಬಲ ಬೆಲೆ ನೀಡಲು ಅನುಮತಿ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ.
* ಇದೀಗ ಕೇಂದ್ರ ಸಚಿವ ಸಂಪುಟವು 2020 21ರ ವಿವಿಧ ಕಬ್ಬು ಆಧಾರಿತ ಕಚ್ಚಾ ವಸ್ತುಗಳಿಂದ ಪಡೆದಿರುವ ಎಥೆನಾಲ್ ಬೆಲೆಗಳನ್ನ ಹೆಚ್ಚಿಸಲು ನಿರ್ಧಾರವನ್ನು ಕೈಗೊಂಡಿದೆ.
* ಈ ಎಥೆನಾಲ್ ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳಿಗೆ ಎಥೆನಾಲ್ ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ತಿಳಿಸಿದ್ದಾರೆ.
* ಪ್ರಸ್ತುತ ಸಿ ಹೆವಿ ಕಾಕಂಬಿಯಿಂದ ಪಡೆದ ಎಥೆನಾಲ್ ಬೆಲೆಯನ್ನು ಪ್ರತಿ ಲೀಟರ್'ಗೆ 45.69 ರೂ.ಗಳಿಂದ 46.66 ರೂ.ಗೆ ಹೆಚ್ಚಿಸಲಾಗಿದೆ.
* ಬಿ ಹೆವಿ ಕಾಕಂಬಿಯಿಂದ ಪಡೆದ ಎಥೆನಾಲ್ ಬೆಲೆಯನ್ನು ಪ್ರತಿ ಲೀಟರ್'ಗೆ 57.61 ರೂ.ಗಳಿಂದ 59.04 ರೂ.ಗೆ ಏರಿಕೆಮಾಡಲಾಗಿದೆ.
* ಇದಷ್ಟೇ ಅಲ್ಲದೇಕಬ್ಬಿನ ರಸ ಅಥವಾ ಸಕ್ಕರೆಯಿಂದ ಪಡೆದಿರುವ ಎಥೆನಾಲ್ ಬೆಲೆಯನ್ನು ಪ್ರತಿ ಲೀಟರ್'ಗೆ 62.65ರೂ.ಗಳಿಂದ63.45ರೂ.ಗೆಏರಿಕೆಮಾಡಲಾಗಿದೆಎಂದುತಿಳಿಸಿದ್ದಾರೆ.

## NDA'ಗೆ20ಮಹಿಳಾಕೆಡೆಟ್'ಗಳಿಗೆಪ್ರವೇಶ

* ರಾಷ್ಟ್ರೀಯ ರಕ್ಷಣಾ ಅಕಾಡೆಮಿ (NDA) ಸರಿ ಸುಮಾರು 20 ಮಹಿಳಾ ಕೆಡೆಟ್'ಗಳಿಗೆ ಮುಂದಿನ ವರ್ಷಪ್ರವೇಶ ನೀಡಲಿದೆ, ಇದೇ ಮೊದಲ ಬಾರಿಗೆ ಪ್ರಧಾನ ತ್ರಿ ಸೇವಾ ಮಿಲಿಟರಿ ತರಬೇತಿ ಸಂಸ್ಥೆಯಲ್ಲಿ ಇವರನ್ನು ತರಬೇತಿಗೆ ಕಳುಹಿಸಲಾಗುತ್ತದೆ ಎಂದು ತಿಳಿಸಿದೆ.
* ಈ 20 ಮಹಿಳಾ ಕೆಡೆಟ್'ಗಳಲ್ಲಿ ಭಾರತೀಯ ಸೇನೆಯು ಸುಮಾರು 10 ಮಹಿಳಾ ಅಧಿಕಾರಿಗಳನ್ನು ಒಳಗೊಂಡಿದೆ, ಹಾಗೂ ಭಾರತೀಯ ವಾಯುಪಡೆಯ 05 ಮಹಿಳಾ ಅಧಿಕಾರಿಗಳು, ಹಾಗೂ ಭಾರತೀಯ ನೌಕಾಪಡೆಯು 05 ಮಹಿಳಾ ಅಧಿಕಾರಿಗಳನ್ನು ಒಳಗೊಂಡಿದೆ.
* ಇದೀಗ ಈ ಮಹಿಳಾ ಕೆಡೆಟ್'ಗಳಿಗೆ ಮೊದಲ ಬಾರಿಗೆ ಪ್ರವೇಶ ಕಲ್ಪಿಸಲಾಗುತ್ತಿದೆ.
* ಈ ಹಿಂದೆ 1955 ರಲ್ಲಿ ಪುಣೆಯ ಖಡಕ್ವಾಸ್ಲಾದಲ್ಲಿ ಈ ಎನ್‌ಡಿಎ(NDA) ಉದ್ಘಾಟನೆಗೊಂಡಿದೆ.
* ಇಲ್ಲಿನ ಕೆಡೆಟ್'ಗಳು 12 ನೇ ತರಗತಿಯ ಬೋರ್ಡ್ ಪರೀಕ್ಷೆಗಳ ನಂತರ ತಮ್ಮ ಪೂರ್ವ ಕಮಿಷನಿಂಗ್ ತರಬೇತಿಗಾಗಿ NDA'ಗೆ ಸೇರಿಕೊಳ್ಳುತ್ತಾರೆ, ಇದೇ ವರ್ಷ 2ಲಕ್ಷಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳು NDA ಪರೀಕ್ಷೆಗೆ ಹಾಜರಾಗಲು ತಮ್ಮ ಅರ್ಜಿಯನ್ನು ಹಾಕಿದ್ದರು.
* ಈ ಹಿಂದೆ ಸುಪ್ರೀಂ ಕೋರ್ಟ್ ಇದೇ ವರ್ಷದಿಂದ ಮಹಿಳೆಯರನ್ನು NDAಗೆ ಸೇರಿಸಿಕೊಳ್ಳಬೇಕು ಎಂದುತೀರ್ಪುನೀಡಿದೆ.

## 12-11-2021

### RBIನ ಎರಡು ನವೀನ ಗ್ರಾಹಕ ಕೇಂದ್ರಿತ ಉಪಕ್ರಮಗಳಿಗೆ ಪ್ರಧಾನಿ ಚಾಲನೆ



* ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಭಾರತೀಯ ರಿಸರ್ವ್ ಬ್ಯಾಂಕ್‌ನ(ಆರ್‌ಬಿಐ) ಎರಡು ನವೀನ ಗ್ರಾಹಕ ಕೇಂದ್ರಿತ ಉಪಕ್ರಮಗಳಾದ 'ರೀಟೇಲ್ ಡೈರೆಕ್ಟ್ ಸ್ಕೀಮ್' ಮತ್ತು 'ರಿಸರ್ವ್ ಬ್ಯಾಂಕ್ – ಸಮಗ್ರ ಒಂಬುಡ್ಸ್‌ಮನ್ ಸ್ಕೀಮ್'ಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಇತ್ತೀಚಿಗೆ ಚಾಲನೆ ನೀಡಿದರು. ಈ ಯೋಜನೆಗಳು ದೇಶದಲ್ಲಿ ಹೂಡಿಕೆಯ ವ್ಯಾಪ್ತಿಯನ್ನು ವಿಸ್ತರಿಸುತ್ತವೆ ಮತ್ತು ಬಂಡವಾಳ ಮಾರುಕಟ್ಟೆಗಳ ಪ್ರವೇಶವನ್ನು ಸುಲಭಗೊಳಿಸುತ್ತವೆ, ಜೊತೆಗೆ ಇವು ಹೂಡಿಕೆದಾರರಿಗೆ ಹೆಚ್ಚು ಸುರಕ್ಷಿತವಾಗಿವೆ ಎಂದು ಪ್ರಧಾನಿ ಹೇಳಿದರು. 'ರೀಟೇಲ್ ಡೈರೆಕ್ಟ್ ಸ್ಕೀಮ್' ದೇಶದ ಸಣ್ಣ ಹೂಡಿಕೆದಾರರಿಗೆ ಸರಕಾರಿ ಭದ್ರತಾಪತ್ರಗಳಲ್ಲಿ ಸರಳ ಮತ್ತು ಸುರಕ್ಷಿತ ಹೂಡಿಕೆಯ ಮಾಧ್ಯಮವನ್ನು ಒದಗಿಸುತ್ತದೆ. ಅದೇ ರೀತಿ, ಇಂದು 'ಸಮಗ್ರ ಒಂಬುಡ್ಸ್‌ಮನ್ ಯೋಜನೆ'ಯೊಂದಿಗೆ ಬ್ಯಾಂಕಿಂಗ್ ವಲಯದಲ್ಲಿ 'ಒಂದು ರಾಷ್ಟ್ರ, ಒಂದು ಒಂಬುಡ್ಸ್‌ಮನ್ ವ್ಯವಸ್ಥೆ' ರೂಪುಗೊಂಡಿದೆ ಎಂದು ಅವರು ಹೇಳಿದರು.

### ನವೆಂಬರ್ 11 : ವೀರ ವನಿತೆ ಒಬವ್ವ ಜಯಂತಿ



* ಪ್ರತಿವರ್ಷನವೆಂಬರ್11ರಂದುಕರ್ನಾಟಕರಾಜ್ಯಸರ್ಕಾರದಕನ್ನಡಮತ್ತುಸಂಸ್ಕೃತಿಇಲಾಖೆವತಿಯಿಂದ ಒಬವ್ವ ಜಯಂತಿ ಆಚರಣೆ ಮಾಡಲಾಗುತ್ತಿದೆ. ಇದೆ ವೇಳೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಒನಕೆ ಒಬವ್ವ ಜಯಂತಿಯ ಹಿನ್ನಲೆ ವೀರ ವನಿತೆಗೆ ಸಾಮಾಜಿಕ ಮಾಧ್ಯಮವಾದ ಟ್ವಿಟ್ಟರ್ ಮೂಲಕ ನಮನವನ್ನು ಸಲ್ಲಿಸಿದ್ದಾರೆ. "ತನ್ನ ಜನರು ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಅವರು ತೋರಿದ ಧೈರ್ಯವನ್ನು ಎಂದಿಗೂ ಯಾರೊಬ್ಬರೂ ಮರೆಯಲು ಸಾಧ್ಯವಿಲ್ಲ. ಅವರು ನಮ್ಮ ನಾರಿ ಶಕ್ತಿಯ ಪ್ರತೀಕವಾಗಿ ನಮಗೆ ಸ್ಫೂರ್ತಿ ನೀಡುತ್ತಾರೆ"ಎಂದುತಿಳಿಸಿದ್ದಾರೆ.

### ರಷ್ಯಾ ಅಧ್ಯಕ್ಷ ವಾದ್ಲಿಮಿರ್ ಪುಟಿನ್ ಡಿಸೆಂಬರ್ ನಲ್ಲಿ ಭಾರತ ಭೇಟಿ ಸಾಧ್ಯತೆ



* ಪ್ರಸ್ತುತ ರಷ್ಯಾ ಅಧ್ಯಕ್ಷರಾಗಿರುವ ವ್ಲಾದಿಮಿರ್ ಪುಟಿನ್ ಅವರು ಬರುವ ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, ಒಂದು ದಿನದ ಈ ಭೇಟಿ ವೇಳೆಯಲ್ಲಿ ವಿವಿಧ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

* ಭಾರತ ಮತ್ತು ರಷ್ಯಾ ನಡುವಿನ ವಾರ್ಷಿಕ ಶೃಂಗಸಭೆಗಾಗಿ ವ್ಲಾದಿಮಿರ್ ಪುಟಿನ್ ಡಿಸೆಂಬರ್ 6 ರಂದು ಭಾರತಕ್ಕೆ ಭೇಟಿ ನೀಡಲಿದ್ದಾರೆ.
* ಈ ಮೊದಲು ವ್ಲಾದಿಮಿರ್ ಪುಟಿನ್ 2018ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು, ಆದರೆ ಕಳೆದ ವರ್ಷ ಕೋವಿಡ್ ಹಿನ್ನಲೆಯಲ್ಲಿ ಈ ಶೃಂಗ ಸಭೆ ಮುಂದೂಡಲಾಗಿತ್ತು.
* ಭಾರತವು ರಷ್ಯಾ ಮತ್ತು ಜಪಾನ್ ರಾಷ್ಟ್ರಗಳೊಂದಿಗೆ ಇಂತಹ ವಾರ್ಷಿಕ ಶೃಂಗ ಸಭೆಗಳನ್ನು ನಡೆಸುತ್ತ ಬಂದಿದೆ.
* ಇಲ್ಲಿಯವರೆಗೆ ಒಟ್ಟು 20 ಪರ್ಯಾಯ ವಾರ್ಷಿಕ ಶೃಂಗ ಸಭೆಗಳು ಭಾರತ ಮತ್ತು ರಷ್ಯಾದಲ್ಲಿ ನಡೆದಿವೆ.
* ಇನ್ನು ಈ ಭೇಟಿಯ ವೇಳೆ ಉಭಯ ದೇಶಗಳ ನಡುವಿನ ವ್ಯಾಪಾರ ವಹಿವಾಟು ಸೇರಿ ಹಲವು ಮಾತುಕತೆಗಳುನಡೆಯುವನಿರೀಕ್ಷೆ ಇದೆ.

### ಅರ್ಹ ಮಹಿಳಾ ಅಧಿಕಾರಿಗಳಿಗೆ ಶಾಶ್ವತ ಆಯೋಗ ಮಂಜೂರು ಮಾಡಲುಭಾರತೀಯಸೇನೆಒಪ್ಪಿಗೆ



* ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಇದೀಗ ಭಾರತೀಯ ಸೇನೆಯು 11 ಮಹಿಳಾ ಅಧಿಕಾರಿಗಳಿಗೆ 10 ದಿನಗಳೊಳಗೆ ಶಾಶ್ವತ ಆಯೋಗ(ಪಿಸಿ) ಮಂಜೂರು ಮಾಡಲು ಒಪ್ಪಿಗೆ ನೀಡಿದೆ. ಇತ್ತೀಚಿಗೆ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್.ಬೋಪಣ್ಣ ಅವರನ್ನೊಳಗೊಂಡ ಪೀಠವು 11 ಮಹಿಳಾ ಅಧಿಕಾರಿಗಳಿಗೆ 10 ದಿನಗಳ ಅವಧಿಯಲ್ಲಿ ಶಾಶ್ವತ ಆಯೋಗ ರಚಿಸುವಂತೆ ಆದೇಶ ನೀಡಿದ್ದ ಹಿನ್ನಲೆ ಶಾಶ್ವತ ಆಯೋಗ ಮಂಜೂರುಮಾಡಲಾಗುವುದುಎಂದುಸೇನೆ ತಿಳಿಸಿದೆ.

### ಗೋವಾದಲ್ಲಿ52ನೆಯಅಂತರರಾಷ್ಟ್ರೀಯಸಿನಿಮೋತ್ಸವ



* ಗೋವಾದಲ್ಲಿ ನಡೆಯಲಿರುವ 52ನೆಯ ಅಂತರರಾಷ್ಟ್ರೀಯ ಸಿನಿಮಾ ಉತ್ಸವ ಭಾರತಕ್ಕೆ ಈ ಸಲ ಅಂತರರಾಷ್ಟ್ರೀಯ ಸಿನಿಮಾಗಳ ಸ್ಪರ್ಧೆಗೆ ಒಟ್ಟು ಹದಿನೈದು ಸಿನಿಮಾಗಳು ಅಂತಿಮ ಸಾಲಿನಲ್ಲಿ ಪ್ರವೇಶ ಪಡೆದಿವೆ. ಈ ಉತ್ಸವದ ಸಂದರ್ಭದಲ್ಲಿ ಪ್ರದರ್ಶಿಸಲ್ಪಡುವ ಈ ಚಿತ್ರಗಳನ್ನು ಅಂತರರಾಷ್ಟ್ರೀಯ ವಿಭಾಗಕ್ಕೆ ಪರಿಗಣಿಸಲಾಗುತ್ತದೆ. ಈ ಚಿತ್ರಗಳು ವಿಶ್ವದಾದ್ಯಂತ ಮೆಚ್ಚುಗೆ ಗಳಿಸಿದ್ದು, ಅತ್ಯುತ್ತಮ ಚಿತ್ರಗಳ ಗುಂಪಿಗೆ ಸೇರಿದ್ದು, ಸುವರ್ಣ ಮಯೂರ ಮತ್ತಿತರ ಪ್ರಶಸ್ತಿಗಳಿಗೆ ಸ್ಪರ್ಧೆ ಒಡ್ಡಲಿವೆ. ಈ ವಿಭಾಗದಲ್ಲಿರುವ ಸಿನಮಾಗಳ ಪಟ್ಟಿ : ಚಿತ್ರ, ನಿರ್ದೇಶಕ, ಭಾಷೆ/ ದೇಶ 1. ಎನಿ ಡೇ ನೌ; ನಿರ್ದೇಶನ: ಹ್ಯಾಮಿ ರಾಮೆಝುನ್; ಫಿನ್‌ಲ್ಯಾಂಡ್ 2 ಚಾರ್ಲೆಟ್; ನಿರ್ದೇಶನ; ಪರುಗ್ವೆ.3. ಗೋದಾವರಿ; ನಿ: ನಿಖಿಲ್ ಮಹಾಜನ್; ಮರಾಠಿ, ಭಾರತ 4. ಇಂಟ್ರೆಗೇಡ್; ನಿ:ರಾದು ಮೌಂಟೀನ್; ರೋಮಾನಿಯಾ 5. ಲ್ಯಾಂಡ್ ಆಫ್ ಡ್ರೀಮ್ಸ್; ನಿ: ಶಿರೀನ್ ನಿಶಾತ್, ಶೋಜಾ ಅಜಾರಿ; ನ್ಯು ಮೆಕ್ಸಿಕೊ, ಅಮೆರಿಕಾ 6. ಲೀಡರ್ ; ನಿ: ಕಟಿಯಾ ಪ್ರಿವೆಜೆಂಕವ್; ಪೋಲೆಂಡ್ 7.ಮಿ ವಸಂತರಾವ್; ನಿ: ನಿಪುಮ್ ಅವಿನಾಶ್ ಧರ್ಮಾಧಿಕಾರಿ; ಮರಾಠಿ, ಭಾರತ 8. ಮಾಸ್ಕೊ ಡಸ್ ನಾಟ್ ಹ್ಯಾಪ್ಪನ್: ನಿ: ದಿಮಿತ್ರಿ ಫೆದ್ರೊ; ರಷ್ಯಾ 9. ನೋ ಗ್ರೌಂಡ್ ಬೆನೆತ್ ದ ಫೀಟ್; ನಿ: ಮೊಹ್ಮದ್ ರಾಬ್ಬಿ ಮೃಧಾ; ಬಾಂಗ್ಲಾದೇಶ್ 10. ಒನ್ಸ್ ವಿ ವೇರ್ ಗುಡ್ ಫಾರ್ ಯು; ನಿ: ಬ್ರಾಂಕೊ ಸೆಮಿತ್; ಕ್ರೋಷಿಯಾ, ಬೋಸ್ನಿಯಾ, ಹಾರ್ಜೆಗೊವಿನಾ 11. ರಿಂಗ್ ವಾಂಡರಿಂಗ್; ನಿ: ಮಸಾಕಾಝು ಕನೆಕೊ; ಜಪಾನ್ 12. ಸೇವಿಂಗ್ ಒನ್ ಹು ವಾಸ್ ಡೆಡ್; ನಿ:ವಕ್ಲಾವ್ ಕದ್ರಂಕಾ; ಸಿಜೆಕ್ ರಿಪಬ್ಲಿಕ್

13. ಸೆಮ್ಸೊರ್; ನಿಳ ಆಮೀ ಬುರಾ; ಡಿಮಸಾ, ಭಾರತ 14. ದ ಡಾರ್ಮ್; ನಿ: ರೋಮನ್ ವಾಸಿನೋವ್;ರಷಿಯಾ15.ದಫಸ್ಟಫಾಲನ್;ನಿ:ರೋಡ್ರಿಗೊಡಿಒಲಿವೆರಾ;ಬ್ರಾಝಿಲ್

## ಗುಜರಾತ್ ನಲ್ಲಿ 5ಜಿ ಪರೀಕ್ಷೆಗಾಗಿ ಸ್ಪೆಕ್ಟ್ರಮ್ (ರಂಗಗುಚ್ಛ) ಹಂಚಿಕೆ ಮಾಡಿದ ಟೆಲಿಕಾಂಇಲಾಖೆ




* ಗುಜರಾತ್‌ನಲ್ಲಿ 5ಜಿ ಪರೀಕ್ಷೆಗಾಗಿ ದೂರಸಂಪರ್ಕ ಇಲಾಖೆಯು ಕೆಳಕಂಡ ಸಂಸ್ಥೆಗಳಿಗೆ ಪರವಾನಗಿ ಮತ್ತು ತರಂಗ ಗುಚ್ಛವನ್ನು ಹಂಚಿಕೆ ಮಾಡಿದೆ:
1. ವೊಡಾಫೋನ್ ಐಡಿಯಾ ಲಿಮಿಟೆಡ್ ಗೆ ಗಾಂಧಿನಗರದ (ನಗರ ಪ್ರದೇಶ), ಮನ್ಸಾ(ಉಪನಗರ) ಮತ್ತು ಉನಾವದಲ್ಲಿ (ಗ್ರಾಮೀಣ) ಪ್ರದೇಶದಲ್ಲಿ ಉಪಕರಣಗಳ ಪೂರೈಕೆದಾರನಾಗಿ ನೋಕಿಯಾಗೆ ಪರವಾನಿಗೆ ನೀಡಲಾಗಿದೆ.
2. ರಿಲಾಯನ್ಸ್ ಜಿಯೋ ಇನ್ಫೋಕಾಮ್‌ಗೆ ಜಾಮ್‌ನಗರದಲ್ಲಿ (ಉಪನಗರ/ಗ್ರಾಮೀಣ) ಉಪಕರಣಗಳಪೂರೈಕೆದಾರನಾಗಿಸ್ಯಾಮ್ ಸಂಗ್ ಗೆ ಪರವಾನಗಿ ನೀಡಲಾಗಿದೆ.

# 14- 11- 2021

## ಇಂದುವಿಶ್ವಮಧುಮೇಹದಿನ




* ಪ್ರತಿ ವರ್ಷ ನವೆಂಬರ್ 14 ರಂದು ಭಾರತ ಸೇರಿದಂತೆ ವಿಶ್ವಾದ್ಯಂತ ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತಿದೆ.
*ವಿಶ್ವ ಮಧುಮೇಹ ದಿನವನ್ನು ಆಚರಿಸುವ ಉದ್ದೇಶವೆಂದರೆ ಮಧುಮೇಹ ಕಾಯಿಲೆಗೆ ಇನ್ಸುಲಿನ್ ಔಷಧ ಕಂಡು ಹಿಡಿದ ಸರ್ ಫ್ರೆಡ್ರಿಕ್ ಬ್ಯಾಂಟಿಂಗ ಅವರ ಜನ್ಮದಿನದ ನೆನಪಿಗೋಸ್ಕರ ಹಾಗೂ ಅದರ ಕುರಿತು ಜಾಗೃತಿ ಮೂಡಿಸುವದು ಆಗಿದೆ.
* 'ಮಧುಮೇಹ ಕಾಳಜಿಗೆ ಪ್ರವೇಶ ಒಂದುವೇಳೆ ಈಗಿಲ್ಲದಿದ್ದರೆ, ಯಾವಾಗ?' ಎಂಬುದು ಈ ವರ್ಷದ ವಿಶ್ವ ಮಧುಮೇಹ ದಿನದ ವಿಷಯ.
*2021 ಕ್ಕೆ ಮಧುಮೇಹ ಕಾಯಿಲೆಗೆ ಇನ್ಸುಲಿನ್ ಔಷಧ ಕಂಡು ಹಿಡಿದು 100 ವರ್ಷಗಳಾದವು. ಹೀಗಾಗಿ ಈ ಬಾರಿಯ"ವಿಶ್ವಮಧುಮೇಹ ದಿನ"ಸ್ಮರಣೀಯ.

## ಅಂತರಾಷ್ಟ್ರೀಯ ಕಾನೂನು ಆಯೋಗದ ಸದಸ್ಯರಾಗಿ ಪ್ರೊ. ವಿಮಲ್‌ಪಟೇಲ್‌ನೇಮಕ



*ಭಾರತದ ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿ ಸದಸ್ಯ ಪ್ರಾಧ್ಯಾಪಕ ಮತ್ತು ರಾಷ್ಟ್ರೀಯ ರಕ್ಷಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಮಲ್ ಪಟೇಲ್ ಅವರು ಅಂತರಾಷ್ಟ್ರೀಯ ಕಾನೂನು ಆಯೋಗದ ಸದಸ್ಯರಾಗಿ ನೇಮಕವಾಗಿದ್ದಾರೆ.
* 8 ಸ್ಥಾನಗಳಿಗೆ ವಿಶ್ವಸಂಸ್ಥೆಯಲ್ಲಿ ನಡೆದ ಚುಣಾವಣಾ ಸ್ಪರ್ಧೆಯಲ್ಲಿ ಏಷ್ಯಾ ಪೆಸಿಫಿಕ್ ರಾಷ್ಟ್ರಗಳ ಸಮೂಹದಿಂದ 11 ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು.
* ಏಷ್ಯಾ ಪೆಸಿಫಿಕ್ ಸಮೂಹದಲ್ಲಿರುವ ಜಪಾನ, ಚೀನಾ ಮತ್ತು ದಕ್ಷಿಣ ಕೊರಿಯಾ ಸೇರಿದಂತೆ 192 ರಾಷ್ಟ್ರಗಳ ಸದಸ್ಯರು ಮತದಾನ ಮಾಡಿದರು. ಈ ಮತದಾನದಲ್ಲಿ 51 ವಯಸ್ಸಿನ ಪ್ರೊ. ವಿಮಲ್ ಅವರು 163 ಮತ ಪಡೆದರು.
*ಪ್ರೊ. ವಿಮಲ್ ಅವರು 163 ಮತ ಪಡೆದು ಮೊದಲಿಗರಾದರೆ ನಂತರದ ಸ್ಥಾನದಲ್ಲಿ ಥಾಯ್ಲ್ಯಾಂಡ್ 162 , ಜಪಾನ 154 , ವಿಯೆಟ್ನಾಮ್ 145 ಮತ ಪಡೆದರು.
* ವಿಶ್ವ ಸಂಸ್ಥೆಯಲ್ಲಿನ ಭಾರತದ ಶಾಶ್ವತ ಪ್ರತಿನಿಧಿ ರಾಯಭಾರಿ ಟಿ. ಎಸ್. ತಿರುಮೂರ್ತಿ ಅವರು ಏಷ್ಯಾ ಪೆಸಿಫಿಕ್ ರಾಷ್ಟ್ರಗಳ ಸಮೂಹದಲ್ಲಿ ಅಗ್ರಸ್ಥಾನ ಪಡೆದ ಪ್ರೊ. ವಿಮಲ್ ಪಟೇಲ್ ಅವರಿಗೆ ಅಭಿನಂದನೆಯನ್ನು ಹಾಗೂ ಪಟೇಲ್ ಅವರನ್ನು ಬೆಂಬಲಿಸಿದ ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಧನ್ಯವಾದಗಳನ್ನುತಿಳಿಸಿದ್ದಾರೆ.

## ಕೈಗಾರಿಕಾಉತ್ಪಾದನೆಪ್ರಮಾಣದಲ್ಲಿ ಇಳಿಕೆ



* ಆಗಸ್ಟ ಮಾಸದಲ್ಲಿ ಶೇ. 12 ರಷ್ಟು ಬೆಳವಣಿಗೆ ಕಂಡ ಕೈಗಾರಿಕಾ ಉತ್ಪಾದನೆ ಪ್ರಮಾಣವು ಸೆಪ್ಟೆಂಬರನಲ್ಲಿ ಶೇ. 3.1 ರಷ್ಟು ಇಳಿಕೆ ಕಂಡಿದೆ.
* ಗಣಿಗಾರಿಕೆ ಮತ್ತು ತಯಾರಿಕಾ ವಲಯಗಳು ಮಾತ್ರ ಒಳ್ಳೆಯ ಬೆಳವಣಿಗೆ ಕಂಡಿವೆ.ಗಣಿಗಾರಿಕೆ ವಲಯದ ಉತ್ಪಾದನೆ ಪ್ರಮಾಣವು ಶೇ. 8.6 ರಷ್ಟು ಹಾಗೂ ವಿದ್ಯುತ ವಲಯದ ಉತ್ಪಾದನೆ ಪ್ರಮಾಣವು ಶೇ. 0.9 ರಷ್ಟು ಏರಿದೆ.
*ಮೇ ತಿಂಗಳಿಂದ ಆಗಸ್ಟ ವರೆಗೂ ತಯಾರಿಕಾ ವಲಯದ ಉತ್ಪಾದನೆಯ ಪ್ರಮಾಣವು ಎರಡಂಕಿ ಪ್ರಗತಿ ಕಂಡಿತ್ತು.
*ಶೇ.1 ರಷ್ಟುಬೆಳವಣಿಗೆಪ್ರಮಾಣ2020ರಸಪ್ಟೆಂಬರನಲ್ಲಿ ಕಂಡಿತ್ತು.

## ದೂರು ಪರಿಶೀಲಿಸುವ ಅಧಿಕಾರ 'ರೆರಾ' ಒಬ್ಬ ಸದಸ್ಯನಿಗೂ ಇದೆ:ಸುಪ್ರೀಂ ಕೋರ್ಟ್



* ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು (ರೆರಾ), ಮನೆ ಅಥವಾ ಫ್ಲಾಟ್ ಖರೀದಿಸುವ ಗ್ರಾಹಕರು ಬಿಲ್ಡರ್ ವಿರುದ್ಧದ ದೂರೂ ಇತ್ಯರ್ಥಪಡಿಸುವ ಅಧಿಕಾರವನ್ನು ತನ್ನ ಒಬ್ಬ ಸದಸ್ಯರೊಬ್ಬರಿಗೆ ನೀಡಬಹುದು ಎಂದು ಭಾರತ ದೇಶದ ಸರ್ವೋಚ್ಚ ನ್ಯಾಯಾಲಯದವು ತಿಳಿಸಿದೆ.
*ನ್ಯಾಯಮೂರ್ತಿ ಯು. ಯು. ಲಲಿತ್ ನೇತೃತ್ವದ ತ್ರಿಸದಸ್ಯ ಪೀಠವು, 'ಪ್ರಾಧಿಕಾರ(ರೆರಾ)ಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಕಾರ್ಯಭಾರ ಒಪ್ಪಿಸುವ ಅಧಿಕಾರ ನೀಡಲಿದೆ' ಎಂದು ಹೇಳಿತು.
* ಗ್ರಾಹಕರ ದೂರೂ ಆಧರಿಸಿ ಪ್ರಾಧಿಕಾರ ಅಥವಾ ಪ್ರಾಧಿಕಾರ ನಿಯೋಜಿಸುವ ಸದಸ್ಯ ಹೊರಡಿಸುವ

ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾಯ್ದೆಯಲ್ಲಿ ಅವಕಾಶವಿದೆ. ಗ್ರಾಹಕರಿಗೆ ಹಿಂದಿರುಸಬೇಕಾದ ಮೊತ್ತ ಲೆಕ್ಕಹಾಕುವಲ್ಲಿ ಲೋಪ ಕುರಿತಂತೆ ಮೇಲ್ಮನವಿ ಸಲ್ಲಿಸಬಹುದು ಎಂದು ತ್ರಿಸದಸ್ಯ ಪೀಠವು ಹೇಳಿದೆ.

## ಖಾಸಗಿಶಾಲಾಶುಲ್ಕಶೇ.15ಕಡಿತ:ಶಿಕ್ಷಣಇಲಾಖೆ



* ಕಳೆದ ವರ್ಷ ಶೇ. 30 ರಷ್ಟು ಖಾಸಗಿ ಶಾಲಾ ಶುಲ್ಕ ಕಡಿತಗೊಳಿಸಿದ್ದ ಶಿಕ್ಷಣ ಇಲಾಖೆಯು ಈ ವರ್ಷ ಹೈಕೋರ್ಟ್ ಸೂಚನೆ ಮೇರೆಗೆ ಶೇ. 15 ರಷ್ಟು ಶುಲ್ಕ ಕಡಿತಗೊಳಿಸಿ ಆದೇಶ ಹೊರಡಿಸಿದೆ.
* ಈಗಾಗಲೇ ಪೂರ್ಣ ಶುಲ್ಕ ಪಾವತಿಸಿದ್ದಲ್ಲಿ ಹೆಚ್ಚುವರಿ ಶುಲ್ಕವನ್ನು ಪಾಲಕರಿಗೆ ಹಿಂದಿರುಗಿಸುವುದು ಅಥವಾ 2021 22ನೇ ಸಾಲಿನ ಶೈಕ್ಷಣಿಕ ವರ್ಷದ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಷರತ್ತು ವಿಧಿಸಲಾಗಿದೆ.

# 15-11-2021

## ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಹೊಸ ಮುಖ್ಯಸ್ಥರಾಗಿ ವಿವಿಎಸ್‌ಲಕ್ಷ್ಮಣ್



* ವಿವಿಎಸ್ ಲಕ್ಷ್ಮಣ್ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (NCA) ಯ ಹೊಸ ಮುಖ್ಯಸ್ಥರಾಗಲಿದ್ದಾರೆ ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಭಾನುವಾರದಂದು ಖಚಿತಪಡಿಸಿದ್ದಾರೆ.
* ರಾಹುಲ್ ದ್ರಾವಿಡ್ ಟೀಮ್ ಇಂಡಿಯಾ ಕೋಚ್ ಆದ ಬಳಿಕ ಏನ್ ಸಿ ಎ ಮುಖ್ಯಸ್ಥಸ್ಥಾನ ಖಾಲಿಯಾಗಿದೆ.
*ಏನ್ ಸಿ ಎ ಮುಖ್ಯಸ್ಥರಾಗಿ ವಿವಿಎಸ್ ಲಕ್ಷ್ಮಣ್ ವರ್ಷದಲ್ಲಿ ಸುಮಾರು 200 ದಿನಗಳ ಕಾಲ ಬೆಂಗಳೂರಿನಲ್ಲೇ ಇರಬೇಕಾಗಿದೆ.
* ರಾಹುಲ್ ದ್ರಾವಿಡ್ ಏನ್ ಸಿ ಎ ಮುಖ್ಯಸ್ಥರಾಗಿ 7 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದರು. ವಿವಿಎಸ್ ಲಕ್ಷ್ಮಣ್ ಗೂ ಅಷ್ಟೇ ಸಂಭಾವನೆ ಸಿಗುವ ಸಾಧ್ಯತೆ ಇದೆ.
*ಒಂದು ಅವಧಿಯಲ್ಲಿ ಕೋಲ್ಕತ್ತಾ ಟೆಸ್ಟ್ ನ ಹೀರೋಗಳಾಗಿ ಮಿಂಚಿದ ವಿವಿಎಸ್ ಲಕ್ಷ್ಮಣ್ ರಾಹುಲ್ ದ್ರಾವಿಡ್ ಅವರು ಇದೀಗ ಭಾರತ ತಂಡದ ಮುಖ್ಯ ಕೋಚ್ ಹಾಗೂ ಏನ್ ಸಿ ಎ ಮುಖ್ಯಸ್ಥರಾಗಿ ಭಾರತೀಯ ಕ್ರಿಕೆಟ್ ಅಭಿವೃದ್ಧಿಗೆ ಇನ್ನಷ್ಟು ಕೊಡುಗೆಗಳನ್ನು ನೀಡುವ ಆಶಾಭಾವವಿದೆ.

## ರಾಜಸ್ಥಾನದ ಕ್ರೀಡಾ ಪ್ರೇಮಿಗಳ ಕಾಯುವಿಕೆಗೆ ಇದೀಗ ಪೂರ್ಣವಿರಾಮ



* 8 ವರ್ಷಗಳ ಬಳಿಕ ಜೈಪುರದ ಸವಾಯಿ ಮಾನ್ ಸಿಂಗ್ (ಎಸ್ ಎಮ್ ಎಸ್ ) ಕ್ರೀಡಾಂಗಣದಲ್ಲಿ ನವಂಬರ್ 17 ರಂದು ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆಯೋಜಿಸಲಾಗಿದೆ.
* ಈ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲ್ಯಾಂಡ್ ತಂಡದೊಂದಿಗೆ ಸ್ಪರ್ಧಿಸಲಿದೆ ಹಾಗೂ ಈ ಪಂದ್ಯದಲ್ಲಿ ರಾಹುಲ್ ದ್ರಾವಿಡ ಅವರು ಮೊದಲ ಬಾರಿಗೆ ಭಾರತ ತಂಡದ ಕೋಚ್ ಆಗಿ ಮೈದಾನದಲ್ಲಿ ಕಾಣಿಸಿಕೊಳ್ಳಲಿದ್ದಾರೆ.
*ವಿರಾಟ ಕೊಹ್ಲಿ ನಾಯಕತ್ವ ತೊರೆದ ನಂತರ ಭಾರತ ತಂಡ ಜೈಪುರದ ಸವಾಯಿ ಮಾನ್ ಸಿಂಗ್ (ಎಸ್ ಎಮ್ ಎಸ್ ) ಕ್ರೀಡಾಂಗಣದಲ್ಲಿ ಹೊಸ ನಾಯಕನೊಂದಿಗೆ ಮೊದಲ ಪಂದ್ಯವನ್ನು ಆಡಲಿದೆ.
*ಜೈಪುರನಲ್ಲಿ ಅಕ್ಟೋಬರ್ 2013 ರಂದು ಅಂತರಾಷ್ಟ್ರೀಯ ಕ್ರಿಕೆಟ್ ಪಂದ್ಯದ ಆತಿಥ್ಯವನ್ನು ಪಡೆದುಕೊಂಡಿತ್ತು. ಆಗ ಭಾರತ ತಂಡವು ಆಸ್ಟ್ರೇಲಿಯಾ ವಿರುದ್ಧ ಏಕದಿನ ಪಂದ್ಯವನ್ನು ಆಡಿತ್ತು.ಭಾರತತಂಡಅದ್ಭುತಸ್ಪರ್ಧಿಸಿಆಸ್ಟ್ರೇಲಿಯಾವನ್ನುಸೋಲಿಸಿತ್ತು.

## ಪ್ರಸಿದ್ಧಸಂಸ್ಕೃತವಿದ್ವಾಸಡಾ.ಸತ್ಯವ್ರತಶಾಸ್ತ್ರೀವಿಧಿವಶ



*ಪ್ರಸಿದ್ಧ ಸಂಸ್ಕೃತ ವಿದ್ವಾಸ, ಭಾಷಾಂತಕಾರ, ಲೇಖಕ, ವ್ಯಾಕರಣ ತಜ್ಞ, ಕವಿ, ಸಾಹಿತ್ಯ ಅಕಾಡೆಮಿ ಫೆಲೋ 91 ವಯಸ್ಸಿನ ಡಾ. ಸತ್ಯವ್ರತ ಶಾಸ್ತ್ರೀ ಭಾನುವಾರಂದು ವಿಧಿವಶರಾದರು.
*ಆಗ್ನೇಯ ಏಷ್ಯಾದ ರಾಮಾಯಣಗಳನ್ನು ನಾಡಿಗೆ ಪರಿಚಯಿಸುವ ಮುಖಾಂತರ ಭಾರತದ ಸಾಹಿತ್ಯ ಕ್ಷೇತ್ರಕ್ಕೆ ಡಾ. ಸತ್ಯವ್ರತ ಶಾಸ್ತ್ರೀ ಅಪಾರ ಕೊಡುಗೆ ನೀಡಿದ್ದಾರೆ.
*ಡಾ. ಸತ್ಯವ್ರತ ಶಾಸ್ತ್ರೀ ಅವರು ಸಂಪಾದಿಸಿದ ಥಾಯ್ ರಾಮಾಯಣವನ್ನು ಸಾಹಿತ್ಯ ಅಕಾಡೆಮಿ ಇತ್ತೀಚಿಗೆ ಪ್ರಕಟಿಸಿದೆ.
*ಪ್ರಬಂಧ ಕಾವ್ಯ, ಪತ್ರಕಾವ್ಯ, ಮೂರೂ ಮಹಾಕಾವ್ಯ, ಮೂರೂ ಖಂಡ ಕಾವ್ಯ ಹಾಗೂ ಸಂಸ್ಕೃತದಲ್ಲಿ ಟೀಕಾ ಬರಹದ ಐದು ಕೃತಿಗಳನ್ನು ಅವರು ರಚಿಸಿದ್ದಾರೆ.
*ರಾಮಕೃತಿ ಮಹಾಕಾವ್ಯಮ್, ಬೃಹತ್ತರಂ ಭಾರತಂ, ಶ್ರೀ ಬೋಧಿಸತ್ವ ಚರಿತಂ, ವೈದಿಕ ವ್ಯಾಕರಣ, ಸರಮಾನ್ಯ ದೇಶಹಾ ಸೂತ್ರಂ ವಿಭತಿ ಮತ್ತು ಡಿಸ್ಕವರಿ ಆಫ್ ಸ್ಯಾನ್‌ಸ್ಕರ್ಟ್‌ಟ್ರೆಷರ್ಸ್‌ಗಳುಅವರ ಪ್ರಮುಖಕಾರ್ಯಗಳು.

## ಸಿಬಿಐ,ಇಡಿಪ್ರಮುಖರಸೇವಾವಧಿವಿಸ್ತರಣೆ



* ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇಡಿ) ಪ್ರಮುಖರ ಸೇವಾವಧಿಯನ್ನು 5 ವರ್ಷದವರೆಗೆ ವಿಸ್ತರಿಸಿ ಕೇಂದ್ರ ಸರ್ಕಾರ ಎರಡು ಸುಗ್ರೀವಾಜ್ಞೆ ಹೊರಡಿಸಿದೆ.
* ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಎರಡು ಸುಗ್ರೀವಾಜ್ಞೆಗಳಿಗೆ ಸಹಿ ಮಾಡಿದ್ದಾರೆ.
* ಪ್ರಸ್ತುತ ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯದ (ಇಡಿ) ಪ್ರಮುಖರ ಸೇವಾವಧಿ 2 ವರ್ಷವಾಗಿದೆ.
* ಈ ಎರಡು ತನಿಖಾ ಸಂಸ್ಥೆಗಳ ಮುಖ್ಯಸ್ಥರ ಎರಡು ವರ್ಷದ ಅಧಿಕಾರ ಅವಧಿ ಮುಗಿದ ನಂತರ ಪ್ರತಿ ವರ್ಷದಂತೆ ಮೂರೂ ಭಾರಿ ವಿಸ್ತರಿಸಲು ಸುಗ್ರೀವಾಜ್ಞೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
* ಒಟ್ಟು 5 ವರ್ಷ ಮುಗಿದ ನಂತರ ಅಂಥವರ ಸೇವಾವಧಿಯನ್ನು ಮತ್ತೆ ವಿಸ್ತರಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

## ರಷ್ಯಾ ನಿರ್ಮಿತ S 400 ಕ್ಷಿಪಣಿ ಭಾರತಕ್ಕೆ ಹಸ್ತಾಂತರ



*2018 ರ ಅಕ್ಟೋಬರ್ ನಲ್ಲಿ ಕ್ಷಿಪಣಿ ದಾಳಿ ನಿರೋಧಕ ವ್ಯವಸ್ಥೆ ಖರೀದಿಯ ಒಪ್ಪಂದಕ್ಕೆ ರಷ್ಯಾ ಮತ್ತು ಭಾರತ ಉಭಯ ದೇಶಗಳು ಸಹಿ ಹಾಕಿದ್ದವು. ಇದರಂತೆ ರಷ್ಯಾವು S 400 ಏರ್ ಡಿಫೆನ್ಸ್ ಸಿಸ್ಟಮ್ 'ಟ್ರಯಂಪ್' ನ ಮೊದಲ ಘಟಕವನ್ನು ಭಾರತಕ್ಕೆ ಹಸ್ತಾಂತರಿಸಿದೆ.
*400 ಕಿ.ಮೀ ದೂರದಲ್ಲಿರುವ ಮತ್ತು 30 ಕಿ. ಮೀ ಎತ್ತರದಿಂದ ಬರುತ್ತಿರುವ ಶತ್ರುಪಡೆಯ ಬಾಂಬರಗಳು, ಯುದ್ಧ ವಿಮಾನ, ಕ್ಷಿಪಣಿ, ಡ್ರೋನ್, ಗೂಢಚರ್ಯೆ ವಸ್ತುಗಳನ್ನು ಹೊಡೆದುರುಳಿಸಬಲ್ಲ ಶಕ್ತಿ ರಷ್ಯಾ ನಿರ್ಮಿತ S 400 ಕ್ಷಿಪಣಿಗೆ ಇದೆ. ಜತೆಗೆ ತನ್ನ ರಕ್ಷಣೆಯನ್ನು ಮಾಡಿಕೊಳ್ಳುವ ವ್ಯವಸ್ಥೆಯು ಇದರಲ್ಲಿ ಇದೆ.
* ರಷ್ಯಾ ನಿರ್ಮಿತ S 400 ಕ್ಷಿಪಣಿಯನ್ನು ಭಾರತೀಯ ಸೇನೆಯು ಪಶ್ಚಿಮ ವಲಯದಲ್ಲಿ ಸ್ಥಾಪಿಸಲು ಮುಂದಾಗಿದೆ.
*ಪಾಕಿಸ್ತಾನ ಮತ್ತು ಚೀನಾದ ಯಾವ ವಾಯುನೆಲೆಗಳಿಂದ ಬೆದರಿಕೆ ಇದೆಯೋ ಆ ಭಾಗದಲ್ಲಿ ಭಾರತ ಇವುಗಳನ್ನು ನಿಯೋಜಿಸಲಿದೆ.
*ಭಾರತದ ಗಡಿ ಭಾಗದಲ್ಲಿ ಸಂಘರ್ಷಕ್ಕೆ ಇಳಿದಿರುವ ಚೀನಾ ದೇಶವು ಟಿಬೆಟನ್ ನಗರಿ ಗರ್ ಗುನ್ಸ ಮತ್ತು ನಾಯಿಂಗಚಿ ವಾಯುನೆಲೆಯಲ್ಲಿ ಎರಡು S 400 ಸ್ಕ್ವಾಡ್ರನ್ ನಿಯೋಜಿಸಿದೆ.

## ಮಕ್ಕಳ ವಿರುದ್ಧದ ಸೈಬರ್ ಕ್ರೈಂ ಪ್ರಮಾಣ ಶೇ.400 ಕ್ಕೆ ಏರಿಕೆ



* ಕಳೆದ ವರ್ಷಕ್ಕೆ ಹೋಲಿಸಿದಾಗ ಈ ವರ್ಷದ ಮಕ್ಕಳ ವಿರುದ್ಧದ ಸೈಬರ್ ಅಪರಾಧದ ಪ್ರಮಾಣ ಶೇ. 400 ಕ್ಕೆ ಏರಿಕೆಯಾಗಿದೆ.
*ಮಾಹಿತಿ ತಂತ್ರಜ್ಞಾನ ಕಾಯ್ದೆ ಪ್ರಕಾರ 2020 ರಲ್ಲಿ ದಾಖಲಾಗಿರುವ 842 ಆನ್ಲೈನ್ ಅಪರಾಧ ಕೇಸ್ ಗಳ ಪೈಕಿ 738 ಕೇಸ್ ಗಳು ಮಕ್ಕಳನ್ನು ಲೈಂಗಿಕ ಶೋಷಣೆಗೆ ಗುರಿಪಡಿಸಿರುವಂಥದ್ದಾಗಿದೆ. *2019 ರಲ್ಲಿ ಮಕ್ಕಳ ವಿರುದ್ಧ ಆಗಿರುವ ಸೈಬರ್ ಅಪರಾಧಗಳ ಸಂಖ್ಯೆ 164, 2018 ರಲ್ಲಿ ಇದು 117 ಮತ್ತು 2017 ರಲ್ಲಿ ಇದು 79 ಇತ್ತು.
* 2020 ರ ದತ್ತಾಂಶ ಸಣ್ಣ ಪ್ರಮಾಣದ್ದೆಂಬಂತೆ ಭಾಸವಾದರೂ 2019 ಕ್ಕೆ ಹೋಲಿಸಿದರೆ ಹೆಚ್ಚಾಗಿರುವ ಪ್ರಮಾಣ ಎಚ್ಚರಿಕೆ ನೀಡುವಂತದ್ದು.
* ಮಕ್ಕಳ ವಿರುದ್ಧದ ಸೈಬರ್ ಕ್ರೈಂ ಪ್ರಮಾಣ ಶೇಕಡಾ ಏರಿಕೆ ಇರುವ ಟಾಪ್ 5 ರಾಜ್ಯಗಳು :1 ಉತ್ತರ ಪ್ರದೇಶ, 2 ಕರ್ನಾಟಕ, 3 ಮಹಾರಾಷ್ಟ್ರ, 4 ಕೇರಳ, 5 ಒಡಿಶಾ. ದೇಶದಲ್ಲಿ ಕರ್ನಾಟಕ ನಂ.2.

# 16- 11- 2021

## ಎಫ್ಐಎಚ್ ವಿಶ್ವಕಪ್ ನಲ್ಲಿ ದೇಶದ ಕಿರಿಯ ತಂಡವನ್ನು ಮುನ್ನಡೆಸಲಿರುವ ಲಾಲ್ ರೆಮ್ಸಿಯಾಮಿ



* ಡಿಸೆಂಬರ್ 5 ರಂದು ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭವಾಗುವ ಟೂರ್ನಿಗೆ ಭಾರತದ 18 ಆಟಗಾರ್ತಿಯರ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ.
* ಟೋಕಿಯೋ ಒಲಂಪಿಕ್ಸ್ ನಲ್ಲಿ ಭಾರತ ಸೀನಿಯರ್ ಮಹಿಳಾ ಹಾಕಿ ತಂಡದಲ್ಲಿ ಆಡಿದ್ದ 21 ವರ್ಷದ ಲಾಲ್ ರೆಮ್ಸಿಯಾಮಿ ಭಾರತ ಜೂನಿಯರ್ ತಂಡದ ನಾಯಕತ್ವ ವಹಿಸಿದ್ದಾರೆ ಹಾಗೂ ಇಶಿಕಾ ಚೌಧರಿಯವರು ಉಪನಾಯಕಿಯ ಸ್ಥಾನವನ್ನು ನಿಭಾಯಿಸಲಿದ್ದಾರೆ.
* ಮಹಿಳಾ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿ ಪ್ರಶಸ್ತಿಗಾಗಿ ವಿಶ್ವದ 16 ತಂಡಗಳು ಸೆಣಸಲಿದ್ದು, ಈ ಮೊದಲು ನಡೆದ ಟೂರ್ನಿಯಲ್ಲಿ ಅಂದರೆ 2016 ರ ಟೂರ್ನಿಯಲ್ಲಿ ಅರ್ಜೆಂಟಿನಾ ಚಾಂಪಿಯನ್ ಆಗಿತ್ತು.
* ಭಾರತವು 2013 ರ ಆವೃತ್ತಿಯಲ್ಲಿ ಇಂಗ್ಲೆಂಡನ್ನು ಮಣಿಸಿ ಕಂಚಿನ ಪದಕ ಗೆದ್ದಿದ್ದು ಜೂನಿಯರ್ ತಂಡದ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ.
*ಭಾರತ ಜೂನಿಯರ್ ತಂಡವು ಈ ಬಾರಿ 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಡಿಸೆಂಬರ್ 6 ರಂದು ರಷ್ಯಾ ತಂಡವನ್ನು ಎದುರಿಸಲಿದೆ.

## ಆಸ್ಟ್ರೇಲಿಯಾದ ರೋವಿಲ್ಲೆ ಎಂಬಲ್ಲಿ ಮಹಾತ್ಮಾ ಗಾಂಧಿಯ ಪ್ರತಿಮೆ ವಿರೂಪ ಮಾಡಿದ ದುಷ್ಕರ್ಮಿಗಳು



* ಆಸ್ಟ್ರೇಲಿಯಾದ ರೋವಿಲ್ಲೆ ಎಂಬಲ್ಲಿ ಮಹಾತ್ಮಾ ಗಾಂಧಿಯ ಪ್ರತಿಮೆ ಸ್ಥಾಪನೆಯಾದ ಕೆಲವೇ ಸಮಯದಲ್ಲಿ ದುಷ್ಕರ್ಮಿಗಳಿಂದ ಪ್ರತಿಮೆ ವಿರೂಪಗೊಳಿಸಲಾಗಿದೆ.
* ಆಸ್ಟ್ರೇಲಿಯನ್ ಇಂಡಿಯನ್ ಕಮ್ಯೂನಿಟಿ ಕೇಂದ್ರದಲ್ಲಿ ಭಾರತದ 75 ನೇ ವರ್ಷಾಚರಣೆ ಅಂಗವಾಗಿ ಕಳೆದ ಶುಕ್ರವಾರದಂದು ಖುದ್ದಾಗಿ ಮಹಾತ್ಮಾ ಗಾಂಧಿಯ ಪ್ರತಿಮೆಯನ್ನು ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮೋರಿಸನ್ ಅನಾವರಣ ಮಾಡಿದ್ದರು.ಈ ಸಂದರ್ಭದಲ್ಲಿ ಭಾರತದ ಕೌನ್ಸಿಲ್ ಜೆನರಲ್ ರಾಜಕುಮಾರ ಹಾಗೂ ಆಸ್ಟ್ರೇಲಿಯಾದ ನಾಯಕರು ಸಾಕ್ಷಿಯಾಗಿದ್ದರು.
* ಗಾಂಧಿಯ ಪ್ರತಿಮೆ ವಿರೂಪಗೊಳಿಸಿದ ಕೃತ್ಯವನ್ನು ಪ್ರಧಾನಿ ಮೋರಿಸನ್ ಖಂಡಿಸಿದ್ದಾರೆ.ಆಸ್ಟ್ರೇಲಿಯಾ ಈಗ ಜಗತ್ತಿನಲ್ಲಿ ಬಹು ಸಂಸ್ಕೃತಿ ಹಾಗೂ ವಲಸಿಗರ ದೇಶವೆಂದೇ ಖ್ಯಾತವಾಗಿದೆ. ಹೀಗಾಗಿ ಇಲ್ಲಿ ಸಾಂಸ್ಕೃತಿಕ ಸ್ಮಾರಕವನ್ನು ಧ್ವಂಸ ಮಾಡುವುದನ್ನು ಸಹಿಸುವುದು ಅಸಾಧ್ಯ ಎಂದಿದ್ದಾರೆ.

## ಲೆಜೆಂಡ್ಸ್ ಲೀಗ್ ಕ್ರಿಕೆಟ್ (ಎಲ್ ಎಲ್ ಸಿ) ಗೆ ಆಯುಕ್ತರಾಗಿ ರವಿಶಾಸ್ತ್ರಿ ನೇಮಕ



* ನಾಲ್ಕುವರೆ ವರ್ಷಗಳಿಂದ ಭಾರತ ತಂಡದ ಮುಖ್ಯ ಕೋಚ್ ಹುದ್ದೆಯಲ್ಲಿದ್ದ ರವಿಶಾಸ್ತ್ರಿಯವರು T20 ವಿಶ್ವಕಪ್ ಮುಕ್ತಾಯದೊಂದಿಗೆ ಅವಧಿ ಮುಕ್ತಾಯಗೊಳಿಸಿದ್ದಾರೆ.
* ನಿವೃತ್ತ ಕ್ರಿಕೆಟಿಗರಿಗೆ ಮುಂದಿನ ವರ್ಷ ನಡೆಯಲಿರುವ ಲೆಜೆಂಡ್ಸ್ ಲೀಗ್ ಕ್ರಿಕೆಟ್ (LLC) ಗೆ ರವಿಶಾಸ್ತ್ರಿಯವರು ಆಯುಕ್ತರಾಗಿ ನೇಮಕಗೊಂಡಿದ್ದಾರೆ.

* ಲೆಜೆಂಡ್ಸ್ ಲೀಗ್ ಕ್ರಿಕೆಟ್ (LLC) ಯ ಮೊದಲ ಆವೃತ್ತಿ ಮುಂದಿನ ವರ್ಷ ಯುಎಇ ಯಲ್ಲಿ ಆಯೋಜನೆಗೊಳ್ಳುತ್ತಿದೆ.
* 'ಕ್ರಿಕೆಟ್ ಜೊತೆ ಮತ್ತೆ ಸಂಪರ್ಕ ಬೆಳೆಸುವದು ಖುಷಿಯ ವಿಚಾರ, ಲೆಜೆಂಡ್ಸ್ ಲೀಗ್ ಕ್ರಿಕೆಟ್ ನಲ್ಲಿ ಆಡುವವರು ಬಹುತೇಕ ಚಾಂಪಿಯನ್ ಗಳಾಗಿರುತ್ತಾರೆ' ಎಂದು 59 ವರ್ಷದ ರವಿಶಾಸ್ತ್ರಿಯವರು ತಿಳಿಸಿದ್ದಾರೆ.
* ಈ ಲೀಗ್ ನಲ್ಲಿ ಭಾರತ ಸೇರಿದಂತೆ ಪಾಕಿಸ್ತಾನ, ಶ್ರೀಲಂಕಾ, ಆಸ್ಟ್ರೇಲಿಯಾ, ಇಂಗ್ಲೆಂಡ್ ಹಾಗೂ ಇತರ ತಂಡಗಳ ಆಟಗಾರರು ಪಾಲ್ಗೊಳ್ಳಲಿದ್ದಾರೆ.

## ಪ್ರಧಾನಿ ಮೋದಿಯವರಿಂದ ರಾಣಿ ಕಮಲಾಪತಿ ರೈಲ್ವೆ ನಿಲ್ದಾಣ ಉದ್ಘಾಟನೆ



* 450 ಕೋಟಿ ವೆಚ್ಚದಲ್ಲಿ ಮರು ಅಭಿವೃದ್ಧಿಗೊಳಿಸಿದ ಮಧ್ಯಪ್ರದೇಶದ ರಾಣಿ ಕಮಲಾಪತಿ (ಹಬೀಬ ಗಂಜ್) ರೈಲ್ವೆ ನಿಲ್ದಾಣವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಉದ್ಘಾಟಿಸಿದರು.
* 18 ನೇ ಶತಮಾನದ ಗೊಂಡ ಸಾಮ್ರಾಜ್ಯದ ರಾಣಿ ಕಮಲಾಪತಿ ಹೆಸರನ್ನು ರೈಲ್ವೆ ನಿಲ್ದಾಣಕ್ಕೆ ಮರುನಾಮಕರಣ ಮಾಡಲಾಗಿದೆ.
* ಈ ರೈಲ್ವೆ ನಿಲ್ದಾಣಕ್ಕೆ ಗೊಂಡ ಸಾಮ್ರಾಜ್ಯದ ರಾಣಿ ಕಮಲಾಪತಿ ಹೆಸರಿಟ್ಟಿರುವದರಿಂದ ಇದರ ಐತಿಹಾಸಿಕ ಮಹತ್ವವು ಹೆಚ್ಚಾಗಿದೆ ಎಂದು ಹಾಗೂ ಇದು ಗೊಂಡವಾನಾದ ಹೆಮ್ಮೆಯಾಗಿರಲಿದೆ ಎಂದುಪ್ರಧಾನಿಹೇಳಿದರು.

## ಖ್ಯಾತಇತಿಹಾಸಕಾರಪುರಂದರೆವಿಧಿವಶ



* ಖ್ಯಾತ ಇತಿಹಾಸಕಾರ, ಲೇಖಕ 99 ರ ವಯೋಮಾನದ ಬಾಬಾಸಾಹೇಬ ಪುರಂದರೆ (ಬಲ್ವಂತ ಮೊರೇಶ್ವರ್ ಪುರಂದರೆ) ಅವರು ಸೋಮವಾರ ಮುಂಜಾನೆ ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ಕೊನೆಯುಸಿರೆಳೆದಿದ್ದಾರೆ.
* ವಯೋಸಹಜ ಕಾಯಿಲೆಗಳಿಗೆ ತುತ್ತಾಗಿದ್ದ ಅವರನ್ನು ಮೂರೂ ದಿನದ ಹಿಂದೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.
* ಘನತೆವೆತ್ತ ಭಾರತ ಸರ್ಕಾರ 2019 ರಲ್ಲಿ ಪುರಂದರೆ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು ಹಾಗೂ ವಿವಿಧ ಪ್ರಶಸ್ತಿಗಳಿಗೆ ಪುರಂದರೆ ಅವರು ಭಾಜನರಾಗಿದ್ದರು.
* ಛತ್ರಪತಿ ಶಿವಾಜಿ ಮಹಾರಾಜ್ ಅವರ ಕುರಿತು ನಿಖರವಾಗಿ ಹೇಳುತ್ತಿದ್ದ ಕಾರಣಕ್ಕಾಗಿ ಪುರಂದರೆ ಅವರಿಗೆ 'ಶಿವ್ ಶಾಹಿರ್' ಎಂಬ ಖ್ಯಾತನಾಮವಿತ್ತು.
*ಪುರಂದರೆಅವರು1980ರದಶಕದಲ್ಲಿ ಶಿವಾಜಿ ಮಹಾರಾಜ್ ಅವರ ಜೀವನವನ್ನು ಆಧರಿಸಿ 'ಜಾಣತಾ ರಾಜ' ನಾಟಕವನ್ನು ರಚಿಸಿ, ನಿರ್ದೇಶಿಸಿದ್ದರು.

## ಕರ್ನಾಟಕಬ್ಯಾಂಕಗೆನೂತನಅಧ್ಯಕ್ಷರಾಗಿಪಿ.ಪ್ರದೀಪ್ಕುಮಾರ್

* ಪಿ. ಪ್ರದೀಪ್ ಕುಮಾರ್ ಅವರು ಸೋಮವಾರ ಕರ್ನಾಟಕ ಬ್ಯಾಂಕಗೆ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದು, 3 ವರ್ಷದವರೆಗೆ ಮುಂದುವರೆಯಲಿದ್ದಾರೆ.
* ಗ್ರಾಹಕರಿಗೆ ಈಗಾಗಲೇ ಉತ್ತಮ ಸೇವೆ ಒದಗಿಸುತ್ತಿರುವ ಕರ್ನಾಟಕ ಬ್ಯಾಂಕನ್ನು ಮತ್ತಷ್ಟು ಡಿಜಿಟಲೀಕರಣ ಮಾಡುವ ಮೂಲಕ ಯುವ ಪೀಳಿಗೆಗೆ ಒಳ್ಳೆಯ ಸೇವೆ ನೀಡುವದು ನನ್ನ ಮೊದಲ ಆದ್ಯತೆಯಾಗಿದೆ. ಇದಕ್ಕೆ ಬ್ಯಾಂಕಿನ ಎಲ್ಲ ಅಧಿಕಾರಿಗಳ ಸಹಕಾರವು ಮುಖ್ಯ ಹಾಗೂ ಅವಶ್ಯಕ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ 97 ವರ್ಷ ಪೂರೈಸಿರುವ ಕರ್ನಾಟಕ ಬ್ಯಾಂಕಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವದಕ್ಕೆ ಸಂತಸವಾಗುತ್ತಿದೆ ಎಂದು ಬೆಂಗಳೂರಿನ ಬಸವನಗುಡಿಯ ಕರ್ನಾಟಕ ಬ್ಯಾಂಕನ ಪ್ರಾದೇಶಿಕ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿ ಅಧ್ಯಕ್ಷೀಯ ಮಾತುಗಳನ್ನಾಡಿದರು.
* ಬೆಂಗಳೂರಿನ ಬಸವನಗುಡಿಯ ಕರ್ನಾಟಕ ಬ್ಯಾಂಕನ ಪ್ರಾದೇಶಿಕ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬ್ಯಾಂಕನ ನೂತನ ಅಧ್ಯಕ್ಷರಿಗೆ ಎಂಡಿ ಎಂ. ಎಸ್ ಮಹಾಬಲೇಶ್ವರ್ ಶುಭ ಕೋರಿದರು.

## ಅಯೋಧ್ಯರಾಮಮಂದಿರನಿರ್ಮಾಣಕಾರ್ಯಕ್ಕೆರೂ.144 ಕೋಟಿವ್ಯಯ



* ನೆಲ ಸಮತಟ್ಟುಗೊಳಿಸುವದು, ಹೆಚ್ಚುವರಿ ಭೂಮಿ ಖರೀದಿ ಸೇರಿದಂತೆ ವಿವಿಧ ಅಯೋಧ್ಯ ಕಾಮಗಾರಿಗಳಿಗೆ ಈ ವರೆಗೆ ಒಟ್ಟು ರೂ. 144 ಕೋಟಿ ಖರ್ಚು ಮಾಡಲಾಗಿದೆ ಎಂದು ರಾಮ ಜನ್ಮ ಭೂಮಿ ಟ್ರಸ್ಟ್ ಸದಸ್ಯ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.
* ದೆಹಲಿಯಲ್ಲಿ ಭಾನುವಾರ ನಡೆದ ರಾಮ ಜನ್ಮ ಭೂಮಿ ಟ್ರಸ್ಟ್ ನ ಸಭೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯದ ಜೊತೆಗೆ ಆಧ್ಯಾತ್ಮಿಕತೆಯ ಸಾಧನೆಯ ಕುರಿತು ಹಾಗೂ ಧಾರ್ಮಿಕ ಅನುಷ್ಠಾನಕ್ಕಾಗಿ ನಿತ್ಯ ಬೆಳಗ್ಗೆ 4 ವೇದಗಳ ಪಾರಾಯಣ ಇನ್ನಿತರ ವಿಷಯ ಪ್ರಸ್ತಾಪಿಸಲಾಗಿದೆ. ಧಾರ್ಮಿಕ ಕಾರ್ಯಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ತಾತ್ಕಾಲಿಕ ಗುಡಿ ಇರುವ ಪಕ್ಕದಲ್ಲಿ ಕಲ್ಪಿಸಲಾಗುವದು ಎಂದುತಿಳಿಸಿದರು.

## ಭಾರತೀಯಸೇನೆಗೆ30ಪ್ರಿಡೇಟರಡ್ರೋನ್‌ಗಳು



*ಅಮೆರಿಕದಿಂದ 30 ಪ್ರಿಡೇಟರ ಡ್ರೋನ್ ಗಳನ್ನೂ ಭಾರತೀಯ ಸೇನೆಗೆ ಮತ್ತಷ್ಟು ಬಲ ನೀಡುವ ಉದ್ದೇಶದಿಂದ ಖರೀದಿ ಮಾಡಲು ಭಾರತ ಸರ್ಕಾರ ನಿರ್ಧಾರ ಮಾಡಿದೆ.
* ಭಾರತೀಯ ಸೇನೆಯು ಡ್ರೋನ್ ಸೇರಿದಂತೆ ಸುಮಾರು 21 ಸಾವಿರ ಕೋಟಿ ರೂಪಾಯಿ ಮೊತ್ತದ ಭದ್ರತಾ ಉಪಕರಣಗಳನ್ನು ಖರೀದಿ ಮಾಡಲು ಬೇಡಿಕೆ ಇಟ್ಟಿದೆ. ಇದಕ್ಕೆ ಕೇಂದ್ರ ಸರ್ಕಾರವು ತಾತ್ವಿಕ ಒಪ್ಪಿಗೆ ನೀಡಿದೆ.
* ಪ್ರಿಡೇಟರ ಡ್ರೋನ್ ಗಳು ಗಡಿ ಮೇಲೆ ಕಣ್ಗಾವಲು, ಒಳನುಸುಳಿಕೆ ಯತ್ನ ಗುರುತಿಸಿ ದಾಳಿ

ಮಾಡುವುದು, ವೈಮಾನಿಕ ಮಾರ್ಗವಾಗಿ ಶತ್ರುಪಡೆಯ ದಾಳಿಯನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ.

## 17- 11- 2021

### ಅಂದುಅಪ್ಪುರಾಜರತ್ನ,ಇಂದುಕರ್ನಾಟಕರತ್ನ



* ಕನ್ನಡಿಗರ ಅಭಿಮಾನದ ರಾಜರತ್ನ ಹಾಗೂ ಯುವರತ್ನ ಖ್ಯಾತಿಯ ನಟ ಪುನೀತ ರಾಜಕುಮಾರ ಅವರಿಗೆ ಘನತೆವೆತ್ತ ಕರ್ನಾಟಕ ರಾಜ್ಯ ಸರ್ಕಾರವು ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ಮಹತ್ವದ ನಿರ್ಧಾರವನ್ನು ಕೈಗೊಂಡಿದೆ.
* ಅಕಾಲಿಕವಾಗಿ ಅಗಲಿದ ನಟನಿಗೆ ಕನ್ನಡ ಚಿತ್ರರಂಗದ ಪರವಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು "ಪುನೀತ ನಮನ" ಕಾರ್ಯಕ್ರಮವನ್ನು ಮಂಗಳವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿತ್ತು.
* "ಪುನೀತ ನಮನ" ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು 'ಕರ್ನಾಟಕ ರತ್ನ' ಪ್ರಶಸ್ತಿ ನೀಡುವ ಮಹತ್ವದ ಘೋಷಣೆ ಮಾಡುವ ಮೂಲಕ ದುಃಖಿತ ಅಪ್ಪು ಅಭಿಮಾನಿಗಳ ಮನಕ್ಕೆ ಎಳೆಯ ಪುಳಕವನ್ನು ಉಂಟುಮಾಡಿದರು.
* ನಟ ಸಾರ್ವಭೌಮ ಮುತ್ತುರಾಜ (ಡಾ. ರಾಜಕುಮಾರ) ಅವರಿಗೆ ಒಲಿದ 'ಕರ್ನಾಟಕ ರತ್ನ' ಪ್ರಶಸ್ತಿ ಗೌರವವು ಅವರ ಮಗ ಮುದ್ದಿನ ಮುತ್ತು ಪುನೀತ ರಾಜಕುಮಾರ ಅವರಿಗೂ ಮರಣೋತ್ತರವಾಗಿ ಒಲಿದಿರುವದು ವಿಶೇಷವಾಗಿದೆ.
* ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನಟ ಸಾರ್ವಭೌಮ ಡಾ. ರಾಜಕುಮಾರ ಮತ್ತು ಪಾರ್ವತಮ್ಮ ರಾಜಕುಮಾರ ಅವರ ಸ್ಮಾರಕದ ಮಾದರಿಯಲ್ಲೇ ಪುನೀತ ರಾಜಕುಮಾರ ಅವರ ಸ್ಮಾರಕವನ್ನುಅಭಿವೃದ್ಧಿಪಡಿಸಲಾಗುವದುಎಂದರು.

### ಕರ್ನಾಟಕಸಾರಿಗೆಗೆಮತ್ತೊಂದುಪ್ರಶಸ್ತಿಗರಿ



* ಸಾರಿಗೆ ಸುರಕ್ಷತೆಗಾಗಿ ಕರ್ನಾಟಕದ ಸಾರಿಗೆ ಸಂಸ್ಥೆ ಕೆ ಎಸ್ ಆರ್ ಟಿ ಸಿ ಗೆ ಸ್ಕೋಚ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ 2021 ಲಭಿಸಿದೆ.
* ನಿಗಮದ ಕ್ರಮಕ್ಕಾಗಿ ನೀಡಲಾದ ಪ್ರಶಸ್ತಿಯನ್ನು ನವದೆಹಲಿಯಲ್ಲಿ ನಡೆದ ಸ್ಕೋಚ್ 76 ನೇ ಸ್ಟೇಟ್ಸ್ ಗವರ್ನೆನ್ಸ್ ವರ್ಚುವಲ್ ಸಮಾರಂಭದಲ್ಲಿ KSRTC ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರಿಗೆ ಪ್ರದಾನ ಮಾಡಲಾಯಿತು.
* ನಿಗಮವು ಕೋವಿಡ್ ಸಮಯದಲ್ಲಿ ಹಲವಾರು ಸಾರ್ವಜನಿಕ ಅರೋಗ್ಯ ಸ್ನೇಹಿ ಉಪಕ್ರಮಗಳನ್ನು ಅನುಷ್ಠಾನಕ್ಕೆತಂದಿದೆಎಂದುಪ್ರಶಸ್ತಿಸ್ವೀಕರಿಸಿವ್ಯವಸ್ಥಾಪಕನಿರ್ದೇಶಕಶಿವಯೋಗಿಸಿ. ಕಳಸದ ಮಾತನಾಡಿದರು.
* ಕೋವಿಡ್ ಸಮಯದಲ್ಲಿ ನಿಗಮವು ಮಾಡಿದ ಸಾಮಾಜಿಕ ಕಳಕಳಿಯ ಕ್ರಮವನ್ನು ಆಯೋಜಕರುಶ್ಲಾಘಿಸಿದರು.ದೇಶದಇತರಸಂಸ್ಥೆಗಳಿಗೆಇದುಮಾದರಿಎಂದುತಿಳಿಸಿದರು.

### ಮಿನಿವಿಧಾನಸೌಧಇನ್ನುಮುಂದೆತಾಲೂಕುಸೌಧ



* ಈಗಿರುವ ರಾಜ್ಯದ ತಾಲೂಕುಗಳಲ್ಲಿರುವ ಮಿನಿ ವಿಧಾನಸೌಧಗಳ ಹೆಸರು ಬದಲಾವಣೆ ಮಾಡಿ ಇನ್ನು ಮುಂದೆ ತಾಲೂಕು ಆಡಳಿತ ಸೌಧ ಎಂದು ಕರೆಯಲಾಗುತ್ತದೆ ಎಂದು ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿದೆ.
* ಸದ್ಯ ಇರುವ 'ಮಿನಿ' ಎಂಬ ಪದ ಆಂಗ್ಲ ಭಾಷೆಯಾಗಿದ್ದು, ತಾಲೂಕ ಮಟ್ಟದ ಆಡಳಿತ ಕಟ್ಟಡಗಳಲ್ಲಿ ಯಾವುದೇ ಕಲಾಪಗಳನ್ನಾಗಿ, ಕಾಯಿದೆ ಕಾನೂನಗಳನ್ನಾಗಲಿ ರೂಪಿಸುವ ಶಕ್ತಿ ಕೇಂದ್ರಗಳಲ್ಲದ ಕಾರಣ 'ಮಿನಿ ವಿಧಾನಸೌಧ' ಎಂಬುದರ ಬದಲಾಗಿ 'ತಾಲ್ಲೂಕು ಆಡಳಿತ ಸೌಧ' ಎಂದು ಬದಲಿಸಲಾಗುವುದು ಎಂದಿದೆ.
* ಸಾರ್ವಜನಿಕರ ಕೋರಿಕೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಚ್ಛೆಯ ಮೇರೆಗೆ ಕಂದಾಯ ಇಲಾಖೆ ಈ ಕ್ರಮಕೈಗೊಂಡಿದೆಎಂದುಕಂದಾಯಇಲಾಖೆಉಪಕಾರ್ಯದರ್ಶಿತಿಳಿಸಿದ್ದಾರೆ.

### ಅಮೇರಿಕಾಗೆಎಚ್ಚರಿಕೆನೀಡಿದಚೀನಾ!



* ಚೀನಾ ಮತ್ತು ಅಮೇರಿಕಾವು ತೈವಾನ್ ಸ್ವತಂತ್ರ್ಯದ ವಿಚಾರವಾಗಿ ಸಂಘರ್ಷಕ್ಕೆ ಮುಖ ಮಾಡಿರುವ ಲಕ್ಷಣಗಳು ಗೋಚರಿಸುತ್ತಿದೆ.
* ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಅವರು ತೈವಾನ್ ಸ್ವಾತಂತ್ರ್ಯಕ್ಕೆ ಪ್ರೋತ್ಸಾಹಿಸುವದು 'ಬೆಂಕಿಯೊಂದಿಗೆ ಸರಸವಾಡಿದಂತೆ' ಎಂಬ ಎಚ್ಚರಿಕೆ ಸಂದೇಶದೊಂದಿಗೆ 'ಬೆಂಕಿಯೊಂದಿಗೆ ಸರಸವಾಡಿದವರು ಸುಟ್ಟು ಹೋಗುತ್ತಾರೆ' ಎಂಬ ಕಟು ಮಾತುಗಳನ್ನು ಸಹ ನೇರಾ ನೇರ ಅಮೇರಿಕಾ ಅಧ್ಯಕ್ಷ ಜೋ ಬೈಡೆನ್ ಅವರಿಗೆ ಆಡಿದ್ದಾರೆ.
* ಪರಸ್ಪರ ಪ್ರತಿಸ್ಪರ್ಧಿ ಸೂಪರ್ ಪವರ್ ಗಳ ನಡುವಿನ ಸಂಘರ್ಷ ನಿವಾರಿಸಿ ಉತ್ತಮ ಸ್ನೇಹ ಬಾಂಧವ್ಯ ರೂಪಿಸಲು ಉಭಯ ನಾಯಕರ ನಡುವೆ ನಡೆದ ವರ್ಚುವಲ್ ಶೃಂಗಸಭೆಯಲ್ಲೇ ಎಚ್ಚರಿಕೆನೀಡಲಾಗಿದೆ.

### ಶ್ರೀಮಂತಿಕೆಯಲ್ಲಿ ಅಮೇರಿಕಾವನ್ನು ಹಿಂದಿಕ್ಕಿದ ಚೀನಾ



* ವಿಶ್ವದ ಅತಿ ಹೆಚ್ಚಿನ ಶ್ರೀಮಂತ ದೇಶಗಳ ಸಾಲಿನಲ್ಲಿ ಅಮೆರಿಕಕ್ಕಿಂತ ಚೀನಾ ನಂ.1 ಶ್ರೀಮಂತ ದೇಶವಾಗಿದೆ.
* ಮೈಕ್ಕಿನ್ಸೆಯ್ ಅಂಡ್ ಕಂಪನಿ (McKinsey & Company)ಯ ಸಂಶೋಧನಾ ವಿಭಾಗದ ವರದಿ ಅನ್ವಯ ಜಾಗತಿಕ ಸಂಪತ್ತು ಮೂರೂ ಪಟ್ಟು ಗರಿಷ್ಮವಾಗಿದೆ.
* ಮೈಕ್ಕಿನ್ಸೆಯ್ ಅಂಡ್ ಕಂಪನಿ (McKinsey & Company)ಯ ಸಂಶೋಧನಾ ವಿಭಾಗದ ವರದಿಯು 10 ರಾಷ್ಟ್ರಗಳ ಬ್ಯಾಲನ್ಸಶೀಟ್ ಸಿದ್ಧಪಡಿಸಿದ್ದು,

ವಿಶ್ವದ ಆದಾಯದಲ್ಲಿ 60 % ಈ 10 ರಾಷ್ಟ್ರಗಳಲ್ಲಿ ಹಂಚಿಕೆಯಾಗಿದೆ ಎಂಬ ಅಂಶವು ವಿಶೇಷವಾಗಿದೆ.
* ಪ್ರಸ್ತುತ ಮಾಹಿತಿ ಪ್ರಕಾರ ಜಗತ್ತಿನಲ್ಲಿ ಸಂಪತ್ತು ಶೇಖರಣೆ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲೇ ಹೆಚ್ಚು, ವಿಶ್ವದ ಸಂಪತ್ತಿನ 68 % ರಿಯಲ್ ಎಸ್ಟೇಟ್ ಮೇಲೆ ಹೂಡಿಕೆಯಾಗಿದೆ.
* ಭಾರತದ ಒಟ್ಟಾರೆ ಆರ್ಥಿಕತೆ ಪ್ರಸ್ತುತ 3 ಟ್ರಿಲಿಯನ್ ಡಾಲರ್ ಅಂದರೆ 2234 ಲಕ್ಷ ಕೋಟಿ ರೂಪಾಯಿ ಇದೆ. ಇದನ್ನು 5 ಟ್ರಿಲಿಯನ್ ಡಾಲರ್ (3724 ಲಕ್ಷ ಕೋಟಿ ರೂಪಾಯಿ)ಗೆ ಹೆಚ್ಚಿಸಲು ಸರ್ಕಾರವು ಬಯಸಿದೆ.

## ಭಾಷಾ ಉನ್ನತಾಧಿಕಾರ ಸಮಿತಿ ಅಧ್ಯಕ್ಷರಾಗಿ ಚಮೂ ಕೃಷ್ಣ ಶಾಸ್ತ್ರೀ



* ಕೇಂದ್ರ ಸರ್ಕಾರ ಎಲ್ಲ ಭಾರತೀಯ ಭಾಷೆಗಳ ಉನ್ನತಿಗಾಗಿ ಸೋಮವಾರದಂದು ರಚಿಸಿರುವ ಭಾಷಾ ಉನ್ನತಾಧಿಕಾರ ಸಮಿತಿ ಅಧ್ಯಕ್ಷರನ್ನಾಗಿ ಕನ್ನಡಿಗ, ಸಂಸ್ಕೃತ ವಿದ್ವಾಂಸ ಚಮೂ ಕೃಷ್ಣ ಶಾಸ್ತ್ರೀ ಅವರನ್ನು ನೇಮಕ ಮಾಡಿದೆ.
* ಪ್ರಸ್ತುತ ತಮಿಳುನಾಡಿನ ತಂಜಾವೂರಿನಲ್ಲಿರುವ ಕೃಷ್ಣ ಶಾಸ್ತ್ರೀಯವರು ದಕ್ಷಿಣ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೆದಿಲದವರಾಗಿದ್ದಾರೆ.
* ಚಮೂ ಕೃಷ್ಣ ಶಾಸ್ತ್ರೀಯವರು ಶಿಕ್ಷಣ ತಜ್ಞರಾಗಿದ್ದು ಸಂಸ್ಕೃತ ಸಂವರ್ಧನೆಗಾಗಿ 'ಸಂಸ್ಕೃತ ಸಂವರ್ಧನಾ ಪ್ರತಿಷ್ಠಾನ' ಸ್ಥಾಪಿಸಿದ್ದಾರೆ.
* ಅಪಾಯದ ಅಂಚಿನಲ್ಲಿರುವ ಭಾಷೆಗಳು, ಸಂವಿಧಾನದ 8ನೇ ಪರಿಚ್ಛೇದದಲ್ಲಿರುವ ಭಾಷೆಗಳಲ್ಲದೆ, ಪರಿಚ್ಛೇದದಲ್ಲಿ ಇಲ್ಲದ ಭಾಷೆಗಳು, ಅಲ್ಪಸಂಖ್ಯಾತ, ಬುಡಕಟ್ಟು ಮತ್ತು ಶಾಸ್ತ್ರೀಯ ಭಾಷೆಗಳ ಕುರಿತಾಗಿ ಅಧ್ಯಯನ ನಡೆಸಿ, ಅವುಗಳ ಉನ್ನತಿಗಾಗಿ ಕೆಲಸ ಮಾಡಲು ಭಾಷಾ ಉನ್ನತಾಧಿಕಾರ ಸಮಿತಿಯನ್ನು ಕೇಂದ್ರವು ರಚಿಸಿದೆ.

## ಐ ಸಿ ಸಿ ರ್ಯಾಂಕಿಂಗ್ ಪ್ರಕಟ : ಭಾರತದ ಮಿಥಾಲಿ ರಾಜ್ ಮತ್ತು ಸ್ಮೃತಿ ಮಂದಾನ ರ್ಯಾಂಕಿಂಗ್ ಸ್ಥಿರ



*ಮಂಗಳವಾರ ಐ ಸಿ ಸಿ ರ್ಯಾಂಕಿಂಗ್ ಪ್ರಕಟಿಸಿದ್ದು ಭಾರತದ ಮಿಥಾಲಿ ರಾಜ್ ಹಾಗೂ ಸ್ಮೃತಿ ಮಂದಾನ ಅವರು ಏಕದಿನ ಬ್ಯಾಟಿಂಗನಲ್ಲಿ ಮೂರೂ ಮತ್ತು ಆರನೇ ಸ್ಥಾನಗಳಲ್ಲಿ ಮುಂದುವರೆದಿದ್ದಾರೆ.
*ಬೌಲರ್ ಗಳ ವಿಭಾಗದಲ್ಲಿ ಅನುಭವಿ ವೇಗದ ಬೌಲರ್ ಜೂಲನ್ ಗೋಸ್ವಾಮಿ ಎರಡನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ.
*ಆಲ್ ರೌಂಡರ್ ವಿಭಾಗದಲ್ಲಿ ದೀಪ್ತಿ ಶರ್ಮ 5 ನೇ ಸ್ಥಾನದಲ್ಲಿದ್ದಾರೆ.
*ಬ್ಯಾಟಿಂಗ್ ಕ್ರಮಾಂಕದಲ್ಲಿ ವೆಸ್ಟ್ ಇಂಡೀಸ್ ತಂಡದ ನಾಯಕಿ ಸ್ಟೆಫಾನಿ ಟೇಲರ್ 12 ನೇ ಸ್ಥಾನಕ್ಕೆ ಬಡ್ತಿ ಹೊಂದಿದ್ದಾರೆ.

# 18- 11- 2021

## ಬಿಸಿಸಿಐ ಅಧ್ಯಕ್ಷ ಸೌರವ ಗಂಗೂಲಿ ಐಸಿಸಿ ಮುಖ್ಯಸ್ಥರಾಗಿ ನೇಮಕ



* ಬಿಸಿಸಿಐ ಅಧ್ಯಕ್ಷ ಸೌರವ ಗಂಗೂಲಿ ಅವರು ಐಸಿಸಿ ಪುರುಷರ ಕ್ರಿಕೆಟ್ ಸಮಿತಿಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.
* ಐಸಿಸಿ ಪುರುಷರ ಕ್ರಿಕೆಟ್ ಸಮಿತಿಯ ಮುಖ್ಯಸ್ಥರಾಗಿದ್ದ ಅನಿಲ ಕುಂಬ್ಳೆ ಅವರು ಕಳೆದ ಒಂಬತ್ತು ವರ್ಷಗಳಿಂದ ಸೇವಾವಧಿಯಲ್ಲಿದ್ದರು. ಪ್ರಸ್ತುತ ಅವರ ಸೇವಾವಧಿ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಅವರ ಸ್ಥಾನದಲ್ಲಿ ಈಗ ಗಂಗೂಲಿ ಅವರು ಆಯ್ಕೆಯಾಗಿದ್ದಾರೆ.
* ಕುಂಬ್ಳೆ ಅವರ ಸ್ಥಾನಕ್ಕೆ ಗಂಗೂಲಿ ಅವರ ನೇಮಕಾತಿ ಕುರಿತು ಐಸಿಸಿ ಮುಖ್ಯಸ್ಥ ಗ್ರೆಗ್ ಬಾರ್ಕ್ಲೇ ಅವರು ತಿಳಿಸಿದ್ದಾರೆ.
* ಐಸಿಸಿ ಮಹಿಳಾ ಕ್ರಿಕೆಟ್ ಸಮಿತಿಯ ಮುಖ್ಯಸ್ಥರಾಗಿ ವೆಸ್ಟ್ ಇಂಡೀಸ್ ನ ಸಿಇಓ ಜಾನಿ ಗ್ರೇವ್ ಆಯ್ಕೆಯಾಗಿದ್ದಾರೆ.

## ಸ್ವದೇಶಿ ಶಸ್ತ್ರಾಸ್ತ್ರ, ಭಾರತೀಯ ಸೇನೆಗೆ.



* ಪ್ರಧಾನಿ ಮೋದಿಯವರು ದೇಶೀಯವಾಗಿ ಉತ್ಪಾದನೆ ಮಾಡಲಾಗಿರುವ ಡ್ರೋನ್, ಇಲೆಕ್ಟ್ರಾನಿಕ್ ವಾರ್ ಫೇರ್ ಶೂಟ್, ಯುದ್ಧ ಹೆಲಿಕ್ಯಾಪ್ಟರ್ ಗಳು ಮತ್ತು ಇನ್ನಿತರ ಅತ್ಯಾಧುನಿಕ ಉಪಕರಣಗಳನ್ನು ಶುಕ್ರವಾರದಂದು ಸೇನೆಗೆ ಹಸ್ತಾಂತರಿಸಲಿದ್ದಾರೆ.
* ರಾಷ್ಟ್ರ ರಕ್ಷಣಾ ಸಮರ್ಪಣಾ ಪರ್ವ ಕಾರ್ಯಕ್ರಮದಲ್ಲಿ ಮೋದಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.
* ಝಾನ್ಸಿಯ ರಕ್ಷಣಾ ಕಾರಿಡಾರ್ ಯೋಜನೆ ಅನ್ವಯ 400 ಕೋಟಿ ರೂ. ವಿವಿಧ ಯೋಜನೆಗಳಿಗೆ ಪ್ರಧಾನಿ ಮೋದಿ ಅವರು ದೇಶದ 75 ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ ' ಆಜಾದಿ ಕಾ ಅಮೃತ ಮಹೋತ್ಸವ' ದಲ್ಲಿ ಪಾಲ್ಗೊಳ್ಳುವ ಮೂಲಕ ಚಾಲನೆ ನೀಡಲಿದ್ದಾರೆ.

## ಕೇಂದ್ರದಿಂದ 7,287 ಕುಗ್ರಾಮಗಳಿಗೆ 4G ಸೌಭಾಗ್ಯ




* 4G ಮೊಬೈಲ್ ಆಧಾರಿತ USOF ಯೋಜನೆಯನ್ನು 7,287 ಕುಗ್ರಾಮಗಳಿಗೆ ಕೇಂದ್ರ ಸಚಿವ ಸಂಪುಟದಿಂದ ಅನುಮೋದನೆ.
* ಆಂಧ್ರಪ್ರದೇಶ, ಛತ್ತೀಸಘಡ, ಜಾರ್ಖಂಡ, ಮಹಾರಾಷ್ಟ್ರ ಮತ್ತು ಒಡಿಶಾಗಳ 44 ಜಿಲ್ಲೆಗಳನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ.
* ಈ ಯೋಜನೆಯ ಯಶಸ್ವಿಗೆ ಮುಂದಿನ 5 ವರ್ಷ 6,466 ಕೋಟಿ ರೂಪಾಯಿಯನ್ನು ಸಾರ್ವತ್ರಿಕ ಬಾಧ್ಯತಾ ನಿಧಿ (USOF) ಯಲ್ಲಿ ಮೀಸಲು ಇರಿಸಲು ಒಪ್ಪಿಗೆ ಸೂಚಿಸಿದೆ.

## ಕೊಂಕಣಿಶಬ್ದರತ್ನಾಕರಪೈಇನ್ನಿಲ್ಲ



* ಕನ್ನಡ ಪಂಡಿತ ಮತ್ತು ಖ್ಯಾತ ಕೊಂಕಣಿ ಸಾಹಿತಿ ಮಂದರ್ಕೆ ಮಾಧವ ಪೈ ಅವರು ಬುಧವಾರ ಕಾಣದ ಕಾಲಚಕ್ರದಲ್ಲಿ ಮಾಯವಾಗಿದ್ದಾರೆ.
* ಮದ್ರಾಸ ವಿಶ್ವವಿದ್ಯಾಲಯದಿಂದ 1955 ರಲ್ಲಿ ಕನ್ನಡ ಎಂಎ ಪದವಿ, ಮೈಸೂರು ವಿವಿ ಹಾಗೂ ಅಲಹಾಬಾದ್ ಹಿಂದಿ ವಿದ್ಯಾಲಯದಿಂದ ಹಿಂದಿ ಸಾಹಿತ್ಯ ರತ್ನ ಮತ್ತು ರಾಷ್ಟ್ರ ಭಾಷಾ ಪ್ರವೀಣ ಪ್ರಶಸ್ತಿ ಪಡೆದಿದ್ದರು.
* ಮಾಧವ ಪೈ ಅವರು ಕನ್ನಡ ಮತ್ತು ಕೊಂಕಣಿ ನಿಘಂಟನ್ನು ರಚಿಸಿದ್ದರು. ಮಾಧವ ಪೈ ಅವರು ಅನೇಕ ಸಂಶೋಧನಾ ಲೇಖನ ಪ್ರಕಟಿಸಿದ್ದಾರೆ.
* ಕೊಂಕಣಿ ಶಬ್ದ ರತ್ನಾಕರ ಎಂದೇ ಹೆಸರು ಪಡೆದ ಮಂದರ್ಕೆ ಮಾಧವ ಪೈ ಅವರು ಅಖಿಲ ಭಾರತ ಮತ್ತು ರಾಜ್ಯ ಮಟ್ಟದಸಾಹಿತ್ಯಸಮ್ಮೇಳನದಲ್ಲಿಗೌರವಕ್ಕೆಪಾತ್ರರಾಗಿದ್ದರು.

# 20-11-2021

## ಭಾರತೀಯ ಮೂಲದ ಕಮಲಾ ಹ್ಯಾರಿಸ್ 01 ಗಂಟೆ 25 ನಿಮಿಷಗಳಕಾಲಅಮೆರಿಕಅಧ್ಯಕ್ಷಸ್ಥಾನಅಲಂಕರಿಸಿದರು



* ಅಮೆರಿಕ ಅಧ್ಯಕ್ಷ ಜೋ ಬಿಡೆನ್ ಅನಾರೋಗ್ಯದ ಹಿನ್ನೆಲೆಯಲ್ಲಿ ಉಪಾಧ್ಯಕ್ಷೆಯಾದ ಕಮಲಾ ಹ್ಯಾರಿಸ್ ಅವರಿಗೆ ದಿನಾಂಕ:19 11 2021 ಶುಕ್ರವಾರ ರಂದು ರಾತ್ರಿ 11:35 ರ ಸುಮಾರಿಗೆ ಅಧ್ಯಕ್ಷ ಸ್ಥಾನದ ಅಧಿಕಾರವನ್ನು ಹಸ್ತಾಂತರಿಸಲಾಗಿತ್ತು.
*ಅಮೆರಿಕಅಧ್ಯಕ್ಷಸ್ಥಾನಅಲಂಕರಿಸಿದ ಮೊದಲ ಏಷ್ಯಾ ಮಹಿಳೆ ಹಾಗೂ ಭಾರತೀಯ ಮೂಲದ ಮೊದಲ ಮಹಿಳೆ ಎಂಬ ಗೌರವಕ್ಕೆ ಕಮಲಾ ಹ್ಯಾರಿಸ್ಅವರುಪಾತ್ರರಾದರು.

## ಅತ್ಯಾಚಾರಿಗಳ ಕಾಮಾಸಕ್ತಿ ಕುಗ್ಗಿಸಲು ಕೆಮಿಕಲ್ ಕ್ಯಾಸ್ಟ್ರೇಶನ್ ಮಸೂದೆಗೆ ಪಾಕ್ಪಾರ್ಲಿಮೆಂಟ್ಅಂಗೀಕಾರ



* ಅತ್ಯಾಚಾರವೆಸಗುವ ಅಪರಾಧಿಗಳ ಕಾಮಾಸಕ್ತಿಯನ್ನು ಕುಗ್ಗಿಸಲು ಮುಂದಾಗಿರುವ ಪಾಕಿಸ್ತಾನದ ಪಾರ್ಲಿಮೆಂಟ್‌ನಲ್ಲಿ ಕಾಮಾಶಕ್ತಿ ಕುಗ್ಗಿಸಲು ರಾಸಾಯನಿಕ ಬಳಕೆ ಮಾಡುವ ಮಸೂದೆ ಈಗ ಅಂಗೀಕಾರವಾಗಿದೆ.
* ಮಹಿಳೆಯರು ಮತ್ತು ಅಪ್ರಾಪ್ತ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕಾಗಿ ಈ ನಿರ್ಧಾರಕ್ಕೆ ಬರಲಾಗಿದೆ.
* ಅತ್ಯಾಚಾರವೆಸಗುವ ಅಪರಾಧಿಯ ಮೇಲೆ ರಾಸಾಯನಿಕ ಬಳಕೆ ಮಾಡುವುದರಿಂದ ಆತನ ಜೀವಿತಾವಧಿಯಲ್ಲಿ ಮತ್ತೆ ಸಂಭೋಗ ನಡೆಸಲು ಅಸಮರ್ಥನಾಗಿರುತ್ತಾನೆ. ಆದರೆ ನ್ಯಾಯಾಲಯ ಇದಕ್ಕೆ ಅನುಮತಿ ನೀಡುವುದು ಕಡ್ಡಾಯವಾಗಿದೆ.

## ರೈತರಬಲಕ್ಕೆಬಾಗಿದಕೇಂದ್ರಸರ್ಕಾರ



* ವಿವಾದಿತ ಮೂರೂ ಕೃಷಿ ಕಾಯ್ದೆಗಳನ್ನು ಕೊನೆಗೂ ಹಿಂದಕ್ಕೆ ಪಡೆಯುವದಾಗಿ ಪ್ರಧಾನಿ ಮೋದಿಯವರು ಘೋಷಿಸಿದ್ದಾರೆ.
* ಈ ದಿಢೀರ ಅಚ್ಚರಿ ನಿರ್ಧಾರದಿಂದ ರೈತರ ಅವಿರತ ಹೋರಾಟಕ್ಕೆ ಕೊನೆಗೂ ಜಯದ ಹಾರ ಒಲಿದಂತಾಗಿದೆ.
* ದೇಶದ ರೈತರ ಶಕ್ತಿ ಮುಂದೆ ಕೇಂದ್ರ ಸರ್ಕಾರ ಮಂಡಿಯೂರಿ ಕುಳಿತಂತಾಗಿದೆ.
* ದೇಶವನ್ನು ಉದ್ದೇಶಿಸಿ ಶುಕ್ರವಾರದ ಬೆಳಗ್ಗೆ ಮಾತನಾಡಿದ ಪ್ರಧಾನಿಗಳು, ಮೂರೂ ಕೃಷಿ ತಿದ್ದುಪಡಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುತ್ತೇವೆ. ಹಾಗೂ ಸಂಸತ್ತಿನ ಚಳಿಗಾಲ ಅಧಿವೇಶನದಲ್ಲಿಯೇ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವ ಸಾಂವಿಧಾನಿಕ ಪ್ರಕ್ರಿಯೆ ನಡೆಯಲಿದೆ ಎಂದರು.
* ಕೇಂದ್ರ ಹೊರಡಿಸಿದ ಕೃಷಿ ತಿದ್ದುಪಡಿ ಕಾಯ್ದೆಗಳನ್ನು ವಿರೋಧಿಸಿ ಕಳೆದೊಂದು ವರ್ಷದಿಂದ ಪಂಜಾಬ,ರಾಜಸ್ತಾನ,ಹರಿಯಾಣ,ಉತ್ತರಪ್ರದೇಶ ಸೇರಿದಂತೆ ಕೆಲ ಭಾಗಗಳ ರೈತರು ತೀವ್ರ ವಿರೋಧ ವ್ಯಕ್ತಪಡಿಸಿ ದೆಹಲಿ ಗಡಿ ಭಾಗದಲ್ಲಿ ಪ್ರತಿಭಟನೆ ನಡೆಸುತ್ತಲೇ ಇದ್ದರು.
*ಕೇಂದ್ರದ 11 ಸುತ್ತಿನ ಔಪಚಾರಿಕ ಮಾತುಕತೆ ನಡೆಸಿದರು ರೈತರ ಮನವೊಲಿಕೆಯು ಸಾಧ್ಯವಾಗದ ಕಾರಣ ಕೇಂದ್ರವುರೈತರಪ್ರತಿಭಟನೆಗೆಮಣಿದುಕಾಯ್ದೆಗಳನ್ನುವಾಪಸಪಡೆಯಲುನಿರ್ಧರಿಸಿದೆ.

## ನಟಿಹೇಮಾಮಾಲಿನಿಯವರಿಂದ52ನೇಅಂತರರಾಷ್ಟ್ರೀಯ ಚಲನಚಿತ್ರೋತ್ಸವಉದ್ಘಾಟನೆ



* ನವೆಂಬರ್ 20 ರಿಂದ ಗೋವಾ ರಾಜಧಾನಿ ಪಣಜಿಯಲ್ಲಿ ನಡೆಯುತ್ತಿರುವ 52 ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವನ್ನು ಖ್ಯಾತ ನಟಿ ಹೇಮಾಮಾಲಿನಿ ಉದ್ಘಾಟಿಸಲಿದ್ದಾರೆ.
* ಗೀತೆ ರಚನೆಕಾರ ಪ್ರಸೂನ್ ಜೋಶಿ ಅವರಿಗೆ ಇಂಡಿಯನ್ ಫಿಲಂ ಪರ್ಸನಾಲಿಟಿ ಆಫ್ ದಿ ಇಯರ್ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.
* ಪ್ರಸ್ತುತ ಚಲನಚಿತ್ರೋತ್ಸವ ಆಯೋಜನೆಗೆ 18 ಕೋಟಿ ರೂ. ಮಾಡಲಾಗುತ್ತಿದೆ ಎಂದು ಸಂಚಾಲಕ ಚೈತನ್ಯ ಪ್ರಸಾದ ಮಾಹಿತಿ ನೀಡಿದ್ದಾರೆ.
* ವಿಶ್ವದ 63 ದೇಶಗಳ 148ಚಲನಚಿತ್ರಗಳನ್ನುಪ್ರದರ್ಶಿಸಲಾಗುವದುಮತ್ತುಪ್ರಸಕ್ತವರ್ಷಬ್ರಿಕ್ಸ್ಚಿತ್ರಪಟ ಮಹೋತ್ಸವ ಆಯೋಜಿಸಲಾಗಿದ್ದು ಈ ಮಹೋತ್ಸವದಲ್ಲಿ 12 ಪ್ರಿಮಿಯೇರ್, 26 ಏಷ್ಯಾ, 64 ಇಂಡಿಯನ್ ಪ್ರಿಮಿಯೇರ್ ಚಲನಚಿತ್ರ ಪ್ರದರ್ಶಿಸಲಾಗುವದು.
* ಇತ್ತೀಚಿಗೆ ನಿಧನರಾದ ಕನ್ನಡದ ನಟ ಪುನೀತ್ ರಾಜಕುಮಾರ ಅವರಿಗೂ, ನಟರಾದ ಸುಪ್ರೀತ್ ಭಾವೆ, ದೀಲಿಪಕುಮಾರ ಅವರಿಗೂ ಮಹೋತ್ಸವದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುವದು ಎಂದುಸಂಚಾಲಕರುಮಾಹಿತಿನೀಡಿದ್ದಾರೆ.

## ಎಲ್ಲ ಬಗೆಯ ಕ್ರಿಕೆಟ್ ಗೆ ವಿದಾಯ ಹೇಳಿದ ಎ.ಬಿ.ಡಿ'ವಿಲಿಯರ್ಸ್



* ತಮ್ಮ ಸ್ಫೋಟಕ ಬ್ಯಾಟಿಂಗ್ ಇಂದ ಟೆಸ್ಟ್, ಒಂಡೇ ಮ್ಯಾಚ್ ಹಾಗೂ ಚುಟುಕು ಹಲವು ದಾಖಲೆಗಳನ್ನು ನಿರ್ಮಿಸಿದ ದಕ್ಷಿಣ ಆಫ್ರಿಕಾದ ಅಬ್ರಾಮ್ ಬೆಂಜಮಿನ್ ಡಿ'ವಿಲಿಯರ್ಸ್ ಈಗ ಐಪಿಎಲ್ ಸೇರಿದಂತೆ ಎಲ್ಲ ಬಗೆಯ ಕ್ರಿಕೆಟ್ ಗೆ ವಿದಾಯ ಹೇಳಿದ್ದಾರೆ.
* 2018 ರಲ್ಲಿ ಅಂತಾರಾಷ್ಟ್ರೀಯಕ್ರಿಕೆಟ್ ರಂಗಕ್ಕೆ ವಿದಾಯ ಹೇಳಿದ್ದ ಎ.ಬಿ.ಡಿ'ವಿಲಿಯರ್ಸ್ ಈಗ ಎಲ್ಲ ಬಗೆಯ ಕ್ರಿಕೆಟ್ ಗೆ ವಿದಾಯ ಹೇಳಿದ್ದಾರೆ.
* ಇಂಡಿಯನ್ ಪ್ರೀಮಿಯರ್ ಲೀಗ್ ನಲ್ಲಿ ಹಲವಾರು ವರ್ಷಗಳಿಂದ 'Royal Challengers ' ಬೆಂಗಳೂರು ತಂಡದ ಪರ ಆಡುತ್ತಿದ್ದರು ಹಾಗೂ ಆ ತಂಡದ ಪ್ರಮುಖ ಬ್ಯಾಟ್ಸಮನ್ ಎನಿಸಿದ್ದರು.
* 'Royal Challengers ' ಬೆಂಗಳೂರು, ಐಪಿಎಲ್ ನ 2022 ರ ಆವೃತ್ತಿಯಲ್ಲಿ ಅನುಭವಿ ಆಟಗಾರರನ ಸೇವೆ ಕಳೆದುಕೊಳ್ಳಲಿದೆ.
* 'ದಕ್ಷಿಣ ಆಫ್ರಿಕಾ ಹಾಗೂ ಭಾರತದಲ್ಲಿ ಆಡುವಾಗ ದೊರೆತ ಭಾರೀ ಬೆಂಬಲದಿಂದ ನನ್ನ ಹೃದಯ ತುಂಬಿ ಬಂದಿದೆ. ಆ ಕ್ಷಣವನ್ನು ನಾನು ನನ್ನ ಜೀವಮಾನದಲ್ಲಿಯೇ ಮರೆಯಲಾರೆ' ಎಂದು ಎ.ಬಿ.ಡಿ'ವಿಲಿಯರ್ಸ್ ಅಭಿಮಾನದ ಮಾತುಗಳನ್ನು ನುಡಿದರು.
* ಎ.ಬಿ.ಡಿ'ವಿಲಿಯರ್ಸ್ 14 ವರ್ಷಗಳ ಅಂತಾರಾಷ್ಟ್ರೀಯ ಕ್ರಿಕೆಟ್ ಜೀವನದಲ್ಲಿ 20,000 ರನ್,47ಶತಕಗಳು,109ಅರ್ಧಶತಕಗಳನ್ನುಪೂರೈಸಿದ್ದಾರೆ.

# 21- 11- 2021

## ಬೆಳಗಾವಿಯಲ್ಲಿ15ನೇವಿಧಾನಸಭೆಯ11ನೇಅಧಿವೇಶನ



* ಡಿಸೆಂಬರ್ 13 ರಿಂದ 24 ರ ತನಕ ವಿಧಾನಮಂಡಲದ ಚಳಿಗಾಲದ ಅಧಿವೇಶನ ಬೆಳಗಾವಿಯ ಸುವರ್ಣಸೌಧದಲ್ಲಿನಡೆಯಲಿದೆ. ಒಟ್ಟು 10 ದಿನ ವಿಧಾನಸಭೆ ಮತ್ತು ವಿಧಾನ ಪರಿಷತ್ ಕಲಾಪ ನಡೆಯಲಿದೆ.
* ರಾಜ್ಯಪಾಲರ ಒಪ್ಪಿಗೆಯ ನಂತರ ಶುಕ್ರವಾರ ಸಂಸದೀಯ ವ್ಯವಹಾರಗಳ ಇಲಾಖೆ ಅಧಿಸೂಚನೆ ಪ್ರಕಟಿಸಿದೆ.
* ಬೆಳಗಾವಿಯಲ್ಲಿ ನಡೆಯುತ್ತಿರುವ 15 ನೇ ವಿಧಾನಸಭೆಯ 11 ನೇ ಅಧಿವೇಶನ ಇದಾಗಿದೆ.
*ಕರೋನಹಾವಳಿಯಿಂದಾಗಿ2ವರ್ಷದಿಂದಬೆಳಗಾವಿಯಲ್ಲಿಅಧಿವೇಶನನಡೆದಿರುವದಿಲ್ಲ.

## ಫಿಟ್ ಇಂಡಿಯಾ ಮಿಷನ್ ಅಡಿಯಲ್ಲಿ ಶಾಲೆಗಳಿಗೆ ಭೇಟಿ ನೀಡಲಿರುವ ಒಲಂಪಿಕ್ಸ್ಕ್ರೀಡಾಸಾಧಕರು




* ಪ್ರಧಾನಿ ಮೋದಿಯವರು ಆಗಸ್ಟ್ 15, 2023 ರೊಳಗೆ 75 ಶಾಲೆಗಳಿಗೆ ಭೇಟಿ ನೀಡಬೇಕೆಂದು ಟೋಕಿಯೋ ಒಲಂಪಿಕ್ಸ್ ನಲ್ಲಿ ಅಮೋಘ ಸಾಧನೆ ತೋರಿದ 75 ಸ್ಟಾರ್ ಕ್ರೀಡಾ ಪಟುಗಳಿಗೆ ಮನವಿ ಮಾಡಿಕೊಂಡಿದ್ದರು.
* ಮುಂದಿನ 2 ವರ್ಷಗಳಲ್ಲಿ 'ಫಿಟ್ ಇಂಡಿಯಾ ಮಿಷನ್' ಅಭಿಯಾನದ ವ್ಯಾಪ್ತಿಯಡಿಯಲ್ಲಿ 75 ಸ್ಟಾರ್ ಕ್ರೀಡಾ ಪಟುಗಳು ಶಾಲೆಗಳಿಗೆ ಭೇಟಿ ನೀಡಲಿದ್ದಾರೆ.
* ಕ್ರೀಡಾ ಸಾಧಕರು 'ಫಿಟ್ ಇಂಡಿಯಾ ಮಿಷನ್' ಅಭಿಯಾನದಲ್ಲಿ ಸುಮಾರು 1 ಘಂಟೆಯವರೆಗೂ ತಾವು ಶಾಲಾ ಮಕ್ಕಳೊಂದಿಗೆ ಬೆರೆತು ಕ್ರೀಡಾ ಸ್ಫೂರ್ತಿ, ಅಪೌಷ್ಟಿಕತೆಯ ಜಾಗೃತಿ ಕುರಿತು ತಿಳುವಳಿಕೆ ಹಾಗೂ ಫಿಟ್ ಇಂಡಿಯಾಕ್ವಿಜ್‌ನಲ್ಲಿಯೂಭಾಗವಹಿಸಲಿದ್ದಾರೆ.

## ಅತ್ಯಾಚಾರ ಎಸಗಿ ವಿವಾಹವಾದರು ರದ್ದಾಗದು ಪೋಕ್ಸೋ ಪ್ರಕರಣ : ಹೈಕೋರ್ಟ್



* ಪೋಕ್ಸೋ ಪ್ರಕರಣವೊಂದರಲ್ಲಿ ಸಂತ್ರಸ್ತೆಯನ್ನೇ ಮದುವೆಯಾಗಿದ್ದ ಆರೋಪಿಯ ವಿರುದ್ಧದ ಕೇಸ್ ರದ್ದುಪಡಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದೆ. ಇದರಿಂದ ಸಮಾಜದ ಮೇಲೆ ಗಂಭೀರ ಪರಿಣಾಮ ಉಂಟಾಗಬಾರದೆಂದು ಅಭಿಪ್ರಾಯ ಪಟ್ಟಿದೆ.
* ಪೋಕ್ಸೋ ಪ್ರಕರಣ ರದ್ದುಕೋರಿ ಆರೋಪಿ ಮತ್ತು ಆತನ ಪತ್ನಿ (ಸಂತ್ರಸ್ತೆ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಚ್. ಪಿ. ಸಂದೇಶ ಅವರಿದ್ದ ಪೀಠ ಗಂಭೀರ ಸ್ವರೂಪದ ಆರೋಪ ಕೃತ್ಯಗಳಲ್ಲಿ ಆರೋಪಿ ಹಾಗೂ ಸಂತ್ರಸ್ತರು ರಾಜಿಯಾದ ಮಾತ್ರಕ್ಕೆ ಪ್ರಕೃಣವನ್ನು ರದ್ದು ಪಡಿಸಲು ಸಾಧ್ಯವಿಲ್ಲ. ಒಂದೊಮ್ಮೆ ಪ್ರಕರಣವನ್ನು ರದ್ದುಪಡಿಸಿದರೆ ಅದು ಸಮಾಜದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಪ್ರಕರಣವನ್ನು ವಜಾಗೊಳಿಸಿದೆ.

# 22-11-2021

## ಭಾರತೀಯ ಪುಟ್ಬಾಲ್ ವೀಕ್ಷಕ ವಿವರಣೆಕಾರ ಫುಟ್‌ಬಾಲ್ ಧ್ವನಿ ನೋವಿ ಕಪಾಡಿಯಾನಿಧನ



* 'ಭಾರತೀಯ ಫುಟ್‌ಬಾಲ್‌ನ ಧ್ವನಿ' ಎಂದು ಕರೆಯಲ್ಪಡುವ ಅನುಭವಿ ಕ್ರೀಡಾ ನಿರೂಪಕರಾದ ನೋವಿ ಕಪಾಡಿಯಾ ಅವರು ದಿನಾಂಕ : 18 11 2021 ರಂದು ತಮ್ಮ 68 ನೇ ವಯಸ್ಸಿನಲ್ಲಿ ನಿಧನರಾದರು.
* ನೋವಿ ಕಪಾಡಿಯಾ ಅವರು ನ್ಯೂರಾನ್ ಕಾಯಿಲೆಯಿಂದ ಬಳಲುತ್ತಿದ್ದರು, ಬೆನ್ನುಮೂಳೆ

ಮತ್ತು ಮೆದುಳಿನ ನರಗಳು ಕಾಲಾನಂತರದಲ್ಲಿ ಕಾರ್ಯವನ್ನು ಕಳೆದುಕೊಳ್ಳುವ ಒಂದು ಅಪರೂಪದ ಕಾಯಿಲೆಗೆ ತುತ್ತಾಗಿದ್ದರು, ಕಳೆದ 02 ವರ್ಷಗಳಿಂದ ಗಾಲಿಕುರ್ಚಿಯ ಮೇಲೆ ಕುಳಿತಿದ್ದ ನೋವಿ ಕಪಾಡಿಯಾ ಅವರು ಕಳೆದ 01 ತಿಂಗಳಿನಿಂದ ವೆಂಟಿಲೇಟರ್‌ನಲ್ಲಿದ್ದರು.

* ನೋವಿ ಕಪಾಡಿಯಾ ಅವರು 10 ವರ್ಷಗಳ ಕಾಲ ಭಾರತೀಯ ಫುಟ್ಬಾಲ್ ಪಂದ್ಯಾವಳಿಗಳಿಗೆ ವಿವರಣೆಯನ್ನು ನೀಡುವುದರ ಜೊತೆಗೆ, ಏಷ್ಯನ್ ಗೇಮ್ಸ್ ಮತ್ತು ಒಲಿಂಪಿಕ್ಸ್‌ಗೆ ಕಾಮೆಂಟರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

## ರಾಜ್ಯ ಸರ್ಕಾರದಿಂದ ರೈತ ಸಮುದಾಯಕ್ಕೆ ಶುಭಸುದ್ದಿ:`ಯಶಸ್ವಿನಿ ಯೋಜನೆ'ಮರುಜಾರಿ

* ರಾಜ್ಯ ಸರ್ಕಾರ ರಾಜ್ಯದ ರೈತ ಸಮುದಾಯಕ್ಕೆ ಶುಭಸುದ್ದಿಯೊಂದನ್ನು ನೀಡಿದ್ದು, ಎಸ್ . ಎಂ . ಕೃಷ್ಣ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಜಾರಿ ಮಾಡಿದ್ದ "ಯಶಸ್ವಿನಿ ಯೋಜನೆ"ಯನ್ನು ಮರು ಜಾರಿ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ.

* ಈ "ಯಶಸ್ವಿ ಯೋಜನೆ" ಗ್ರಾಮೀಣ ಸಹಕಾರಿಗಳ ಆರೋಗ್ಯ ಸುರಕ್ಷತಾ ಯೋಜನೆಯಾಗಿದ್ದು, ಯಾವುದೇ ಸಂಘದ ಸದಸ್ಯರು ಕನಿಷ್ಟ ಮೊತ್ತದ ಪ್ರೀಮಿಯಂ ಮೊತ್ತವನ್ನು ಪಾವತಿಸಿ ತಮ್ಮ ಕುಟುಂಬದವರ ಹೆಸರನ್ನು ನೋಂದಣಿ ಮಾಡಿಸಿಕೊಂಡರೆ ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಉಚಿತವಾಗಿ ಮಾಡಿಸಿಕೊಳ್ಳಬಹುದಾಗಿದೆ.

## ಇಂಡೋನೇಷ್ಯಾಗೆ 2 ಕೋಟಿ ಡೋಸ್ ನೋವೊವ್ಯಾಕ್ಸ್ ಲಸಿಕೆರಫ್ತಿಗೆಭಾರತಸರ್ಕಾರದಒಪ್ಪಿಗೆ



* ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (SII) ಉತ್ಪಾದಿಸಿರುವ ಕೋವಿಡ್ 19 ಲಸಿಕೆ ನೊವೊವ್ಯಾಕ್ಸ್‌ನ 2 ಕೋಟಿ ಡೋಸ್ ಅನ್ನು ಇಂಡೋನೇಷ್ಯಾಗೆ ರಫ್ತು ಮಾಡಲು ಭಾರತ ಸರ್ಕಾರ ಒಪ್ಪಿಗೆ ನೀಡಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.

* ಭಾರತದಲ್ಲಿನ ಜನರಿಗೆ ಲಸಿಕೆ ನೀಡಲು ಕೊರತೆ ಎದುರಾದ ಬಳಿಕ ಏಪ್ರಿಲ್‌ನಲ್ಲಿ ಲಸಿಕೆ ರಫ್ತು ಮಾಡುವುದನ್ನು ನಿಲ್ಲಿಸಲಾಗಿತ್ತು. ಇದೀಗ ಮತ್ತೆ ರಫ್ತು ಮಾಡಲು ಭಾರತ ಸರ್ಕಾರ ಅನುಮೋದಿಸಿದೆ, ಮತ್ತು ಮುಂದಿನ ತಿಂಗಳಿನಿಂದ ಸರಬರಾಜು ಕಾರ್ಯ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

* ಇದರ ಜೊತೆಗೆ ಭಾರತದಲ್ಲಿ ಅನುಮೋದನೆ ಪಡೆದಿರುವ ಆಸ್ಟ್ರಾಜೆನಿಕಾ ಕಂಪನಿಯ ಸೀರಂ ಇನ್ ಸ್ಟಿಟ್ಯೂಟ್ ಆಫ್ ಇಂಡಿಯಾ (SII) ಉತ್ಪಾದಿಸುತ್ತಿರುವ ಕೋವಿಶೀಲ್ಡ್‌ಲಸಿಕೆಯ1ಕೋಟಿಡೋಸ್‌ರಫ್ತು ಮಾಡಲು ಭಾರತ ಸರ್ಕಾರ ಅನುಮತಿ ನೀಡಿರುವುದಾಗಿ ಮೂಲಗಳು ತಿಳಿಸಿವೆ.

* ತಮ್ಮ ಕುಟುಂಬದ ಒಡೆತನದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (SII)ವು ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ 3 ರಿಂದ 4 ಕೋಟಿ ಡೋಸ್ ಲಸಿಕೆಯನ್ನು ರಫ್ತು ಮಾಡಲಿದ್ದೇವೆ.

* ಭಾರತದಲ್ಲಿ ಲಸಿಕೆ ಬೇಡಿಕೆ ಮುಗಿದ ಬಳಿಕ ಜನವರಿಯಲ್ಲಿ ಮತ್ತಷ್ಟು ಪ್ರಮಾಣದ ಲಸಿಕೆ ರಫ್ತಿಗೆ ಯೋಜಿಸಲಾಗಿದೆ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ (SII) CEO ಆದ ರಾಯಿಟರ್ಸ್‌ತಿಳಿಸಿದ್ದಾರೆ.

## ಭಾರತೀಯ ವಾಯುಪಡೆಗೆ ಸೇರಿದ ಎಂಐ 17 ಹೆಲಿಕಾಪ್ಟರ್ ಅರುಣಾಚಲ ಪ್ರದೇಶದ ರೋಚಮ್ ಹೆಲಿಪ್ಯಾಡ್‌ನಲ್ಲಿ ಕ್ರ್ಯಾಶ್‌ಲ್ಯಾಂಡ್



* ಭಾರತೀಯ ವಾಯುಪಡೆಗೆ ಸೇರಿದ ಎಂಐ 17 ಹೆಲಿಕಾಪ್ಟರ್ ಕ್ರ್ಯಾಶ್ ಲ್ಯಾಂಡ್ ಆಗಿದ್ದು ಅರುಣಾಚಲ ಪ್ರದೇಶದ ರೋಚಮ್ ಹೆಲಿಪ್ಯಾಡ್‌ನಲ್ಲಿ ದಿನಾಂಕ : 18 11 2021 ರಂದು ಕ್ರ್ಯಾಶ್‌ಲ್ಯಾಂಡ್ ಆಗಿದೆ. ಹೆಲಿಕಾಪ್ಟರ್‌ನಲ್ಲಿ ಉಂಟಾದ ತಾಂತ್ರಿಕ ದೋಷವೇ ಇದಕ್ಕೆ ಕಾರಣ ಎನ್ನಲಾಗಿದ್ದು, ಈ ಹೆಲಿಕಾಪ್ಟರ್‌ನಲ್ಲಿ ಇಬ್ಬರು ಪೈಲಟ್ ಹಾಗೂ ಮೂವರು ಸಿಬ್ಬಂದಿ ಇದ್ದರು ಎನ್ನಲಾಗಿದೆ.

* ಈ ಹೆಲಿಕಾಪ್ಟರ್‌ನ ಮುಖಾಂತರ ಹಯುಲಿಯಾಂಗ್‌ನಿಂದ ಚೀನಾ ಹಾಗೂ ಮ್ಯಾನ್ಮಾರ್ ಗಡಿಯಲ್ಲಿರುವ ಅಂಜಾವ್ ಜಿಲ್ಲೆಯ ರೋಚಾಮ್‌ವರೆಗೆ ಪಡಿತರ ವಿತರಣೆಯನ್ನು ಮಾಡಲಾಗುತ್ತಿತ್ತು.

* ಈ ಅವಘಡದಿಂದಾಗಿ ಹೆಲಿಕಾಪ್ಟರ್‌ನಲ್ಲಿದ್ದ ಇಂಜಿನಿಯರ್‌ಗೆ ಸಣ್ಣ ಪುಟ್ಟ ಗಾಯಗಳಾಗಿದ್ದರೆ ಪೈಲಟ್ ಹಾಗೂ ಇತರೆ ಸಿಬ್ಬಂದಿಗಳು ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

## ಕೇರಳದಲ್ಲಿ ಕಂಡು ಬಂದ ನ್ಯೂರೋ ವೈರಸ್




* ಗಡಿ ರಾಜ್ಯ ಕೇರಳದ ವಯನಾಡ್ ಜಿಲ್ಲೆಯಲ್ಲಿ ನ್ಯೂರೋ ವೈರಸ್ ಕಂಡು ಬಂದ ಹಿನ್ನೆಲೆಯಲ್ಲಿ ಮಂಗಳೂರು (ದಕ್ಷಿಣ ಕನ್ನಡ) ಜಿಲ್ಲೆಯಲ್ಲಿ ಅಲರ್ಟ್ ಇರುವಂತೆ ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

* ವಯನಾಡ್ ಹಾಸ್ಟೆಲೊಂದರಲ್ಲಿ 13 ವಿದ್ಯಾರ್ಥಿಗಳಿಗೆ ವಾರದ ಹಿಂದೆ ನ್ಯೂರೋ ವೈರಸ್ ಪತ್ತೆಯಾದ ಹಿನ್ನೆಲೆಯಲ್ಲಿ ಕರ್ನಾಟಕ ಆರೋಗ್ಯ ಇಲಾಖೆಯು ಕೂಡಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ.

# 23- 11- 2021

## ಭಾರತದ ಧೀರಪುತ್ರ ಅಭಿನಂದನ್ ಗೆ 'ವೀರಚಕ್ರ' ಪ್ರಶಸ್ತಿ ಪ್ರಧಾನ ಮಾಡಿದ ರಾಷ್ಟ್ರಪತಿರಾಮ್‌ನಾಥ್‌ಕೋವಿಂದ್



* ಭಾರತ ಮತ್ತು ಪಾಕಿಸ್ತಾನದ ನಡುವೆ 2019 ಫೆಬ್ರವರಿ 26 ರಂದು ನಡೆದಂಥ ಬಾಲಾಕೋಟ್ ವಾಯುದಾಳಿಯಲ್ಲಿ ಅಭಿನಂದನ್ ಅವರು ಪಾಕಿಸ್ತಾನದ F 16 ಯುದ್ಧ ವಿಮಾನವನ್ನು ಹೊಡೆದುರುಳಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಆ ಸಮಯದಲ್ಲಿ ಅವರು ಪಾಕಿಸ್ತಾನ ನೆಲದ

ಮೇಲೆ ಬಿದ್ದಿದ್ದರಿಂದ ಅಲ್ಲಿನ ಸೈನಿಕರು ಇವರನ್ನು ಹಿಡಿದು ಚಿತ್ರಹಿಂಸೆಯನ್ನೂ ಕೊಟ್ಟಿದ್ದರು. ಆದರೆ ಪಾಕಿಸ್ತಾನದ ಮೇಲೆ ಭಾರತವು ಜಾಗತಿಕವಾಗಿ ಒತ್ತಡ ಹೇರಿದ್ದರಿಂದ ಅಭಿನಂದನ್ ಅವರನ್ನು ಸುರಕ್ಷಿತವಾಗಿ ಬಿಡುಗಡೆಗೊಳಿಸಿದ್ದರಿಂದ ಭಾರತದ ಧೀರಪುತ್ರನೊಬ್ಬ ಸುರಕ್ಷಿತವಾಗಿ ತಾಯ್ನಾಡನ್ನು ಸೇರಿದ್ದರು.

* ಭಾರತೀಯ ವಾಯುಪಡೆಯಲ್ಲಿರುವ 1960 ರ ದಶಕದ ಮಾಡೆಲ್ ಗಳಾದ ಮಿಗ್ 21 ವಿಮಾನಗಳನ್ನ ಭಾರತ ಮೇಲ್ದರ್ಜೆಗೇರಿಸಿ ಇನ್ನೂ ಬಳಸುತ್ತಿದೆ. ಆದರೆ ಪಾಕಿಸ್ತಾನದ ಬತ್ತಳಿಕೆಯಲ್ಲಿರುವ ಅತ್ಯಾಧುನಿಕ ಸೌಲಭ್ಯ ಹೊಂದಿದ ಎಫ್ 16 ವಿಮಾನವನ್ನೇ ಅಭಿನಂದನ್ ಅವರು ಹೊಡೆದುರುಳಿಸಿದ್ದು ಭಾರಿ ವಿಶ್ವದಾಖಲೆ ಎಂದು ನಿವೃತ್ತ ವಾಯುಪಡೆ ಅಧಿಕಾರಿಗಳು ಬಣ್ಣಿಸಿದ್ದಾರೆ.

* ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ಅವರು ಅಭಿನಂದನ್ ಅವರಿಗೆ ಪ್ರತಿಷ್ಠಿತ 'ವೀರ ಚಕ್ರ' ಪ್ರಶಸ್ತಿ ಪ್ರಧಾನ ಮಾಡಿದ್ದಾರೆ. ವಿಂಗ್ ಕಮಾಂಡರ್ ಆಗಿದ್ದ ಅಭಿನಂದನ್ ಅವರು ಇತ್ತೀಚೆಗೆ ಭಾರತೀಯ ವಾಯುಪಡೆಯ ಏಸ್ ಪೈಲಟ್ ಗ್ರೂಪ್ ಕ್ಯಾಪ್ಟನ್ ಹುದ್ದೆಗೆ ಬಡ್ತಿಯನ್ನು ಪಡೆದಿದ್ದರು.

### ಖಾಸಗಿ ಕಾಡು ನಿರ್ಮಾತೃ ಡಾ.ಅನಿಲ್ ಕುಮಾರ ಮಲ್ಹೋತ್ರ ನಿಧನ

* ಭಾರತದ ಖಾಸಗಿ ಕಾಡು ನಿರ್ಮಾತೃ ಎಂದೇ ಖ್ಯಾತಿ ಗಳಿಸಿದ್ದ ಡಾ.ಅನಿಲ್ ಕುಮಾರ ಮಲ್ಹೋತ್ರ ಅವರು ಹೃದಯಾಘಾತದಿಂದ ಅಸುನೀಗಿದ್ದಾರೆ.

* ಪುಣೆ ಮೂಲದವರಾದ ಅನಿಲ ಕುಮಾರ ಅವರು ಕೆನಡಾ ಮೂಲದ ತಮ್ಮ ಪತ್ನಿ ಜೊತೆಗೂಡಿ ಕೊಡಗಿನ ತೇರಾಲು ಎಂಬಲ್ಲಿ 300 ಎಕರೆ ಪ್ರದೇಶವನ್ನು ಖಾಸಗಿ ಕಾಡಾಗಿ ನಿರ್ಮಿಸಿದ್ದಾರೆ. ಇದು 'ಭಾರತದ ಚೊಚ್ಚಲ ಖಾಸಗಿ ಕಾಡು' ಎಂದೇ ಖ್ಯಾತಿಯನ್ನು ಹೊಂದಿದೆ.

* ಡಾ.ಅನಿಲ್ ಕುಮಾರ ಮಲ್ಹೋತ್ರ ಅವರ ಖಾಸಗಿ ಕಾಡಿನ ಹೆಸರು SAI ಸ್ಯಾಂಚುರಿ (ಸಾಯಿ ಸೇವ್ ಅನಿಮಲ್ ಇನಿಶಿಯೇಟಿವ್).

* 1991 ರಲ್ಲಿ ಪುಣೆಯಿಂದ ಕೊಡಗಿಗೆ ಬಂದ ಡಾ.ಅನಿಲ್ ಕುಮಾರ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಮಲ್ಹೋತ್ರ ಅವರು ಬಿರುನಾಣಿಯ ತೇರಾಲು ಗ್ರಾ.ಪಂ ವ್ಯಾಪ್ತಿಯಲ್ಲಿ ಸ್ಥಳ ಖರೀದಿಸಿವಾಸವಾಗಿದ್ದರು.

## ಸಯ್ಯದ ಮುಸ್ತಾಕ ಅಲಿ ಟಿ20 ಚಾಂಪಿಯನ್ ಟ್ರೋಫಿ ಗೆದ್ದುಬಿಗಿದತಮಿಳುನಾಡು



*2019 ರಲ್ಲಿ ಸೂರತ್ ನಲ್ಲಿ 1 ರನ್ ಇಂದ ಸೋತ ತಮಿಳನಾಡು ತಂಡವು ಆಘಾತಕ್ಕೆ ಒಳಪಟ್ಟಿತ್ತು. ಈ ಬಾರಿ ಕರ್ನಾಟಕ ತಂಡವು ಕೊನೆ ಎಸೆತದಲ್ಲಿ ಸಿಕ್ಸರ್ ಚಚ್ಚಿಸಿಕೊಂಡು ನಿರಾಸೆಗೊಳಗಾಗಿದೆ.

* ಮೂರನೇ ಬಾರಿಗೆ ಸಯ್ಯದ ಮುಸ್ತಾಕ ಅಲಿ ಟಿ20 ಟೂರ್ನಿ ಗೆದ್ದು ಬಿಗಿದ ತಮಿಳುನಾಡು ತಂಡ.

* ಸೀಮಿತ ಓವರ್ ಕ್ರಿಕೆಟ್ ಟೂರ್ನಿಯ ಅಂತಿಮ ಘಟ್ಟದಲ್ಲಿ ಕರ್ನಾಟಕ ತಂಡವು ಸೋತಿದ್ದು ಇದೆ ಮೊದಲ ಬಾರಿ.

* ಕರ್ನಾಟಕ ತಂಡವು ವಿಜಯ ಹಜಾರೆ ಟೂರ್ನಿಯಲ್ಲಿ 4 ಬಾರಿ ಚಾಂಪಿಯನ್ ಆಗಿತ್ತು.

* ಮುಸ್ತಾಕ್ ಅಲಿ ಟಿ20 ಟೂರ್ನಿಯಲ್ಲಿ 2 ಬಾರಿ ಫೈನಲ್ ಗೇರಿದ್ದ ಕರ್ನಾಟಕ ತಂಡವು, ಎರಡು ಬಾರಿ ಟ್ರೋಫಿ ಜಯಸಿತ್ತು.

## 2025 ರ ಚಾಂಪಿಯನ್ ಟ್ರೋಫಿ ಪಾಕಿಸ್ತಾನದಲ್ಲಿಯೇ ಎಂದು ಖಚಿತಪಡಿಸಿದಐಸಿಸಿ

* ಸೋಮವಾರದಂದು ಅಂತರಾಷ್ಟ್ರೀಯ ಕ್ರಿಕೆಟ್ ಸಮಿತಿಯು 2025 ರ ಚಾಂಪಿಯನ್ ಟ್ರೋಫಿ ಪಾಕಿಸ್ತಾನದಲ್ಲಿಯೇ ಎಂದು ಖಚಿತಪಡಿಸಿದೆ.

* ಭಾರತ ತಂಡ ಪಾಕಿಸ್ತಾನಕ್ಕೆ ತೆರಳುವದು ಅನುಮಾನ. ಟೂರ್ನಿಯನ್ನು UAE ಗೆ ಸ್ಥಳಾಂತರಿಸಲಾಗುತ್ತದೆ ಎಂದು ಮಾಧ್ಯಮಗಳು ವರದಿಯನ್ನು ಪ್ರಕಟಿಸಿದ ಹಿನ್ನೆಲೆಯಲ್ಲಿ ಐಸಿಸಿ ಮುಖ್ಯಸ್ಥ ಗ್ರೆಗ್ ಬಾರ್ಕ್ಲೇ ಭಾರತದ ಪ್ರಸಿದ್ಧ ಮಾಧ್ಯಮವೊಂದಕ್ಕೆ ಹೇಳಿಕೆ ನೀಡಿದ್ದು "ಎಲ್ಲಾ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಲು ಪಾಕಿಸ್ತಾನಕ್ಕೆ ತೆರಳಲಿವೆ, ಚಾಂಪಿಯನ್ಸ್ ಟ್ರೋಫಿ ಪಾಕಿಸ್ತಾನದಲ್ಲೇ ನಡೆಯಲಿದೆ" ಎಂದಿದ್ದಾರೆ.

## ಅಮೇರಿಕದ ಹೂಸ್ಟನ್ ನಲ್ಲಿ 2021 ರ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್ ಶಿಪ್ ಗೆ ಇಂದು ಚಾಲನೆ



* ನವೆಂಬರ್ 29 ರಂದು ನಡೆಯಲಿರುವ 56 ನೇ ಆವೃತ್ತಿಯ 2021 ರ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್ ಶಿಪ್ ಗೆ ಅಮೇರಿಕದ ಹೂಸ್ಟನ್ ನಲ್ಲಿ ಚಾಲನೆ ನೀಡಲಾಗಿದೆ.

* ಇದೆ ಪ್ರಥಮ ಬಾರಿಗೆ ಅಮೇರಿಕಾದಲ್ಲಿ ಈ ಟೂರ್ನಿಯು ನಡೆಯುತ್ತಿದೆ.

* 1926 ರ ಉದ್ಘಾಟನಾ ಆವೃತ್ತಿಯಲ್ಲಿ 2 ಕಂಚಿನ ಪದಕ ಗಳಿಸಿದ್ದ ಭಾರತ ತಂಡವು ಇಲ್ಲಿಯವರೆಗೂ ಯಾವುದೇ ಪದಕವನ್ನು ಗೆದ್ದಿರುವದಿಲ್ಲ.

*95 ವರ್ಷಗಳ ಬಳಿಕ ಭಾರತ ತಂಡವು ಮೊದಲ ಪದಕ ಪಡೆಯುವ ಖುಷಿಯಲ್ಲಿದೆ, ಭಾರತದಿಂದ 9 ಆಟಗಾರರು ಕಣಕ್ಕಿಳಿಯಲಿದ್ದಾರೆ.

*ಪುರುಷರ, ಮಹಿಳಾ ಸಿಂಗಲ್ಸ್ ಹಾಗೂ ಡಬಲ್ಸ್, ಮಿಶ್ರ ಡಬಲ್ಸ್ ವಿಭಾಗದಲ್ಲಿ ಪಂದ್ಯಗಳು ನಡೆಯಲಿವೆ.

* ಸಿಂಗಲ್ ಎಲಿಮಿನೇಷನ್ ಮಾದರಿಯಲ್ಲಿ ಪಂದ್ಯಾವಳಿಗಳು ನಡೆಯಲಿವೆ. 128 ಸಿಂಗಲ್ಸ್ ವಿಭಾಗಗಳಲ್ಲಿ ಹಾಗೂ 64 ಆಟಗಾರರು ಡಬಲ್ಸ್ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ.

* ಚೀನಾ ದೇಶವು ಈ ಬಾರಿ ತನ್ನ ತಾರಾ ಆಟಗಾರರನ್ನು 2024 ರ ಒಲಂಪಿಕ್ಸ್ ಗೆ ಸಿದ್ಧತೆ ನಡೆಸುವ ಉದ್ದೇಶದಿಂದ ವಿಶ್ವ ಚಾಂಪಿಯನ್ ಶಿಪ್ ಗೆ ಕಳುಹಿಸದಿರಲು ನಿರ್ಧರಿಸಿದೆ.

### ಬಿಗ್ ಬ್ಯಾಶ್ ಟೂರ್ನಿಯ ಶ್ರೇಷ್ಠ ತಂಡದಲ್ಲಿ ಸ್ಥಾನ ಪಡೆದ ಹರ್ಮನ್ ಪ್ರೀತ್ ಕೌರ್



* ಭಾರತ ಟಿ20 ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಅವರು ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ 2021 ರ ಮಹಿಳಾ ಬಿಗ್ ಬ್ಯಾಶ್ ಟಿ20 ಟೂರ್ನಿಯ ಅತ್ಯುತ್ತಮ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

*ಹರ್ಮನ್ ಪ್ರೀತ್ ಕೌರ್ ಅವರು ಮೆಲ್ಬೋರ್ನ್ ರೈನಿಗೇಡ್ಸ್ ಪರ ಆಡುತ್ತಿದ್ದಾರೆ. ಟೂರ್ನಿಯಲ್ಲಿ 3 ಅರ್ಧ

ಶತಕಗಳೊಂದಿಗೆ ಒಟ್ಟು 399 ರನ್ ಕಲೆಹಾಕಿದ್ದಾರೆ.
* ಟೂರ್ನಿಯಲ್ಲಿ 18 ಸಿಕ್ಸರ್ ಸಿಡಿಸಿರುವ ಹರ್ಮನ್, ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ್ತಿಯರ ಲಿಸ್ಟ ನಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ.

* ಟೂರ್ನಿಯಲ್ಲಿ 15 ವಿಕೆಟ್ ಕಬಳಿಸಿ, ಟೂರ್ನಿಯ ಶ್ರೇಷ್ಠ ತಂಡದಲ್ಲಿ ಸ್ಥಾನ ಪಡೆದಿರುವ ಭಾರತದ ಏಕೈಕಆಟಗಾರ್ತಿಎನಿಸಿದ್ದಾರೆ.

## ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿ ಪ್ರಶಸ್ತಿ ಮುಡಿಗೇರಿಸಿಕೊಂಡ ಅಲೆಕ್ಸಾಂಡರ್ಜ್ವೆರೆವ್



* ವರ್ಷಾಂತ್ಯದ ಪ್ರತಿಷ್ಠಿತ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಜರ್ಮನಿಯ ಯುವ ಆಟಗಾರ ಅಲೆಕ್ಸಾಂಡರ್ ಜ್ವೆರೆವ್ ಟೆನಿಸ್ ಟೂರ್ನಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.
* ಭಾನುವಾರ ನಡೆದ ಟೂರ್ನಿಯ ಫೈನಲ್ ನಲ್ಲಿ ಅಲೆಕ್ಸಾಂಡರ್ ಜ್ವೆರೆವ್ ಅವರು ಎರಡನೇ ಶ್ರೇಯಾಂಕಿತ ಹಾಗೂ ಯುಎಸ್ ಓಪನ್ ಚಾಂಪಿಯನ್ ರಷ್ಯಾದ ಡೇನಿಯಲ್ ಮೆಡ್ವೆಡೆವ್ ವಿರುದ್ಧ 6 4, 6 4,ನೇರ ಸೆಟ್ ಗಳಿಂದಜಯಗಳಿಸಿದ್ದಾರೆ.

* ಟೋಕಿಯೋ ಒಲಂಪಿಕ್ಸ್ ಸ್ವರ್ಣ ವಿಜೇತ ಜ್ವೆರೆವ್ 2 ಬಾರಿ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿ ಪ್ರಶಸ್ತಿಗಳಿಸಿದ್ದಾರೆ.
* 2018 ರಲ್ಲಿ ಮೊದಲ ಬಾರಿ ಎಟಿಪಿ ಫೈನಲ್ಸ್ ಟೆನಿಸ್ ಟೂರ್ನಿಪ್ರಶಸ್ತಿಗಳಿಸಿದ್ದರು.

## ಅಮರಾವತಿಆಂಧ್ರರಾಜ್ಯದಏಕೈಕರಾಜಧಾನಿ



* ಆಂಧ್ರ ಪ್ರದೇಶಕ್ಕೆ ಮೂರೂ ಆಡಳಿತಾತ್ಮಕ ರಾಜಧಾನಿಗಳನ್ನು ಮಾಡುವ ಆಂಧ್ರ ಪ್ರದೇಶ ವಿಕೇಂದ್ರೀಕರಣ ಮತ್ತು ಎಲ್ಲ ವಲಯಗಳ ಸಮಗ್ರ ಅಭಿವೃದ್ಧಿ ಮಸೂದೆ 2020 ಮತ್ತು ಆಂಧ್ರಪ್ರದೇಶ ರಾಜಧಾನಿ ವಲಯ ಅಭಿವೃದ್ಧಿ ಪ್ರಾಧಿಕಾರ (ಮಸೂದೆ) 2020 ಇವನ್ನು ಹಿಂಪಡೆಯಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

* ಎರಡು ಮಸೂದೆ 2020 ಗಳನ್ನೂ ಹಿಂಪಡೆಯುವ ನಿರ್ಣಯವನ್ನು ಆಂಧ್ರಪ್ರದೇಶ ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ.

* ಮೂರೂ ರಾಜಧಾನಿಗಳನ್ನು ಹೊಂದುವ ವಿವಾದಾತ್ಮಕ ಮಸೂದೆಗಳಿಗೆ ಕಳೆದ ವರ್ಷದ ಜೂಲೈ ನಲ್ಲಿ ರಾಜ್ಯಪಾಲರು ಒಪ್ಪಿಗೆ ನೀಡಿದ್ದರು.

* ಅಮರಾವತಿ ರಾಜ್ಯದ ಏಕೈಕ ರಾಜಧಾನಿ ಆಗಿರಲಿದೆ ಎಂದು ರಾಜ್ಯದ ಏಕೈಕ ರಾಜಧಾನಿ ಆಗಲಿದೆ ಎಂದು ರಾಜ್ಯದ ಅಡ್ವೋಕೇಟ್ ಜನರಲ್ ಸುಬ್ರಮಣ್ಯಮ್ ಶ್ರೀರಾಮ್ ಅವರು ಆಂಧ್ರ ಹೈಕೋರ್ಟ್ಗೆತಿಳಿಸಿದ್ದಾರೆ.

# 24- 11- 2021

## ಎರಡುಟೆಸ್ಟ್ಸರಣಿಯಿಂದದೂರಾದಕರ್ನಾಟಕದಕೆಎಲ್ರಾಹುಲ್



* ಭಾರತ ತಂಡದ ಆರಂಭಿಕ ಸ್ಟಾರ್ ಆಟಗಾರ ಕೆ ಎಲ್ ರಾಹುಲ್ ಅವರು ಗಾಯದ ಸಮಸ್ಯೆಯಿಂದ ಎರಡು ಟೆಸ್ಟ್ ಸರಣಿಯಿಂದ ಹೊರಗುಳಿದಿದ್ದಾರೆ.
* ಕೆ ಎಲ್ ರಾಹುಲ್ ಅವರನ್ನು ಅವರ ಎಡ ತೊಡೆಯ ಸ್ನಾಯುವಿನ ಸೆಳೆತದಿಂದಾಗಿ ತೊಂದರೆ ಅನುಭವಿಸುತ್ತಿದ್ದನು ಪರಿಗಣನೆಗೆ ತೆಗೆದುಕೊಂಡು ಅವರ ಸ್ಥಾನಕ್ಕೆ ಸೂರ್ಯಕುಮಾರ ಯಾದವ ಅವರನ್ನು ಎರಡು ಟೆಸ್ಟ್ ಪಂದ್ಯಗಳಿಗೆ ಸೇರಿಸಿಕೊಳ್ಳಲಾಗಿದೆ ಎಂದು ಬಿಸಿಸಿಐ ತಿಳಿಸಿದೆ.
* ಭಾರತ ತಂಡದ ಪರ ಕೆ ಎಲ್ ರಾಹುಲ್ ಅವರು ಎಲ್ಲಾ ಮೂರೂ ಸ್ವರೂಪಗಳಲ್ಲಿ ದೀರ್ಘಕಾಲ ಆಡುತ್ತಿದ್ದಾರೆ.
* ಕೆ ಎಲ್ ರಾಹುಲ್ ಅವರು 315 ರನ್ ಗಳನ್ನೂ 39.38 ಸರಾಸರಿಯಲ್ಲಿ ನೀಡುವ ಮೂಲಕ ಪ್ರದರ್ಶನ ನೀಡಿದ್ದರು.
* ಕ್ಯಾಪ್ಟನ್ ವಿರಾಟ್ ಕೊಹ್ಲಿ, ಸ್ಪೀಡ್ ಬೌಲರ್ ಬುಮ್ರಾ, ರೋಹಿತ್ ಶರ್ಮಾ, ಮತ್ತು ಮಹಮ್ಮದ್ ಶಮಿಗೆ ನ್ಯೂಜಿಲ್ಯಾಂಡ್ ಟೆಸ್ಟ್ ಸರಣಿ ಪಂದ್ಯಕ್ಕಾಗಿ ಬಿಸಿಸಿಐವಿಶ್ರಾಂತಿನೀಡಿದೆ.

## ಸಂತೋಷಟ್ರೋಫಿಗೆದ್ದುಖುಷಿಯಲ್ಲಿಕರ್ನಾಟಕ



* ದಕ್ಷಿಣ ವಲಯ ಸಂತೋಷ ಟ್ರೋಫಿ ಫುಟ್ಬಾಲ್ ಟೂರ್ನಿಯ ಅರ್ಹತಾ ಪಂದ್ಯದಲ್ಲಿ ಕರ್ನಾಟಕ ತಂಡವು 4 0 ಯಿಂದ ತಮಿಳನಾಡು ವಿರುದ್ಧ ಜಯ ಸಾಧಿಸಿದೆ.
* ಪದಕ ವಿಜೇತ ಕರ್ನಾಟಕ ತಂಡದ ಪರ ಸುಧೀರ ಹ್ಯಾಟ್ರಿಕ್ ಬಾರಿಸಿ ಮಿಂಚಿದರು. ಸುಧೀರ ಅವರು 42 , 53 , 75 ನೇ ನಿಮಿಷದಲ್ಲಿ ಗೋಲು ಬಾರಿಸಿದರು.
* ಆರಂಭದ 11 ನೇ ನಿಮಿಷದಲ್ಲಿ ಕಮಲೇಶ್ ಪಿ ಅವರು ಭರ್ಜರಿ ಪ್ರದರ್ಶನ ನೀಡಿ ಎದುರಾಳಿ ಗೋಲಕೀಪರ್ನನ್ನುಮಣಿಸುವಮೂಲಕಅಂಕಸಂಪಾದಿಸಿದರು.

## ಹುಬ್ಬಳ್ಳಿವಿಮಾನನಿಲ್ದಾಣಕ್ಕೆಪ್ರಶಸ್ತಿಗರಿ

* ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಿದ ನಂತರ ಅತ್ಯುತ್ತಮ ಪ್ರಾದೇಶಿಕ ಸಂಪರ್ಕದ



ವಿಮಾನನಿಲ್ದಾಣವಾಗಿ'ಉಡಾನ್ಆರ್ಸಿಎಸ್'ಪ್ರಶಸ್ತಿಗೆಭಾಗಿಯಾಗಿದೆ.
* ಅತಿ ಹೆಚ್ಚು ಪ್ರಯಾಣಿಕರನ್ನು ಕೊಂಡೊಯ್ದ ಕಾರಣಕ್ಕಾಗಿ ಈ ಪ್ರಶಸ್ತಿಯು ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ದೊರಕಿದೆ.
* ಭಾರತ ದೇಶದಲ್ಲಿರುವ ಪ್ರಾದೇಶಿಕ ಸಂಪರ್ಕ (ರೀಜನಲ್ ಕನೆಕ್ಟಿವಿಟಿ ಸ್ಕೀಮ್) ಜಾಲವನ್ನು ಹೊಂದಿ, ಪ್ರಯಾಣಿಕರಿಗೆ ಬೇರೆ ಸ್ಥಳಗಳೊಂದಿಗೆ ಸಂಪರ್ಕ ಸಾಧಿಸಲು ಉತ್ತಮ ಸೇವೆ ಒದಗಿಸುವ ನಿಲ್ದಾಣಗಳಿಗೆ ನಾಗರಿಕ ವಿಮಾನಯಾನ ಸಚಿವಾಲಯವು 'ಉಡಾನ್ ಆರ್ ಸಿ ಎಸ್ ' ಪ್ರಶಸ್ತಿಯನ್ನು ನೀಡುತ್ತದೆ.
* ಹುಬ್ಬಳ್ಳಿ ವಿಮಾನ ನಿಲ್ದಾಣವು ಈ ಬಾರಿ 'ಉಡಾನ್ ಆರ್ ಸಿ ಎಸ್ ' ಪ್ರಶಸ್ತಿಗೆ ಆಯ್ಕೆಯಾಗುವ ಮೂಲಕ ಹಿರಿಮೆಯನ್ನು ಸಾಧಿಸಿದೆ ಇದರಿಂದ ಅಂತಾರಾಷ್ಟ್ರೀಯ ದರ್ಜೆಗೆ ಬಡ್ತಿ ಹೊಂದಲು ಉತ್ತೇಜನ ದೊರಕಿದಂತಾಗಿದೆ.
* ನಾಗರಿಕ ವಿಮಾನಯಾನ ಖಾತೆಯ ಸಚಿವ ಜ್ಯೋತಿರಾಧಿತ್ಯ ಅವರು ಒಡಿಶಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

## ಕರ್ನಲ್ ಸಂತೋಷ ಬಾಬುಗೆ ಮರಣೋತ್ತರವಾಗಿ ಮಹಾವೀರ ಚಕ್ರಪುರಸ್ಕಾರ



* ಕಳೆದ ವರ್ಷದ ಜೂನ್ ತಿಂಗಳು ಗಾಲ್ವನ್ ಗಡಿಯಲ್ಲಿ ಚೀನಿ ಸೇನೆಯೊಂದಿಗೆ ನಡೆದ ಭಾರಿ ಸಂಘರ್ಷದಲ್ಲಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಕರ್ನಲ್ ಬಿಕುಮುಲ್ಲಾ ಸಂತೋಷ ಬಾಬು ಕುಟುಂಬಕ್ಕೆ ಮರಣೋತ್ತರವಾಗಿ ಮಹಾವೀರ ಚಕ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.
* ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಸೇನಾಪಡೆಗಳ ಎರಡನೇ ಪರಮೋಚ್ಚ ಪುರಸ್ಕಾರ ಮಹಾವೀರ ಚಕ್ರ ಪ್ರದಾನ ಮಾಡಿ ವೀರಯೋಧನ ತ್ಯಾಗಬಲಿದಾನಕ್ಕೆ ಸೂಕ್ತ ಗೌರವ ಸಲ್ಲಿಸಿದರು.
* ಪ್ರಧಾನಿ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ರಕ್ಷಣಾ ಪಡೆಗಳ ಅಗ್ರ ಸೇನಾಧಿಕಾರಿಗಳು ಪಾಲ್ಗೊಂಡ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ, ಸಂತೋಷ ಬಾಬು ಪತ್ನಿ ಬಿ. ಸಂತೋಷಿ ಮತ್ತು ತಾಯಿ ಮಂಜುಳಾ ಮಹಾವೀರ ಚಕ್ರಪುರಸ್ಕಾರವನ್ನು ಸ್ವೀಕರಿಸಿದರು.

## ಇಂದಿನಿಂದ12ನೇಆವೃತ್ತಿಯಜೂನಿಯರ್‌ಪುರುಷರಹಾಕಿವಿಶ್ವಕಪ್




* ಇವತ್ತಿನಿಂದ ಒಡಿಶಾದ ಭುವನೇಶ್ವರದಲ್ಲಿ ನಡೆಯಲಿರುವ 12 ನೇ ಆವೃತ್ತಿಯ ಜೂನಿಯರ್ (21 ವಯೋಮಿತಿ) ಪುರುಷರ ಹಾಕಿ ವಿಶ್ವಕಪ್ ನಲ್ಲಿ ಭಾರತೀಯ ತಂಡವು ಟೂರ್ನಿಯಲ್ಲಿ ಪ್ರಶಸ್ತಿ ಉಳಿಸಿಕೊಳ್ಳಲುಕಣಕ್ಕಿಳಿಯಲಿದ್ದಾರೆ.
* ವಿವೇಕ ಸಾಗರ ಪ್ರಸಾದ್ ಸಾರಥ್ಯದ ತಂಡ ಫ್ರಾನ್ಸ್ ವಿರುದ್ಧ ಮೊದಲ ಪಂದ್ಯ ಆಡುವ ಮೂಲಕ ಅಭಿಯಾನ ಆರಂಭಿಸಲಿದ್ದು, 2016 ರಲ್ಲಿ ಮಾಡಿದ ಸಾಧನೆಯನ್ನು ಪುನರಾವರ್ತಿಸುವ ಹಂಬಲದಲ್ಲಿದೆ.
* ಕಿರಿಯರ ತಂಡದ ಮುಖ್ಯ ಕೋಚ್ ಆಗಿ ಕನ್ನಡಿಗ ಬಿ ಜೆ ಕಾರ್ಯಪ್ಪಅವರು ಇದ್ದಾರೆ.
* 2001 ರಲ್ಲಿ ಭಾರತವು ಮೊದಲ ಬಾರಿ ಜೂನಿಯರ್ ವಿಶ್ವ ಕಪ್ ಗೆದ್ದಿತ್ತು.
* ಲಖನೌದಲ್ಲಿ ನಡೆದ ಟೂರ್ನಿಯಲ್ಲಿ ಭಾರತವು 2 ನೇ ಬಾರಿ ಗೆದ್ದಿತ್ತು (5 ವರ್ಷಗಳ ಹಿಂದೆ).
* ಹಿಂದಿನ ಎಲ್ಲ ಆವೃತ್ತಿಗಳನ್ನು ಗಮನಿಸಿದಾಗ ಜರ್ಮನಿ ಗರಿಷ್ಟ 6 ಬಾರಿ ಪ್ರಶಸ್ತಿ ಜಯಿಸಿದ್ದರೆ, ಭಾರತ 2 ಬಾರಿ ಪ್ರಶಸ್ತಿ ಪಡೆದು ಚಾಂಪಿಯನ್ ಆಗಿದೆ. ಆಸ್ಟ್ರೇಲಿಯಾ, ಪಾಕಿಸ್ತಾನ, ಅರ್ಜೆಂಟಿನಾ ತಲಾ 1 ಬಾರಿ ಚಾಂಪಿಯನ್‌ಆಗಿವೆ.

## ಕೇಂದ್ರಘೋಷಿಸಿದ'ಭಾರತಗೌರವ್'ರೈಲುಸೇವೆ



* ಪ್ರವಾಸಿಗರು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಐತಿಹಾಸಿಕ ಮಹತ್ವವುಳ್ಳ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಉದ್ದೇಶದ ಸಲುವಾಗಿ ರೈಲ್ವೆ ಇಲಾಖೆ 'ಭಾರತ ಗೌರವ್ ರೈಲು' ಸೇವೆಗಳನ್ನು ಘೋಷಿಸಿದೆ.
* ಕೇಂದ್ರೀಯ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರು 'ಭಾರತ ಗೌರವ್ ರೈಲು'ಸೇವೆ ಕುರಿತು ಮಾಹಿತಿ ನೀಡಿದ್ದಾರೆ.
* ಈ ಪ್ರವಾಸ ಸೇವೆಯನ್ನು ಒದಗಿಸುವ ಸಂಸ್ಥೆಗಳು ಪ್ರವಾಸಿ ತಾಣಗಳಸಂಸ್ಕೃತಿ,ಪರಂಪರೆಗೆಪೂರಕವಾಗಿ ರೈಲಿಗೆಹೆಸರನ್ನಿಡಬಹುದು.ಉದಾಹರಣೆಗೆಸಿಖ್‌ಪರಂಪರೆ ಬಿಂಬಿಸುವ ಪ್ರವಾಸವಾಗಿದ್ದರೆ ಗುರುಕೃಪಾ ರೈಲು, ಶ್ರೀ ಭಗವಾನ್ ಶ್ರೀ ರಾಮನ ಮಂದಿರಗಳಿಗೆ ಭೇಟಿ ನೀಡುವ ಪ್ರವಾಸಕ್ಕೆ ರಾಮಾಯಣ ರೈಲು ಇತ್ಯಾದಿ ಎಂದು ರೈಲ್ವೆ ಸಚಿವರು 'ಭಾರತ ಗೌರವ್ ರೈಲು' ವಿವರಣೆನೀಡಿದ್ದಾರೆ.

## ಮಹುವಾ (ಇಪ್ಪೆ ಮರ) ಮದ್ಯವನ್ನು ಕಾನೂನು ಬದ್ಧಗೊಳಿಸುವದಾಗಿಘೋಷಿಸಿದಮಧ್ಯಪ್ರದೇಶಸರ್ಕಾರ



* ಮಹುವಾದಿಂದ ತಯಾರಿಸುವ ಮದ್ಯವನ್ನು ಪಾರಂಪರಿಕ ಮದ್ಯದ ಪಟ್ಟಿಕ್ಕೆ ಒಯ್ಯಲು ಕಾನೂನು ಬದ್ಧಗೊಳಿಸುವದಕ್ಕಾಗಿ ಹೊಸ ಅಬಕಾರಿ ನೀತಿಯನ್ನು ಮಧ್ಯಪ್ರದೇಶ ಸರ್ಕಾರ ಶೀಘ್ರದಲ್ಲೇ ತರಲಿದೆ.
* ಮಹುವಾ (ಇಪ್ಪೆ ಮರ) ಮದ್ಯವನ್ನು 'ಪಾರಂಪರಿಕ ಮದ್ಯ' ವಾಗಿ ಮಾರಾಟ ಮಾಡಲಾಗುವದು ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.
* ಮಹುವಾ (ಇಪ್ಪೆ ಮರ) ಮದ್ಯವನ್ನು ತಯಾರಿಸುವ ಮತ್ತು ಸೇವಿಸುವ ಬುಡಕಟ್ಟು ಜನರಿಗೆ ಉದ್ಯೋಗ ಮತ್ತು ಆದಾಯ ದೊರಕಿಸಿಕೊಡಲು ಇದನ್ನು 'ಹೆರಿಟೇಜ ಲಿಕ್ಕರ್' ಎಂದು ಮದ್ಯದಂಗಡಿಗಳಲ್ಲಿ ಮಾರಾಟ ಮಾಡಲಾಗುವದು.ಇದನ್ನು ಮಾರುವ ಹಕ್ಕನ್ನು ಕೂಡಾ ಬುಡಕಟ್ಟು ಜನರಿಗೆ ನೀಡಲಾಗುವದುಎಂದುಮುಖ್ಯಮಂತ್ರಿಶಿವರಾಜ್‌ಸಿಂಗ್‌ಚೌಹಾಣ್‌ತಿಳಿಸಿದ್ದಾರೆ.

## ಎಚ್‌ಐವಿಸೋಂಕಿಗೆಸೆಡ್ಡುಹೊಡೆದಅರ್ಜೆಂಟಿನಾಸ್ತ್ರೀ

* ಎಚ್‌ಐವಿ ಸೋಂಕಿನ ವಿರುದ್ಧ ಹೋರಾಟ ನಡೆಸಿ ಶಾಶ್ವತವಾದ ಗೆಲವು ಕಂಡ ವಿಶ್ವದ ಬೆರಳಿಣಿಕೆ ಜನರ ಪೈಕಿಅರ್ಜೆಂಟಿನಾ ಸ್ತ್ರೀ ಯನ್ನು ಸೇರಿಸಬಹುದು ಎಂಬುದು ಸಂಶೋಧಕರ ಅಭಿಮತ.
* ಅರ್ಜೆಂಟಿನಾದ ಎಸ್ಪೆರಾಂಜಾ ನಗರದ ನಿವಾಸಿಯಾದ 30 ರ ವಯೋಮಾನದ ಈ ಮಹಿಳೆಗೆ 2013 ರಲ್ಲಿ ಎಚ್‌ಐವಿ ಸೋಂಕು ಇರುವದು ಪತ್ತೆಯಾಗಿತ್ತು. 2017 ರಲ್ಲಿ ಇವರ ಪತಿ ಎಚ್‌ಐವಿ ಸೋಂಕಿನಿಂದ ನರಳಿ ಪ್ರಾಣ ಕಳೆದುಕೊಂಡಿದ್ದರು.
* ರೋಗ ಪತ್ತೆಯಾದ ಬಳಿಕ ಈ ಮಹಿಳೆಯು ಚಿಕಿತ್ಸೆಗೆಗೊಳಗಾಗಿದ್ದಾಳೆ ಆದಾಗ್ಯೂ ಆಕೆ ಚಿಕಿತ್ಸೆ ನೀಡಿದ ಔಷದಗಳನ್ನು ನಿರ್ಲಕ್ಷಿಸಿದ ನಂತರ ಪರೀಕ್ಷೆಗೆ ಒಳಪಡಿಸಿದಾಗ ಸೋಂಕಿನ ಗುಣ ಲಕ್ಷಣಗಳು ಪತ್ತೆಯಾಗಿಲ್ಲ.ಮರುಕಳಿಸುವ ಲಕ್ಷಣವು ಗೋಚರಿಸಿಲ್ಲ.ಆದ್ದರಿಂದ ಈ ಮಹಿಳೆಯು ಎಚ್‌ಐವಿ ' ಎಲೈಟ್ ಕಂಟ್ರೋಲರ್ ' ನ ವೈದ್ಯಕೀಯ ಲಕ್ಷಣಗಳನ್ನು ಹೊಂದಿದ್ದಾರೆ ಎಂದು ಆನ್ನಲ್ಸ್ ಆಫ್ ಇಂಟರ್ನಲ್ ' ಮೆಡಿಸಿನನಲ್ಲಿ ಪ್ರಕಟಣೆಗೆ ಸಿದ್ಧವಾಗಿರುವ ಅಧ್ಯಯನ ಹೇಳಿದೆ.
* ವಿಶ್ವದಲ್ಲಿ 80 ದಶಲಕ್ಷ ಜನರು ಎಚ್‌ಐವಿ ಬಾಧಿತರಾಗಿದ್ದು, 36.3 ದಶಲಕ್ಷ ಜನರು ಮೃತಪಟ್ಟಿದ್ದಾರೆಹಾಗೂ37.7ದಶಲಕ್ಷಜನರುಎಚ್‌ಐವಿಯೊಂದಿಗೆಬದುಕುತ್ತಿದ್ದಾರೆ.

## 25-11-2021

## ಕೇಂದ್ರಸಚಿವಸಂಪುಟವುಗರೀಬ್‌ಕಲ್ಯಾಣ್‌ಅನ್ನಯೋಜನೆಅಡಿಯಲ್ಲಿ ಉಚಿತ ಧಾನ್ಯ ಮಾರ್ಚ್‌ವರೆಗೆ ವಿಸ್ತರಿಸಲು ಅನುಮೋದನೆ ನೀಡಿದೆ



* ಪ್ರಸ್ತುತ ಕೇಂದ್ರ ಸಚಿವ ಸಂಪುಟವು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ ವ್ಯಕ್ತಿಗೆ ಪ್ರತೀ ತಿಂಗಳು 5 ಕೆ.ಜಿ. ಉಚಿತ ಆಹಾರ ಧಾನ್ಯವನ್ನು ನೀಡುತ್ತಿದೆ ಇದೀಗ ಅದನ್ನು 2022 ರ ಮಾರ್ಚ್‌ತಿಂಗಳಿನವರೆಗೆವಿಸ್ತರಿಸಲಾಗಿದೆಎಂದುಸಚಿವಸಂಪುಟತಿಳಿಸಿದೆ.
*ಈಉಚಿತಆಹಾರ ಧಾನ್ಯ ವಿಸ್ತರಣೆಯಿಂದಾಗಿ ಒಟ್ಟಾರೆ 2.6 ಲಕ್ಷ ಕೋಟಿ ರೂ. ವೆಚ್ಚ ತಗುಲಲಿದೆ ಎಂದು ತಿಳಿಸಿದ್ದಾರೆ.
* ಈ ಉಚಿತ ಆಹಾರ ಧಾನ್ಯ ವಿಸ್ತರಣೆಯು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ ಅಡಿಯಲ್ಲಿನ 80 ಕೋಟಿಗೂ ಅಧಿಕ ಜನರಿಗೆ ಸಹಾಯವಾಗಲಿದೆ ಎಂದು ತಿಳಿಸಿದೆ, ಈ ನಿರ್ಧಾರವನ್ನು ಪ್ರಧಾನಿಮೋದಿ ನೇತೃತ್ವದಕೇಂದ್ರಸಚಿವಸಂಪುಟವುತೆಗೆದುಕೊಂಡಿದೆ.
* ಈ ಉಚಿತ ಆಹಾರ ಧಾನ್ಯ ಯೋಜನೆಯ ಮೊದಲ ಹಂತವು 2020 ರ 'ಏಪ್ರಿಲ್ ನಿಂದ ಜೂನ್',2ನೇಹಂತವು2020ರ'ಜುಲೈ ನಿಂದನವೆಂಬರ್',ಮೂರನೇಹಂತವು2021ರ

'ಮೇ ನಿಂದ ಜೂನ್', ಇದೀಗ 4 ನೇ ಹಂತವು 2021 ರ 'ಜುಲೈ ತಿಂಗಳಿನಿಂದ ನವೆಂಬರ್‌ವರೆಗೆ ಜಾರಿಯಲ್ಲಿತ್ತು, ಆದರೆ ಇದೀಗ ಈ ಯೋಜನೆಯುನ್ನು ಮತ್ತೇ ಮುಂದಿನ 4 ತಿಂಗಳವರೆಗೆ ವಿಸ್ತರಣೆಮಾಡಿದ್ದಾರೆ.

## ಪ್ರಧಾನಿ ಮೋದಿ ಅವರಿಂದ ನೋಯ್ಡಾ ಅಂತರಾಷ್ಟ್ರೀಯ ವಿಮಾನನಿಲ್ದಾಣಕ್ಕೆಶಂಕುಸ್ಥಾಪನೆ



* ಪ್ರಸ್ತುತ ಉತ್ತರ ಪ್ರದೇಶದ ಗೌತಮ್ ಬುದ್ಧ ನಗರದ ಜೆವಾರ್‌ದಲ್ಲಿನ ನೋಯ್ಡಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆಯನ್ನು ಮಾಡಲಿದ್ದಾರೆ.
* ಇದೀಗ ಕೇಂದ್ರ ಸರ್ಕಾರವು 10,050 ಕೋಟಿಗೂ ಅಧಿಕ ವೆಚ್ಚದಲ್ಲಿ ವಿಮಾನ ನಿಲ್ದಾಣದ ಮೊದಲ ಹಂತದ ಕಾರ್ಯವನ್ನು ಅಭಿವೃದ್ಧಿಪಡಿಸುತ್ತಿದೆ.
* ವಿಮಾನ ನಿಲ್ದಾಣದ ಮೊದಲ ಹಂತದ ಕಾರ್ಯ ಪೂರ್ಣಗೊಂಡ ನಂತರ ವರ್ಷಕ್ಕೆ ಸುಮಾರು 1.2 ಕೋಟಿ ಪ್ರಯಾಣಿಕರಿಗೆ ತನ್ನ ಸೇವೆಯನ್ನು ನೀಡಲಿದೆ, ಹಾಗೂ 2024 ರ ಸಮಯಕ್ಕೆ ವಿಮಾನ ನಿಲ್ದಾಣದ ಕೆಲಸಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಲಾಗಿದೆ.
* ಪ್ರಸ್ತುತ ಉತ್ತರ ಪ್ರದೇಶದ ಗೌತಮ್ ಬುದ್ಧ ನಗರದ ಜೆವಾರ್‌ದಲ್ಲಿನ ನೋಯ್ಡಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು 10,050 ಕೋಟಿ ವೆಚ್ಚದಲ್ಲಿ ಮೊದಲ ಹಂತವನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಹಾಗೂ ಇದು ಒಟ್ಟು 1300 ಹೆಕ್ಟೇರ್ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ.
* ಇದು ದೆಹಲಿ NCR ನಲ್ಲಿ ಬರಲಿರುವ ವಿಮಾನ ನಿಲ್ದಾಣಗಳ ಪೈಕಿ 2 ನೇ ಅಂತಾರಾಷ್ಟ್ರೀಯ ವಿಮಾನನಿಲ್ದಾಣವಾಗಿದೆಎಂದುNIAತಿಳಿಸಿದೆ.

## ಕೇಂದ್ರ ಸರ್ಕಾರದಿಂದ ದೇಶದ ಹವಾಮಾನ ಸೇವೆಗಳನ್ನು ನವೀಕರಿಸಲು2135ಕೋಟಿರೂ.ಗೆಅನುಮೋದನೆ



* ಇದೀಗ ದೇಶದಲ್ಲಿನ ಹವಾಮಾನ ಮುನ್ಸೂಚನೆ ಹಾಗೂ ಹವಾಮಾನ ಸೇವೆಗಳನ್ನು ಮತ್ತಷ್ಟು ಹೆಚ್ಚಿಸುವ ಹಾಗೂ ನವೀಕರಿಸುವ ಯೋಜನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು 2,135 ಕೋಟಿ ರೂ. ಅನುಮೋದನೆ ನೀಡಿದೆ.
* ಸಂಪುಟ ಸಮಿತಿಯು ವಾಯುಮಂಡಲ ಮತ್ತು ಹವಾಮಾನ ಸಂಶೋಧನೆ ಮಾಡೆಲಿಂಗ್ ವೀಕ್ಷಣಾ ವ್ಯವಸ್ಥೆಗಳನ್ನು ಮುಂದುವರೆಸಲು ಅನುಮೋದನೆ ನೀಡಿದೆ, ಅಷ್ಟೇ ಅಲ್ಲದೇ ಇದೇಯೋಜನೆಅಡಿಯಲ್ಲಿ 8 ಉಪ ಯೋಜನೆಗಳನ್ನು ಜಾರಿತರಲಾಗುವದು ಎಂದು ತಿಳಿಸಿದೆ.
* ಪ್ರಸ್ತುತ ಭೂ ವಿಜ್ಞಾನ ಸಚಿವಾಲಯವು ಈ ಎಲ್ಲಾ ಉಪ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ.
* ಈ ಯೋಜನೆಯಿಂದಾಗಿ ದೇಶದಲ್ಲಿನ ಎಲ್ಲ ಹವಾಮಾನ ಹಾಗೂ ಸಾಗರ ಮುನ್ಸೂಚನೆಯ ಸೇವೆಗಳಲ್ಲಿ ಬದಲಾವಣೆ ತರುವ ಗುರಿಯನ್ನು ಹೊಂದಿದೆ.
* ಮುಂಬರುವ 5 ವರ್ಷಗಳಲ್ಲಿ ಮುನ್ಸೂಚನೆ ವ್ಯವಸ್ಥೆ, ಹವಾಮಾನ ಸೇವೆಗಳು, ವಾತಾವರಣದವೀಕ್ಷಣಾಜಾಲ,ಮಾನ್ಸೂನ್‌ಮತ್ತುಮೋಡಗಳಅಧ್ಯಯನಹಾಗೂದೇಶದಲ್ಲಿ ಪೋಲಾರಿಮೆಟ್ರಿಕ್ ಡಾಪ್ಲರ್ ಹವಾಮಾನ ರಾಡಾರ್‌ಗಳನ್ನು ನಿಯೋಜಿಸುವ ಗುರಿಯನ್ನು ಹೊಂದಿವೆ.

## 2023 ಅಥವಾ 2024 ರ ಆರಂಭದಲ್ಲಿ ಸ್ವದೇಶಿ 6ಜಿ ತಂತ್ರಜ್ಞಾನಜಾರಿ



* ಇದೀಗ ದೇಶದ ಗುರುತನ್ನು ಜಗತ್ತಿನ ದೂರಸಂಪರ್ಕ ಮಾರುಕಟ್ಟೆಯಲ್ಲಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಸ್ವದೇಶಿ 6ಜಿ ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿದೆ, ಈ ತಂತ್ರಜ್ಞಾನವನ್ನು 2023 ಅಥವಾ 2024 ನೇ ವರ್ಷದ ಪ್ರಾರಂಭದಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿದೆ ಎಂದು ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿಕೆ ನೀಡಿದ್ದಾರೆ.
* ಈ ಸ್ವದೇಶಿ 6ಜಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ವಿಜ್ಞಾನಿ ಹಾಗೂ ಎಂಜಿನಿಯರ್‌ಗಳಿಗೆ ಪರವಾನಿಗೆಯನ್ನು ನೀಡಲಾಗಿದೆ, ಅಷ್ಟೇ ಅಲ್ಲದೇ ಇದನ್ನು ಇಂಡಿಯಾ ಟೆಲಿಕಾಂ ಸಾಫ್ಟ್ ವೇರ್‌ನಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ, ಹಾಗೂ ಇದನ್ನು ದೇಶೀಯವಾಗಿ ಸಿದ್ಧಪಡಿಸಲಾಗುತ್ತಿದೆ, ಇದರ ಜೊತೆಯಲ್ಲಿ ಸ್ವದೇಶೀಯವಾಗಿ 5ಜಿ ಸ್ಪೆಕ್ಟ್ರಂ ಅಭಿವೃದ್ಧಿಪಡಿಸಲು ಸಕಲ ಪ್ರಯತ್ನಗಳನ್ನೂ ಕಲ್ಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.
* 5 ಜಿ ಹರಾಜು ಪ್ರಕ್ರಿಯೆ ಮುಂದಿನ ವರ್ಷದ 2ನೇ ತ್ರೈಮಾಸಿಕದಲ್ಲಿ ನಡೆಯಲಿದೆ ಎಂದಿದ್ದಾರೆ.
* 5 ಜಿ ತಂತ್ರಜ್ಞಾನ: 6 ಗಿಗಾ ಹರ್ಟ್ಜ್ ಗಿಂತ ಕೆಳಗೆ, ಗರಿಷ್ಠ 24.25 ಗಿ.ಹರ್ಟ್ಜ್ ಗಿಂತ ಮೇಲೆ ಕಾರ್ಯ ನಿರ್ವಹಿಸಲಿದೆ. ಒಂದು ಸೆಕೆಂಡಿಗೆ 1 ರಿಂದ 10 ಗಿಗಾಬೈಟ್ ದತ್ತಾಂಶ ಸಾಗಾಣಿಯ ಸಾಮರ್ಥ್ಯವನ್ನು ಹೊಂದಿದೆ. ಮೊಬೈಲ್‌ಗಳಿಗೆ 1 ಸೆಕೆಂಡಿನಲ್ಲಿ 100 MBPS ದತ್ತಾಂಶ ರವಾನೆ, ಹಾಗೂ ಸ್ವೀಕಾರ ಸಾಮರ್ಥ್ಯವನ್ನು ಹೊಂದಿದೆ.
* 6 ಜಿ ತಂತ್ರಜ್ಞಾನ: 95 ಗಿಗಾ ಹರ್ಟ್ಜ್ ನಿಂದ 3 ಟೆರಾ ಹರ್ಟ್ಜ್ ವರೆಗೆ ಕಾರ್ಯ ನಿರ್ವಹಿಸಲಿದೆ. 1 ಸೆಕೆಂಡಿಗೆ1,000ಗಿಗಾಬೈಟ್‌ನಷ್ಟುದತ್ತಾಂಶವರ್ಗಾಯಿಸುವಸಾಮರ್ಥ್ಯವನ್ನುಹೊಂದಿದೆ.

## ಕೇಂದ್ರ ಸಚಿವ ಸಂಪುಟವು 3 ಕೃಷಿ ಕಾಯ್ದೆ ತಿದ್ದುಪಡಿಯ ರದ್ದತಿಗೆ



## ಅನುಮೋದನೆನೀಡಿದೆ

* ಇತ್ತೀಚಿಗೆ ಪ್ರಧಾನಿ ನರೇಂದ್ರ ಮೋದಿ ಅವರು 3 ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಘೋಷಣೆ ಮಾಡಿದ್ದಾರೆ, ಇದೀಗ ಕೇಂದ್ರ ಸಚಿವ ಸಂಪುಟವು ಈ 3 ಕೃಷಿ ಕಾಯ್ದೆಗಳ ರದ್ದತಿಗೆ ಅನುಮೋದನೆ ನೀಡಿದೆ, ಅಷ್ಟೇ ಅಲ್ಲದೇ ಕೃಷಿ ಕಾನೂನುಗಳ ರದ್ದತಿ ಮಸೂದೆಯ ಜೊತೆಗೆ 26ಹೊಸಮಸೂದೆಗಳನ್ನುಸಚಿವಸಂಪುಟವುಒಪ್ಪಿಗೆಯನ್ನುನೀಡಿದೆ.
* ಇದೇ ನವೆಂಬರ್ 29 ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಈ ಹೊಸ 26 ಮಸೂದೆಗಳನ್ನೂ ಮಂಡನೆ ಮಾಡಲು ಸಕಲ ಸಿದ್ಧತೆಗಳನ್ನೂ ನಡೆಸಲಾಗುತ್ತಿದೆ ಎಂದಿದ್ದಾರೆ.
* ಇದೇ ನವೆಂಬರ್ 29 ರಿಂದ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಈ 3 ಕೃಷಿ ಕಾನೂನುಗಳನ್ನು ರದ್ದುಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ಅಮೇರಿಕದಪ್ರಜಾಪ್ರಭುತ್ವಶೃಂಗಸಭೆಗೆತೈವಾನ್‌ಗೆಆಹ್ವಾನ



* ಪ್ರಸ್ತುತ ಅಮೇರಿಕ ರಾಷ್ಟ್ರವು ವರ್ಚುವಲ್ ಮೂಲಕ ಜರುಗುವ ಪ್ರಜಾಪ್ರಭುತ್ವದ ಬಗೆಗಿನ ಶೃಂಗಸಭೆಗೆ ಸ್ವಯಂ ಆಡಳಿತ ವ್ಯವಸ್ಥೆಯಿರುವ ತೈವಾನ್‌ಗೆ ಆಹ್ವಾನವನ್ನು ನೀಡಿದೆ, ಇದೀಗ ಚೀನಾ ರಾಷ್ಟ್ರವು ಆಮೇರಿಕಾದ ಈ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದೆ ಎಂದು ತಿಳಿದುಬಂದಿದೆ.
* ತೈವಾನ್‌ಪ್ರದೇಶವು ಚೀನಾ ರಾಷ್ಟ್ರದ ಅವಿಭಾಜ್ಯ ಅಂಗವಾಗಿದೆ.
* ಅಮೇರಿಕದ ತಥಾಕಥಿತ ಪ್ರಜಾಪ್ರಭುತ್ವ ಶೃಂಗಸಭೆಯಲ್ಲಿ ತೈವಾನ್ ಅಧಿಕಾರಿಗಳು ಭಾಗಿಯಾಗುವಂತೆ ಅಮೇರಿಕ ರಾಷ್ಟ್ರವು ನೀಡಿರುವ ಆಹ್ವಾನವನ್ನು ಚೀನಾ ದೇಶವು ಇದೀಗ ವಿರೋಧಿಸುತ್ತಿದೆ ಎಂದು

ಚೀನಾ ದೇಶದ ವಿದೇಶ ವ್ಯವಹಾರ ಇಲಾಖೆಯ ವಕ್ತಾರ ಝೂವೊ ಲಿಜಿಯನ್ ಅವರು ತಿಳಿಸಿದ್ದಾರೆ.

## ಕ್ಷುದ್ರಗ್ರಹ ನಾಶಕ್ಕೆ ನಾಸಾದಿಂದ್ದ ಜಗತ್ತಿನ ಮೊಟ್ಟಮೊದಲ ಗ್ರಹ ರಕ್ಷಣಾಗಗನನೌಕೆಉಡಾವಣೆ



* ಇದೀಗ ನಾಸಾ(NASA) ವಿಶ್ವದ ಮೊಟ್ಟಮೊದಲ ಉಪಗ್ರಹಾಧಾರಿತ ರಕ್ಷಣಾ ವ್ಯವಸ್ಥೆಯಾಗಿರುವ 'ಡಾರ್ಟ್' (Double Asteroid Redirection Test DART)'ನ್ನು ಬಾಹ್ಯಾಕಾಶಕ್ಕೆ ಉಡಾವಣೆ ಮಾಡಿದೆ.
* ಅಮೇರಿಕದ ನಾಸಾ ಸಂಸ್ಥೆಯು 'ಡಿಮಾರ್ಫಸ್' ಎಂಬ ಕ್ಷುದ್ರಗ್ರಹವನ್ನು ನಾಶಪಡಿಸುವ ಉದ್ದೇಶದಿಂದ ಈ ಕ್ಷಿಪಣಿಯ ಪ್ರಯೋಗವನ್ನು ನಡೆಸಿದೆ ಎನ್ನಲಾಗಿದೆ.
* ಈ 'ಡಾರ್ಟ್'ನ್ನು ಸ್ಪೇಸ್ ಎಕ್ಸ್‌ನ ಫಾಲ್ಕನ್ '9' ರಾಕೆಟ್‌ನ್ನು ಬಳಸಿ ಆಕಾಶಕ್ಕೆ ರವಾನಿಸಲಾಗಿದೆ.
* ಈ ಡಾರ್ಟ್' ಕ್ಷಿಪಣಿಯು 160 ಮೀ. ವ್ಯಾಸವನ್ನು ಹೊಂದಿರುವ ಕ್ಷುದ್ರಗ್ರಹವನ್ನು ನಾಶಪಡಿಸಲಿದೆ, ಈ ಮೊದಲು ಈ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಲಿದೆ ಎಂದು ಅಂದಾಜಿಸಲಾಗಿತ್ತು, ಆದರೆಇದುಭೂಮಿಗೆಅಪ್ಪಳಿಸುವುದಿಲ್ಲಎಂದುಕ್ರಮೇಣವಾಗಿತಿಳಿದುಬಂದಿದೆ.
* ಮುಂದಿನ ದಿನಗಳಲ್ಲಿ ಈ ಕ್ಷುದ್ರಗ್ರಹಗಳ ಅಪಾಯವನ್ನು ನಿಗ್ರಹಿಸುವ ನಿಟ್ಟಿನಲ್ಲಿ ಈ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಲಾಗಿದೆಎಂದುನಾಸಾತಿಳಿಸಿದೆ.
* ಇದೀಗ ಈ ಡಾರ್ಟ್' ಕ್ಷಿಪಣಿಯು ಬಾಹ್ಯಾಕಾಶದಲ್ಲಿ ಪ್ರತಿ ಸೆಕೆಂಡಿಗೆ 6.6 ಕಿ.ಮೀ. ಅಥವಾ ಗಂಟೆಗೆ 24,000 ಕಿ.ಮೀ. ವೇಗದಲ್ಲಿ ಸಾಗುತ್ತಿದೆ, ಹಾಗೂ ಇದು 2022ರಸೆ.26ರಿಂದಅ.1ರಮಧ್ಯದಲ್ಲಿ ಢಿಕ್ಕಿ ಹೊಡಿಯುವ ಸಾಧ್ಯತೆಗಳಿವೆ ಎಂದು ನಾಸಾ ವಿಜ್ಞಾನಿಗಳು ಮಾಹಿತಿಯನ್ನು ನೀಡಿದ್ದಾರೆ.

## ಅಮೇರಿಕ ಅಧ್ಯಕ್ಷ ಜೋ ಬಿಡೆನ್ ಅವರಿಂದ 50 ದಶಲಕ್ಷ ಬ್ಯಾರೆಲ್ ತೈಲಬಿಡುಗಡೆ



* ಪ್ರಸ್ತುತ ಅಮೇರಿಕ ಅಧ್ಯಕ್ಷ ಜೋ ಬಿಡೆನ್ ಅವರು ಇಂಧನ ಬೆಲೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ದೇಶದ ಕಾರ್ಯತಂತ್ರ ಮೀಸಲಿರುವ 50 ದಶಲಕ್ಷ ಬ್ಯಾರೆಲ್‌ಗಳಷ್ಟು ತೈಲವನ್ನು ಬಿಡುಗಡೆ ಮಾಡಲು ಆದೇಶ ನೀಡಿದ್ದಾರೆ.
* ಪ್ರಸ್ತುತ ಪೆಟ್ರೋಲ್‌ಗೆ ಹೆಚ್ಚಿದ ಬೇಡಿಕೆಯಿಂದಾಗಿರುವ ಹಣದುಬ್ಬರವನ್ನು ಕಡಿಮೆ ಮಾಡಲು ಹಾಗೂ ತನ್ನ ದೇಶದ ಪ್ರಜೆಗಳ ಹೊರೆಯನ್ನು ಕಡಿಮೆ ಮಾಡಲು ಈ ನಿರ್ಧಾರವನ್ನು ಅಮೇರಿಕ ಅಧ್ಯಕ್ಷ ಜೋ ಬಿಡೆನ್ ಅವರು ಕೈಗೊಂಡಿದ್ದಾರೆಎನ್ನಲಾಗಿದೆ.

## 'ಅತ್ಯಂತ ಮಾಲಿನ್ಯ ನಗರ' ಎಂಬ ಪಟ್ಟಿ ಪಡೆದ ಪಾಕಿಸ್ತಾನದ ಲಾಹೋರ್



* ಪ್ರಸ್ತುತ ಪಾಕಿಸ್ತಾನದ ಸಾಂಸ್ಕೃತಿಕ ರಾಜಧಾನಿ ಎಂದೇ ಕರೆಯಲ್ಪಡುವ ಲಾಹೋರ್, ಇದೀಗ ಜಗತ್ತಿನಲ್ಲೇ ಅತಿಹೆಚ್ಚು ಮಾಲಿನ್ಯಕ್ಕೆ ಒಳಗಾದ ನಗರ ಎಂಬ ಕಳಂಕವನ್ನು ಪಡೆದಿದೆ.
* ಪ್ರಸ್ತುತ ಸ್ವಿಟ್ಜರ್‌ಲೆಂಡ್ ದೇಶದ 'ಪ್ಲಾಟ್‌ಫಾರ್ಮ್ ಐಕ್ಯೂಏರ್' ಎಂಬ ವಾಯು ಗುಣಮಟ್ಟದ ಮೇಲೆ ನಿಗಾ ಇಡುವ ಕಂಪನಿಯು ಈ ಮಾಹಿತಿಯನ್ನು ಬಹಿರಂಗ ಪಡಿಸಿದೆ.
* ಇದೀಗ ವಿಶ್ವದ ಅತ್ಯಂತ ಮಾಲಿನ್ಯ ನಗರಗಳ ಪಟ್ಟಿಯಲ್ಲಿ ಪಾಕಿಸ್ತಾನದ ಲಾಹೋರ್ ಅಗ್ರ ಸ್ಥಾನ ಪಡೆದುಕೊಂಡಿದೆ.
* ಪ್ರಸ್ತುತ ಅಮೇರಿಕದ ಎಕ್ಯೂಐ ಎಂಬ ಸಂಸ್ಥೆಯ ನಗರಗಳ ವಾಯು ಗುಣಮಟ್ಟ ಅಳೆಯುತ್ತದೆ, ಇದರ ಪ್ರಕಾರ ಪಾಕಿಸ್ತಾನದ ಲಾಹೋರ್‌ನ ವಾಯು ಗುಣಮಟ್ಟ ಸೂಚ್ಯಂಕ '203' ಎಂದು ದಾಖಲಾಗಿದೆ.
* ಇದರ ನಂತರದ ಸ್ಥಾನದಲ್ಲಿ ಭಾರತದ ದೆಹಲಿ ನಗರದ ವಾಯು ಗುಣಮಟ್ಟವು ಸೂಚ್ಯಂಕ ಪ್ರಕಾರ'183'ಎಂದುಸಂಸ್ಥೆ ತಿಳಿಸಿದೆ.
* ಅಷ್ಟೇ ಅಲ್ಲದೇ ಬಾಂಗ್ಲಾದೇಶದ ಢಾಕಾ ನಗರವು ವಾಯು ಗುಣಮಟ್ಟ ಸೂಚ್ಯಂಕ ಪ್ರಕಾರ '169' ಪಡೆದು3ನೇಸ್ಥಾನದಲ್ಲಿದೆ.
* ಭಾರತದ ಕೋಲ್ಕತ್ತ ನಗರವು ಸೂಚ್ಯಂಕ ಪ್ರಕಾರ '168' ಪಡೆದು 4 ನೇ ಸ್ಥಾನದಲ್ಲಿದೆ ಎಂದು ವಾಯುಗುಣಮಟ್ಟಅಳೆಯುವಸಂಸ್ಥೆತಿಳಿಸಿದೆ.

## ಸ್ವೀಡನ್‌ನಪ್ರಧಾನಿಮ್ಯಾಗ್ಡಲೀನಾರಾಜೀನಾಮೆ



* ಇತ್ತೀಚಿಗಷ್ಟೇ ಹೊಸದಾಗಿ ಚುನಾಯಿತವಾದ ಸ್ವೀಡನ್ ನ ಪ್ರಧಾನಿ ಮ್ಯಾಗ್ಡಲೀನಾ ಆಂಡರ್ಸನ್ ಅವರು ಇದೀಗ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ, ಮ್ಯಾಗ್ಡಲೀನಾ ಆಂಡರ್ಸನ್ ಅವರು ಅಧಿಕಾರಕ್ಕೆ ಬಂದ ಕೆಲವೇ ಗಂಟೆಗಳ ನಂತರ ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ನೀಡಿದ್ದಾರೆ.
* ಪ್ರಸ್ತುತ ಸ್ವೀಡನ್ ನ ಗ್ರೀನ್ ಪಾರ್ಟಿ ಪಕ್ಷವು ತಮ್ಮ ಸಮ್ಮಿಶ್ರ ಸರ್ಕಾರವನ್ನು ತೊರೆಯುವುದಾಗಿ ಹೇಳಿಕೆ ನೀಡಿದ ನಂತರ ಈ ಕ್ರಮವನ್ನು ಮ್ಯಾಗ್ಡಲೀನಾ ಆಂಡರ್ಸನ್ ಅವರು ಕೈಗೊಂಡಿದ್ದಾರೆ.
* ಸ್ವೀಡನ್'ನ ಮೊದಲ ಮಹಿಳಾ ಪ್ರಧಾನಿ ಇವರಾಗಿದ್ದಾರೆ.
* ಆಂಡರ್ಸನ್ ಅವರು ಇತ್ತೀಚಿಗಷ್ಟೇ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದರು, ತದನಂತರ ಕೆಲ ಗಂಟೆಗಳ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.
* ಆಂಡರ್ಸನ್ ಅವರು ಜೂನಿಯರ್ ಈಜು ಚಾಂಪಿಯನ್ ಆಗಿದ್ದರು, ಹಾಗೂ 1996 ರಲ್ಲಿನ ಪ್ರಧಾನ ಮಂತ್ರಿ ಗೋರಾನ್ ಪರ್ಸನ್ ಅವರ ರಾಜಕೀಯ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ, ಅಷ್ಟೇ ಅಲ್ಲದೇ ಕಳೆದ 7 ವರ್ಷಗಳಿಂದ ಹಣಕಾಸು ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.
* ಪ್ರಸ್ತುತ ಇಲ್ಲಿಯವರೆಗೆ ನಾರ್ಡಿಕ್ ರಾಜ್ಯಗಳ ಪೈಕಿ ಸ್ವೀಡನ್ ಮಾತ್ರ ಮಹಿಳಾ ಪ್ರಧಾನಿಯನ್ನು ಹೊಂದಿರದದೇಶವಾಗಿತ್ತು.


# 26- 11- 2021

## ಕೋವಿಶೀಲ್ಡ್, ಕೋವಾಕ್ಸಿನ್ ವಾಣಿಜ್ಯ ರಫ್ತಿಗೆ ಕೇಂದ್ರ ಅನುಮೋದನೆ



* ಪ್ರಸ್ತುತ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಲಭ್ಯವಿರುವ ಕೋವಿಡ್ 19 ಲಸಿಕೆಗಳ ಪರಿಗಣಿಸಿ ಇದೀಗ ಕೇಂದ್ರ ಸರ್ಕಾರವು ಕೋವಿಶೀಲ್ಡ್ ಹಾಗೂ ಕೋವಾಕ್ಸಿನ್ ಲಸಿಕೆಯನ್ನು ವಾಣಿಜ್ಯ ರಫ್ತು ಮಾಡಲು ಅನುಮೋದನೆಯನ್ನು ನೀಡಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ಈ ಕೋವಿಡ್ 19 ಲಸಿಕೆಗಳನ್ನು ರಫ್ತು ಮಾಡುವದರಿಂದ ದೇಶೀಯ ಲಭ್ಯತೆಗೆ ಯಾವುದೇ ಕೊರತೆಯಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.
* ಇಲ್ಲಿಯವರೆಗೆ ಭಾರತ ಸರ್ಕಾರವು ಸರಿ ಸುಮಾರು 100 ದೇಶಗಳಿಗೆ 65 ಮಿಲಿಯನ್ ಡೋಸ್ ಕೋವಿಡ್ 19 ಲಸಿಕೆಯನ್ನು ರಫ್ತು ಮಾಡಲಾಗಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.
* ಪ್ರಸ್ತುತ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ '22.72 ಕೋಟಿಗೂ ಅಧಿಕ ಬಳಕೆಯಾಗದ ಕೋವಿಡ್ 19 ಲಸಿಕೆ ಡೋಸ್‌ಗಳು ಲಭ್ಯವಿವೆ ಎಂದು ತಿಳಿಸಿದ್ದಾರೆ.
* ಇತ್ತೀಚಿಗಷ್ಟೇ ಕೇಂದ್ರ ಸರ್ಕಾರವು ನೇಪಾಳ, ತಜಕಿಸ್ತಾನ್ ಹಾಗೂ ಮೊಜಾಂಬಿಕ್‌ಗೆ 50 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆಯನ್ನು ರಫ್ತು ಮಾಡಲು ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಪರವಾನಿಗೆಯನ್ನು ನೀಡಿದೆ.

## ಕೋವಿಡ್ 19ಹೊಸತಳಿದಕ್ಷಿಣಆಫ್ರಿಕಾದಲ್ಲಿಪತ್ತೆ



* ಇತ್ತೀಚೆಗಷ್ಟೇ ದಕ್ಷಿಣ ಆಫ್ರಿಕಾದ ಅಧಿಕಾರಿಗಳು (ಕೋವಿಡ್ 19) ಕೊರೊನಾವೈರಸ್'ನ ಹೊಸ ರೂಪಾಂತರ ತಳಿಯನ್ನು ಪತ್ತೆಹಚ್ಚಲಾಗಿದೆ ಎಂದು ಘೋಷಣೆ ಮಾಡಿದ್ದಾರೆ.
* ಪ್ರಸ್ತುತ ದಕ್ಷಿಣ ಆಫ್ರಿಕಾ ಈ ಮಾಹಿತಿಯನ್ನು ತಿಳಿಸಿರುವ ಬೆನ್ನಲ್ಲೇ ದಕ್ಷಿಣ ಆಫ್ರಿಕಾ, ಬೋಟ್ಸ್ವಾನಾ ಹಾಗೂ ಹಾಂಗ್ ಕಾಂಗ್ ಈ 3 ದೇಶಗಳಿಂದ ಬರುವ ಅಥವಾ ಹೋಗುವ ಪ್ರಯಾಣಿಕರನ್ನು ಕಟ್ಟುನಿಟ್ಟಾಗಿ ಪರೀಕ್ಷಿಸಲು ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯಗಳಿಗೆ ನಿರ್ದೇಶನವನ್ನು ನೀಡಿದೆ.
* ಪ್ರಸ್ತುತ ಭಾರತದ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರವು ನೀಡಿರುವ ಮಾಹಿತಿಯ ಪ್ರಕಾರ 'COVID 19 ರೂಪಾಂತರದ ಬಿ.1.1529 ರ ಪ್ರಕರಣಗಳು ಬೋಟ್ಸ್ವಾನಾದಲ್ಲಿ "3 ಪ್ರಕರಣಗಳು" ದಕ್ಷಿಣ ಆಫ್ರಿಕಾ "6 ಪ್ರಕರಣಗಳು" ಹಾಗೂ ಹಾಂಗ್ ಕಾಂಗ್ "1 ಪ್ರಕರಣ" ಬೆಳಕಿಗೆ ಬಂದಿವೆ ಎಂದು ಸರ್ಕಾರಕ್ಕೆ ತಿಳಿಸಿದೆ.
*ಭಾರತದ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರವು ಎಲ್ಲಾ ರಾಜ್ಯಗಳು ಕೋವಿಡ್ ಪಾಸಿಟಿವ್ ಪ್ರಯಾಣಿಕರ ಮಾದರಿಗಳನ್ನು ಭಾರತೀಯ SARS CoV 2 ಜೀನೋಮಿಕ್ಸ್ ಸೀಕ್ವೆನ್ಸಿಂಗ್ ಕನ್ಸೋರ್ಟಿಯಂನ ಗೊತ್ತುಪಡಿಸಿದ ಲ್ಯಾಬ್‌ಗಳಿಗೆ ರವಾನಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.
* ದಕ್ಷಿಣ ಆಫ್ರಿಕಾದ ವಿಜ್ಞಾನಿಗಳು ಈ ಕೋವಿಡ್ 19 ರೂಪಾಂತರವನ್ನು ಚರ್ಚಿಸಲು WHO ಕಾರ್ಯನಿರತ ಗುಂಪಿನ ತುರ್ತು ಸಭೆಯನ್ನು ಕರೆದಿದೆ.

## ಪ್ರವೀಣ್ ಸಿನ್ಹಾ ಅವರು ಇಂಟರ್‌ಪೋಲ್‌ನ ಕಾರ್ಯಕಾರಿ ಸಮಿತಿಯ ಏಷ್ಯಾ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ



* CBI'ನ ವಿಶೇಷ ನಿರ್ದೇಶಕ ಪ್ರವೀಣ್ ಸಿನ್ಹಾ ಅವರು ಇದೀಗ ಇಂಟರ್‌ಪೋಲ್‌ನ ಕಾರ್ಯಕಾರಿ ಸಮಿತಿಯ ಏಷ್ಯಾ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ.
*ಪ್ರಸ್ತುತ ಇಂಟರ್‌ಪೋಲ್‌ನ 89ನೇ ಸಾಮಾನ್ಯ ಸಭೆಯು ಇಸ್ತಾಂಬುಲ್‌ನಲ್ಲಿ ಜರುಗುತ್ತಿದೆ ಅದರಲ್ಲಿನ ಬೇರೆ ಬೇರೆ ಉನ್ನತ ಹುದ್ದೆಗಳಿಗಾಗಿ ಚುನಾವಣೆಯನ್ನು ನಡೆಸಲಾಗಿದೆ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಇಂಟರ್‌ಪೋಲ್‌ನ ಕಾರ್ಯಕಾರಿ ಸಮಿತಿಯ ಏಷ್ಯಾ ಪ್ರತಿನಿಧಿ ಹುದ್ದೆಗೆ ಭಾರತ, ಚೀನಾ, ಸಿಂಗಪುರ, ರಿಪಬ್ಲಿಕ್ ಆಫ್ ಕೊರಿಯಾ ಹಾಗೂ ಜೋರ್ಡಾನ್ ದೇಶಗಳ ನಡುವೆ ಈ ಹುದ್ದೆಗಳಿಗಾಗಿ ಪೈಪೋಟಿ ಜರುಗಿತು.

## ಭಾರತದಲ್ಲಿ ಪುರುಷರಿಗಿಂತ ಮಹಿಳೆಯರ ಜನಸಂಖ್ಯೆಯೇ ಅಧಿಕ



* ಭಾರತ ದೇಶದಲ್ಲಿ ಇದೇ ಮೊದಲ ಬಾರಿಗೆ ಲಿಂಗಾನುಪಾತದಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಅಧಿಕವಾಗಿದೆ ಎಂದು ಸರ್ಕಾರವು ಸಮೀಕ್ಷೆಯ ಅಂಕಿ ಅಂಶಗಳ ಮೂಲಕ ತಿಳಿಸಿದೆ.
* ಪ್ರಸ್ತುತ ಭಾರತವು ವಿಶ್ವದಲ್ಲಿ ಜನಸಂಖ್ಯೆಯಲ್ಲಿ 2ನೇ ಸ್ಥಾನದಲ್ಲಿದೆ, ಆದರೆ ಇದೀಗ ಭಾರತದಲ್ಲಿ ಮಕ್ಕಳ ಜನನ ಪ್ರಮಾಣವು ಇಳಿಕೆಯಾಗಿದೆ ಎಂದು ಸರ್ಕಾರದ ಸಮೀಕ್ಷೆಯ ಪ್ರಕಾರ ತಿಳಿದು ಬಂದಿದೆ.
* ಇತ್ತೀಚಿಗೆ ಕೇಂದ್ರ ಆರೋಗ್ಯ ಸಚಿವಾಲಯ ಎರಡು ವರ್ಷಗಳ ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆಯನ್ನು ಬಹಿರಂಗ ಪಡಿಸಿದೆ ಅದರ ಪ್ರಕಾರ, 1,000 ಪುರುಷರಿಗೆ 1,020 ಮಹಿಳೆಯರು ಭಾರತ ದೇಶದಲ್ಲಿದ್ದಾರೆ ಎಂದು ತಿಳಿದು ಬಂದಿದೆ.
* ಸರ್ಕಾರವು ಈ ಹಿಂದೆ 1876ರಿಂದ ಸಮೀಕ್ಷೆಯನ್ನು ನಡೆಸುತ್ತಿದೆ, ಆದರೆ ಇದೇ ಮೊದಲ ಬಾರಿಗೆ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಅಧಿಕವಾಗಿದೆ ಎಂದು ಸರ್ಕಾರದ ಅಂಕಿ ಅಂಶಗಳ ಮೂಲಕ ತಿಳಿದು ಬಂದಿದೆ.
* ಸದ್ಯ ಭಾರತದಲ್ಲಿ 130 ಕೋಟಿ ಜನಸಂಖ್ಯೆ ಇದೆ, ಆದರೆ ವಿಶ್ವಸಂಸ್ಥೆ ಅಂದಾಜಿನ ಪ್ರಕಾರ ಇದೇ ರೀತಿ ಮುಂದುವರೆದರೆ ಈ ದಶಕದ ಅಂತ್ಯದ ವೇಳೆಗೆ ಭಾರತವು ಜನಸಂಖ್ಯೆಯಲ್ಲಿ ಚೀನಾ ದೇಶವನ್ನು ಮೀರಿಸಲಿದೆ ಎಂದಿದ್ದಾರೆ.

## ಭಾರತೀಯ ನೌಕಾಪಡೆಗೆ INS ವೇಲಾ ಸೇರ್ಪಡೆ



* ಪ್ರಸ್ತುತ ಭಾರತೀಯ ನೌಕಾಪಡೆಗೆ 'ಐಎನ್‌ಎಸ್(INS) ವೇಲಾ' ಎಂಬ ಸಬ್‌ಮರೀನ್ ಸೇರ್ಪಡೆ ಮಾಡಲಾಗಿದೆ, ಸಬ್‌ಮರೀನ್'ಗೆ ಮುಂಬಯಿಯ ನೌಕಾನೆಲೆಯಲ್ಲಿನ ನೌಕಾ ದಳದ ಕಮಾಂಡರ್ ಅಡ್ಮಿರಲ್ ಕರಂಬೀರ್ ಸಿಂಗ್ ಅವರು ಚಾಲನೆಯನ್ನು ನೀಡಿದರು.
* ಪ್ರಸ್ತುತ ಕಲ್ವರಿ ಕ್ಲಾಸ್ ಜಲಾಂತರ್ಗಾಮಿ ಯೋಜನೆ 75ರ ಅಡಿಯಲ್ಲಿ ಭಾರತೀಯ ನೌಕಾಪಡೆ ಸೇರ್ಪಡೆಯಾಗಬೇಕಾಗಿರುವ '6' ಜಲಾಂತರ್ಗಾಮಿ ನೌಕೆಯ ಪೈಕಿ ಈ INS ವೇಲಾ 4ನೇ ಜಲಾಂತರ್ಗಾಮಿ ನೌಕೆ ಯಾಗಿದೆ.
* ಈ ಐಎನ್‌ಎಸ್(INS) ವೇಲಾ ಜಲಾಂತರ್ಗಾಮಿ ನೌಕೆಯನ್ನು ಮುಂಬಯಿಯ ಮ್ಯಾಜಗಾನ್ ಡಾಕ್ ಶಿಪ್‌ಬಿಲ್ಡರ್ ಲಿ. ಸಂಸ್ಥೆಯು ಫ್ರಾನ್ಸ್‌ನ ಎಂ/ಎಸ್ ನಾವಲ್ ಗ್ರೂಪ್ ಸಂಸ್ಥೆಯು ಜಂಟಿಯಾಗಿ ನಿರ್ಮಿಸಿವೆ, ಈ ನೌಕೆಯನ್ನು ನಿರ್ಮಿಸಲು ಸರಿ ಸುಮಾರು 43 ಸಾವಿರ ಕೋಟಿ ರೂ. ವೆಚ್ಚ ತಗುಲಿದೆ ಎಂದು ತಿಳಿಸಿದ್ದಾರೆ.
* ದೇಶೀಯ ತಂತ್ರಜ್ಞಾನದಲ್ಲಿಯೇ ಈ '6' ಸಬ್‌ಮರೀನ್‌ಗಳನ್ನು ನಿರ್ಮಾಣಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.
* ಫ್ರಾನ್ಸ್ ದೇಶದಿಂದ ಈ ನೌಕೆಗಳಷ್ಟೇ ಅಲ್ಲದೇ ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸಲಾಗುತ್ತಿದೆ ಅವುಗಳಲ್ಲಿ ಇನ್ನು '6' ಯುದ್ಧ ವಿಮಾನ ಮುಂಬರುವ ಜನೇವರಿಯಲ್ಲಿ ಹರಿಯಾಣದ ಅಂಬಾಲಕ್ಕೆ ಬಂದು ತಲುಪಲಿವೆ ಎಂದು ತಿಳಿಸಿದ್ದಾರೆ.

## ನೂತನ ಉಪಗ್ರಹ ಶಿಯಾನ್ 11 ಉಡಾವಣೆ ಪ್ರಯೋಗ ಯಶಸ್ವಿಗೊಳಿಸಿದ ಚೀನಾ



* ಪ್ರಸ್ತುತ ಚೀನಾ ದೇಶವು ನೂತನ ಉಪಗ್ರಹ ಶಿಯಾನ್ 11 ಉಡಾವಣೆ ಪ್ರಯೋಗ ಯಶಸ್ವಿಯಾಗಿ ನಡೆಸಿದೆ ಎಂದು ತಿಳಿದು ಬಂದಿದೆ.
* ಚೀನಾ ದೇಶದ ಶಿಜಿಯಾನ್ ಎಂಬ ಉಪಗ್ರಹಗಳ ಮತ್ತೊಂದು ಸರಣಿಯನ್ನು ತಂತ್ರಜ್ಞಾನ ಗುಣಮಟ್ಟ ಪರಿಶೀಲನೆಗಾಗಿ ಬಳಕೆ ಮಾಡಲಾಗುತ್ತಿದೆ, ಇತ್ತೀಚಿಗೆ ಅಕ್ಟೋಬರ್‌ನಲ್ಲಿ ಶಿಜಿಯಾನ್ 21'ನ್ನು ಉಪಗ್ರಹವನ್ನು ಉಡಾವಣೆ ಮಾಡಲಾಗಿದೆ ಎಂದು ತಿಳಿಸಿದೆ.
* ಆದರೆ, ಇದ್ದಕು ಮೊದಲಿನ ಶಿಯಾನ್ ಉಪಗ್ರಹ, ಶಿಯಾನ್ 10, ಯೋಜಿತ ಕಕ್ಷೆಗೆ ಯಶಸ್ವಿಯಾಗಿ ಉಡಾವಣೆಯಾಗಿದೆ ಆದರೆ ಈ ಉಪಗ್ರಹವು ಯಾವುದೇ ನಿಯೋಜಿತ ಕಾರ್ಯವನ್ನು ಮಾಡಿಲ್ಲ ಎಂದು ತಿಳಿಸಿದ್ದಾರೆ.
* ಪ್ರಸ್ತುತ ಶಿಯನ್ 11 ಉಪಗ್ರಹವನ್ನು ಮಂಗೋಲಿಯಾದ ಗೋಬಿ ಮರುಭೂಮಿಯಲ್ಲಿನ ಜಿಯುಕ್ವಾನ್ ಉಪಗ್ರಹ ಉಡಾವಣೆ ಕೇಂದ್ರದಲ್ಲಿ ಕುಯಿಝೌ 1ಎ ಎಂಬ ಉಪಗ್ರಹ ಉಡಾವಣೆ ವಾಹಕದ ಮೂಲಕ ಉಡಾವಣೆ ಮಾಡಲಾಗಿದೆ ಎಂದು ಚೀನಾ ಸುದ್ದಿವಾಹಿನಿ ಗ್ಲೋಬಲ್ ಟೆಲಿವಿಷನ್ ನೆಟ್‌ವರ್ಕ್ ವರದಿ ಮಾಡಿದೆ.
* ಪ್ರಸ್ತುತ ಚೀನಾ ದೇಶವು ಶಿಯಾನ್ 11 ಉಪಗ್ರಹವನ್ನು ಪರೀಕ್ಷೆ ಸಲುವಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದೆ, ಬೇರೆ ಯಾವುದೇ ಮಾಹಿತಿಯನ್ನು ಚೀನಾ ಬಹಿರಂಗಪಡಿಸಿಲ್ಲ.

## ಸರ್ಕಾರಿ ನೌಕರರಿಗೆ 2 ದಿನ ಹೆಚ್ಚುವರಿ ರಜೆ ಘೋಷಣೆ ಮಾಡಿದ ಅಸ್ಸಾಂ ಸರ್ಕಾರ



* ಪ್ರಸ್ತುತ ಅಸ್ಸಾಂ ರಾಜ್ಯ ಸರ್ಕಾರವು ತನ್ನ ರಾಜ್ಯದಲ್ಲಿನ ಸರ್ಕಾರಿ ನೌಕರರಿಗೆ 2 ದಿನ ಹೆಚ್ಚುವರಿ ರಜೆ ಘೋಷಣೆ ಮಾಡಿದೆ, ಪಸ್ತುತ ಸರ್ಕಾರಿ ನೌಕರಯಲ್ಲಿರುವ ದಂಪತಿಗಳು ಅಪ್ಪ, ಅಮ್ಮ,ಅತ್ತೆ ಮಾವ ಇವರಿಂದ ದೂರವಾಗಿ ನೌಕರಿಗಾಗಿ ಬೇರೆ ಬೇರೆ ಕಡೆಗೆ ವಾಸವಾಗಿರುತ್ತಿರುವ ಕಾರಣದಿಂದಾಗಿ, ಅವರಿಗೆ ಕುಟುಂಬದ ಜತೆ ಕಾಲಕಳೆಯಲು ಕಾಲಾವಕಾಶ ಸಿಗುವುದಿಲ್ಲ ಎಂದು ಅಸ್ಸಾಂ ಸರ್ಕಾರ, ತನ್ನ ರಾಜ್ಯದಲ್ಲಿನ ಸರ್ಕಾರಿನೌಕರರಿಗೆ2ದಿನಗಳಕಾಲಹೆಚ್ಚುವರಿರಜೆಯನ್ನುಘೋಷಣೆಮಾಡಿದೆ.
* ಅಸ್ಸಾಂ ಮುಖ್ಯಮಂತ್ರಿ ಹಿಂತ್ ಬಿಸ್ವಾಶರ್ಮ ಅವರ ಸಚಿವ ಸಂಪುಟ ಈ ನಿರ್ಣಯವನ್ನು ಕೈಗೊಂಡಿದೆ, ಸರ್ಕಾರಿ ನೌಕರರು ತಮ್ಮ ವೃದ್ಧ ಪಾಲಕರೊಂದಿಗೆ ಸಮಯ ಕಳೆಯಲು ಪ್ರತಿ ವರ್ಷ ಹೆಚ್ಚುವರಿಯಾಗಿ ವಾರದ ರಜೆ ನೀಡುವುದಾಗಿ ತಿಳಿಸಿದ್ದಾರೆ.
* ಮುಂಬರುವ ಜನೇವರಿ 6 ಮತ್ತು 7ನೇ ದಿನಾಂಕದಂದು ರಜೆಯನ್ನು ನಿಗದಿ ಮಾಡಲಾಗಿದೆ ಎಂದುಅಸ್ಸಾಂಸರ್ಕಾರತಿಳಿಸಿದೆ.

## ಗ್ಲೋಬಲ್ ಕೆಮಿಕಲ್ಸ್ & ಪೆಟ್ರೋಕೆಮಿಕಲ್ಸ್ ತಯಾರಿಕಾ ಹಬ್ ಉದ್ಘಾಟನೆ



* ಪ್ರಸ್ತುತ ಶೃಂಗಸಭೆಯ 2 ನೇ ಆವೃತ್ತಿಯ ಗ್ಲೋಬಲ್ ಕೆಮಿಕಲ್ಸ್ ಮತ್ತು ಪೆಟ್ರೋಕೆಮಿಕಲ್ಸ್ ಮ್ಯಾನುಫ್ಯಾಕ್ಚರಿಂಗ್ ಹಬ್'ನ್ನು ಇದೇ ನವೆಂಬರ್ 25 ರಂದು ಉದ್ಘಾಟಿಸಲಾಗಿದೆ.
* ಸರ್ಕಾರದ ಕಠಿಣ ಪರಿಶ್ರಮವು ಭಾರತವನ್ನು ಜಾಗತಿಕ ರಾಸಾಯನಿಕ ಮತ್ತು ಪೆಟ್ರೋ ರಾಸಾಯನಿಕ ಉತ್ಪಾದನಾ ಕೇಂದ್ರವಾಗಿ ಪರಿವರ್ತಿಸಲು ಸಹಾಯ ಮಾಡುತ್ತದೆ ಎಂದು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರಗಳ ಸಚಿವರು ತಿಳಿಸಿದ್ದಾರೆ.
* ಪ್ರಸ್ತುತ ರಾಸಾಯನಿಕಗಳು ಮತ್ತು ಪೆಟ್ರೋಕೆಮಿಕಲ್ಸ್ ಇಲಾಖೆ ಹಾಗೂ ರಾಸಾಯನಿಕಗಳು ಮತ್ತು ರಸಗೊಬ್ಬರಗಳ ಸಚಿವಾಲಯವು ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಸಹಯೋಗದೊಂದಿಗೆ ಹೈಬ್ರಿಡ್ ರೂಪದಲ್ಲಿ ಗ್ಲೋಬಲ್ ಕೆಮಿಕಲ್ಸ್ ಹಾಗೂ ಪೆಟ್ರೋಕೆಮಿಕಲ್ಸ್ ಮ್ಯಾನುಫ್ಯಾಕ್ಚರಿಂಗ್ (ತಯಾರಿಕ) ಹಬ್ ಶೃಂಗಸಭೆಯನ್ನು ಆಯೋಜಿಸಲಾಗಿದೆ.
* ಭಾರತದ GCPMH 2021' ಶೃಂಗಸಭೆಯು ಭಾರತೀಯ ರಾಸಾಯನಿಕಗಳು ಹಾಗೂ ಪೆಟ್ರೋಕೆಮಿಕಲ್ಸ್ ಕ್ಷೇತ್ರದ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸುತ್ತಿದೆ.
* ಈ ಶೃಂಗಸಭೆಯುಲ್ಲಿ ಪಾಲುದಾರರಾಗಿರುವ ರಾಜ್ಯಗಳು: ಆಂಧ್ರಪ್ರದೇಶ, ಒಡಿಶಾ, ಗುಜರಾತ್, ರಾಜಸ್ಥಾನ ಮತ್ತು ತಮಿಳುನಾಡು ರಾಜ್ಯಗಳು ಪಾಲ್ಗೊಂಡಿದ್ದವು.
* ಮಹಾತ್ಮ ಗಾಂಧಿಯವರ ಸಲಹೆಯ ಮೇರೆಗೆ 1927 ರಲ್ಲಿ ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ & ಇಂಡಸ್ಟ್ರಿ (FICCI)ನ್ನು ಸ್ಥಾಪನೆ ಮಾಡಲಾಗಿದೆ, ಹಾಗೂ ಇದು ನವದೆಹಲಿಯಲ್ಲಿ ತನ್ನ ಪ್ರಧಾನ ಕಛೇರಿಯುನ್ನು ಹೊಂದಿದೆ, ಅಷ್ಟೇ ಅಲ್ಲದೇ ಭಾರತದಲ್ಲಿ 12 ರಾಜ್ಯಮತ್ತು ಪ್ರಪಂಚದಾದ್ಯಂತ8ದೇಶಗಳಲ್ಲಿ ಕಚೇರಿಗಳನ್ನುಸ್ಥಾಪಿಸಿದೆ.

## ಭಾರತ ಮತ್ತು ಯುಕೆ ದೇಶಗಳ ನಡುವೆ ಗ್ರೀನ್ ಎನರ್ಜಿ ಸಹಯೋಗೆದಮಾತುಕತೆ



* ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ ಜಿತೇಂದ್ರ ಸಿಂಗ್ ಅವರು ಯುನೈಟೆಡ್ ಕಿಂಗ್‌ಡಂನ ವಿಜ್ಞಾನ ಸಚಿವ ಜಾರ್ಜ್ ಫ್ರೀಮನ್ ಅವರೊಂದಿಗೆ ಹಸಿರು ಇಂಧನ ಸಹಯೋಗದ ಬಗ್ಗೆ ವರ್ಚುಲ್ ಸಭೆಯ ಮೂಲಕ ಮಾತುಕತೆ ನಡೆಸಿದ್ದಾರೆ.
* ಭಾರತ ಯುಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಹಯೋಗವು ವೇಗವಾಗಿ ಬೆಳೆಯುತ್ತಿರುವ ಹಿನ್ನಲೆಯಿಂದಾಗಿ, ಎರಡೂ ದೇಶಗಳ ಜಂಟಿ ಸಂಶೋಧನಾ ಕಾರ್ಯಕ್ರಮವು ಶೂನ್ಯ ಮೂಲದಿಂದ ಆರಂಭವಾಗಿ ಇದೀಗ 300 400 ಮಿಲಿಯನ್ ಪೌಂಡ್‌ಗಳಿಗೆ ತಲುಪಿದೆ.
* ಇದೀಗ ಭಾರತವು ಕ್ಲೀನ್ ಎನರ್ಜಿ ಮಿಷನ್, ಇಂಡಿಯಾ ಸೋಲಾರ್ ಅಲೈಯನ್ಸ್ ಎಂಬ ವಿವಿಧ ಉಪಕ್ರಮಗಳಿಂದ ಮುಂದೆ ಸಾಗುತ್ತಿದೆ.
* ಸ್ವಚ್ಛ ಮತ್ತು ಹಸಿರು ಶಕ್ತಿಯಲ್ಲಿ ಭಾರತ ಯುಕೆ ರಾಷ್ಟ್ರಗಳ ಸಹಯೋಗ:ಅಂತಿಮ ಬಳಕೆಯ ವಲಯಗಳನ್ನು ವ್ಯಾಪಕವಾಗಿ ವಿದ್ಯುದ್ದೀಕರಿಸುವ ತಂತ್ರಜ್ಞಾನಗಳು, ಕಾರ್ಬನ್ ಕ್ಯಾಪ್ಚರ್, ಬಳಕೆ ಮತ್ತು ಸಂಗ್ರಹಣೆ (CCUS) ಹೈಡ್ರೋಜನ್ ಮತ್ತು ಹೈಡ್ರೋಜನ್ ಸಂಬಂಧಿತ ಇಂಧನಗಳು ಜೈವಿಕಶಕ್ತಿ
* ನ್ಯೂಟನ್ ಭಾಭಾ MoU ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳಂತಹ ಹಲವಾರು ಸಂಶೋಧನಾ ಕ್ಷೇತ್ರಗಳಲ್ಲಿ ಭಾರತ ಮತ್ತು ಯುಕೆ ರಾಷ್ಟ್ರಗಳ ಸಹಕಾರವನ್ನು ಮುಂದಿನ ಹಂತಕ್ಕೆ ತಲುಪಿಸಲು ಸಹಾಯ ಮಾಡುತ್ತಿದೆ ಎಂದು ತಿಳಿಸಿದ್ದಾರೆ.

## "ರಾಷ್ಟ್ರೀಯಹಾಲುದಿನ"ಆಚರಣೆ




* ಪ್ರತಿ ವರ್ಷ ನವೆಂಬರ್. 26 ರಂದು ರಾಷ್ಟ್ರೀಯ ಹಾಲು ದಿನವನ್ನು ಆಚರಿಸಲಾಗುತ್ತದೆ.
* ರಾಷ್ಟ್ರೀಯ ಹಾಲು ದಿನವನ್ನು ಆಚರಣೆ ಮಾಡಲು, ಡೈರಿ ಸೈನ್ಸ್ ಮತ್ತು ಟೆಕ್ನಾಲಜಿ ಕಾಲೇಜು ಹಾಗೂ ಗುರು ಅಂಗದ್ ದೇವ್ ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನಗಳ ವಿಶ್ವವಿದ್ಯಾಲಯ ಇದೇ ನವೆಂಬರ್.25 ಮತ್ತು 26 ರಂದು 'ಹಾಲಿನ ಕಲಬೆರಕೆ ಪರೀಕ್ಷಾ ಶಿಬಿರ'ವನ್ನು ಆಯೋಜಿಸಿವೆ.
* ಈ ರಾಷ್ಟ್ರೀಯ ಹಾಲು ದಿನವನ್ನು ಭಾರತದ ಶ್ವೇತ ಕ್ರಾಂತಿಯ ಪಿತಾಮಹ ಡಾ. ವರ್ಗೀಸ್ ಕುರಿಯನ್ ಅವರನ್ನು ಗೌರವಿಸಲು ಆಚರಣೆ ಮಾಡಲಾಗುತ್ತದೆ.
* ಡಾ. ವರ್ಗೀಸ್ ಕುರಿಯನ್ ಅವರಿಗೆ ಗೌರವ ಸಲ್ಲಿಸಲು2014 ರ ನವೆಂಬರ್ 26 ರಂದು ಭಾರತೀಯ ಡೈರಿ ಅಸೋಸಿಯೇಷನ್ ಹಾಗೂ ಭಾರತದ ಎಲ್ಲಾ ಡೈರಿ ಮೇಜರ್‌ಗಳು 'ರಾಷ್ಟ್ರೀಯ ಹಾಲು ದಿನ'ವನ್ನು ಆಚರಿಸಲು ಆರಂಭಿಸಿವೆ, ಅದೇ ದಿನವೇ ಅಂದರೆ ನವೆಂಬರ್. 26 ಡಾ. ಕುರಿಯನ್ ಅವರ ಜನ್ಮದಿನವಾಗಿದೆ ಈ ಹಿನ್ನಲೆಯಿಂದ ಆಚರಿಸಲಾಗುತ್ತಿದೆ.
* ಡಾ. ಕುರಿಯನ್ ಅವರು 1973 ರಿಂದ 2006 ರ ಮಧ್ಯೆ ಗುಜರಾತ್ ಸಹಕಾರಿ ಹಾಲು ಮಾರಾಟ ಒಕ್ಕೂಟಕ್ಕೆ ಸೇವೆಸಲ್ಲಿಸಿದ್ದಾರೆ.

# 27- 11- 2021

## BMIC ಯೋಜನೆಯಡಿಲ್ಲಿ ಕರ್ನಾಟಕ ರಾಜ್ಯ ಧಾರವಾಡ ಕೈಗಾರಿಕಾಪ್ರದೇಶದಅಭಿವೃದ್ಧಿ



* ಪ್ರಸ್ತುತ ಕೇಂದ್ರ ಸರ್ಕಾರವು ಬೆಂಗಳೂರು ಮುಂಬೈ ಕೈಗಾರಿಕಾ ಕಾರಿಡಾರ್ (BMIC) ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದ ಧಾರವಾಡ ಕೈಗಾರಿಕಾ ಪ್ರದೇಶದ ಅಭಿವೃದ್ಧಿಪಡಿಸಲು ಅನುಮೋದನೆ ನೀಡಿದೆ.
* ಒಟ್ಟಾರೆ '4' ಹಂತಗಳಲ್ಲಿ ಧಾರವಾಡ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು 32 ಯೋಜನೆಗಳನ್ನು ಸಿದ್ಧಪಡಿಸಲಾಗಿದೆ, ಒಟ್ಟು 11 ಕೈಗಾರಿಕಾ ಕಾರಿಡಾರ್‌ಗಳಿಗೆ ಕೇಂದ್ರ ಸರ್ಕಾರವು ಸಮ್ಮತಿಯನ್ನು ನೀಡಿದೆ.
* ಕೇಂದ್ರ ಸರ್ಕಾರದ ಈ ಯೋಜನೆಯು ಸರಿ ಸುಮಾರು 6,000 ಎಕರೆಗೂ ಹೆಚ್ಚು ಭೂ ಪ್ರದೇಶದಲ್ಲಿ ವ್ಯಾಪಿಸಿದೆ, ಪ್ರಸ್ತುತ ಕರ್ನಾಟಕ ರಾಜ್ಯದ 2ನೇ ಅತಿದೊಡ್ಡ ಮಹಾನಗರ ಪಾಲಿಕೆಯಾಗಿರುವ ಹುಬ್ಬಳ್ಳಿ ಧಾರವಾಡ ಅವಳಿ ನಗರಕ್ಕೆ ಈ ಯೋಜನೆಯಿಂದಾಗಿ ಕೈಗಾರಿಕೆಗಳಿಗೆಉತ್ತಮಪ್ರತಿಕ್ರಿಯೇದೊರೆಯಲಿದೆಎಂದುತಿಳಿಸಲಾಗಿದೆ.

## ರಷ್ಯಾ ಅಧ್ಯಕ್ಷ ಪುಟಿನ್ ಇದೇ ಡಿಸೆಂಬರ್. 06 ಕ್ಕೆ ಭಾರತಕ್ಕೆ ಭೇಟಿ ನೀಡಲಿದ್ದಾರೆ



* ಇದೇ ಡಿಸೆಂಬರ್. 06 ಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ, ಅದೇ ಸಂಧರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಜೊತೆಗೆ 21ನೇ

ಆವೃತ್ತಿಯ ರಷ್ಯಾ ಭಾರತ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.
* ಈ ಹಿಂದಿನ ವರ್ಷ ಜರುಗಬೇಕಾಗಿರುವ ಶೃಂಗಸಭೆಯ ಕೋವಿಡ್ 19 ಹಿನ್ನಲೆಯಿಂದಾಗಿ ಮುಂದೂಡಲಾಗಿತ್ತು, ಆ ಶೃಂಗಸಭೆಯಈಬಾರಿಜರುಗಲಿದೆಎಂದಿದ್ದಾರೆ.
* ಅಷ್ಟೇ ಅಲ್ಲದೇ ಇದೇ ಶೃಂಗಸಭೆಯ ಸಂದರ್ಭದಲ್ಲಿ ಎರಡು ದೇಶಗಳು ರಕ್ಷಣಾ ವ್ಯಸ್ಥೆಯ ಕೆಲ ಒಪ್ಪಂದಗಳಿಗೆ ಸಹಿ ಹಾಕಲಿವೆ ಎಂದು ತಿಳಿಸಿದ್ದಾರೆ.
* ಈ ಶೃಂಗಸಭೆಯ ಮುಂಚಿತವಾಗಿ ಮಾಸ್ಕೋದಲ್ಲಿ ಭಾರತದ ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್.ಜೈಶಂಕರ್, ಹಾಗೂ ರಷ್ಯಾ ವಿದೇಶಾಂಗ ಸಚಿವ ಸರ್ಗೆ ಶೋಗೂ, ಜೊತೆಗೆ ವಿದೇಶಾಂಗ ಸಚಿವ ಸರ್ಗೆ ಲಾವ್ರೋವ್ಅವರು2+2ಮಾತುಕತೆನಡೆಸಲಿದ್ದಾರೆ.

## ಉತ್ತರ ಕೊರಿಯಾ ದೇಶದಲ್ಲಿ ಲೆದರ್ ಜ್ಯಾಕೆಟ್ ಬ್ಯಾನ್ ಮಾಡಿದ ಅಧ್ಯಕ್ಷಕಿಮ್‌ಜಾಂಗ್‌ಉನ್



* ಇತ್ತೀಚಿಗೆ ಉತ್ತರ ಕೊರಿಯಾ ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರು ತಮ್ಮ ದೇಶದಲ್ಲಿ ಲೆದರ್ ಜ್ಯಾಕೆಟ್ ಬ್ಯಾನ್ ಮಾಡಿದ್ದಾರೆ, ಅಷ್ಟೇ ಅಲ್ಲದೇ ಆ ದೇಶದ ಜನರು ಕಿಮ್ ಜಾಂಗ್ ಉನ್ ರೀತಿಯಲ್ಲೇ ಹೇರ್ ಸ್ಟೈಲ್ ಮಾಡಿಸಿಕೊಳ್ಳಬೇಕು ಎಂದು ನಿಯಮವನ್ನು ಜಾರಿಗೆ ತಂದಿದ್ದಾರೆ.
* ಇದೀಗ ಉತ್ತರ ಕೊರಿಯಾ ದೇಶದ ಜನರು ಲೆದರ್ ಜಾಕೆಟ್‌ಗಳನ್ನು ಧರಿಸದಂತೆ ದೇಶಾದ್ಯಂತ ಕಠಿಣ ನಿಯಮವನ್ನು ಹೇರಲಾಗಿದೆ, ಹಾಗೂ ಲೆದರ್ ಜಾಕೆಟ್'ನ್ನು ಬ್ಯಾನ್ ಮಾಡಲಾಗಿದೆ.
* ಪ್ರಸ್ತುತ ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರ ಉಡುಗೆಯನ್ನು (ಫ್ಯಾಷನ್) ಯಾರೂ ಅನುಕರಣೆ (ನಕಲು) ಮಾಡಬಾರದು ಎಂದು ಉದ್ದನೆಯ ಚರ್ಮದ ಟ್ರೆಂಚ್ ಕೋಟ್‌ಗಳನ್ನು ದೇಶದಲ್ಲಿ ಯಾರೂ ಮಾರಾಟ ಹಾಗೂ ಧರಿಸುವಂತಿಲ್ಲ ಆದೇಶಿಸಿದ್ದಾರೆ.

## ರಾಜ್ಯವಾರು ಬಡತನ ಪ್ರಮಾಣವನ್ನು ಸೂಚಿಸುವ ಸೂಚ್ಯಂಕ ಬಿಡುಗಡೆಮಾಡಿದನೀತಿಆಯೋಗ

* ಪ್ರಸ್ತುತ ನೀತಿ ಆಯೋಗವು ರಾಜ್ಯವಾರು ಬಡತನ ಪ್ರಮಾಣವನ್ನು ಸೂಚಿಸುವ ಸೂಚ್ಯಂಕವನ್ನು ಬಿಡುಗಡೆ ಮಾಡಿದೆ, ಆ ಸೂಚ್ಯಂಕದಲ್ಲಿ ಕರ್ನಾಟಕ ರಾಜ್ಯವು 19 ನೇ ಸ್ಥಾನವನ್ನು ಪಡೆದುಕೊಂಡಿದೆ.
* ನೀತಿ ಆಯೋಗ ಪ್ರಕಟಿಸಿರುವ ಮಾಹಿತಿಯ ಪ್ರಕಾರ ಬಿಹಾರದಲ್ಲಿ ಅತ್ಯಂತ ಹೆಚ್ಚು ಬಡತನವಿರುವ ರಾಜ್ಯವಾಗಿದೆ, ಹಾಗೂ ಕೇರಳ ರಾಜ್ಯವು ಅತ್ಯಂತ ಕಡಿಮೆ ಬಡತನ ಹೊಂದಿರುವ ರಾಜ್ಯವಾಗಿದೆ ಎಂದು ತಿಳಿಸಿದೆ.
* ನೀತಿ ಆಯೋಗ ಪ್ರಕಟಿಸಿರುವ ಸೂಚ್ಯಂಕದ ಪ್ರಕಾರ ಅತೀ ಹೆಚ್ಚು ಬಡತನ ಹೊಂದಿರುವ ರಾಜ್ಯಗಳು: ಬಿಹಾರ ರಾಜ್ಯದಲ್ಲಿ ಶೇ. 51.91 ರಷ್ಟು ಜನಸಂಖ್ಯೆಯು ಬಡವರಾಗಿದ್ದರೆ, ಜಾರ್ಖಂಡ್ ರಾಜ್ಯದಲ್ಲಿ ಶೇ. 42.16 ರಷ್ಟು ಜನಸಂಖ್ಯೆಯು ಬಡವರಾಗಿದ್ದರೆ, ಉತ್ತರ ಪ್ರದೇಶ ರಾಜ್ಯದಲ್ಲಿ ಶೇ. 37.79 ರಷ್ಟು ಜನಸಂಖ್ಯೆಯು ಬಡವರಾಗಿದ್ದರೆ, ಮಧ್ಯಪ್ರದೇಶ ರಾಜ್ಯದಲ್ಲಿ ಶೇ. 36.65 ರಷ್ಟು ಜನಸಂಖ್ಯೆಯು ಬಡವರಾಗಿದ್ದರೆ, ಮೇಘಾಲಯ ರಾಜ್ಯದಲ್ಲಿ ಶೇ. 32.67 ರಷ್ಟು ಜನಸಂಖ್ಯೆಯು ಬಡವರಾಗಿದ್ದರೆ.
* ನೀತಿ ಆಯೋಗ ಪ್ರಕಟಿಸಿರುವ ಸೂಚ್ಯಂಕದ ಪ್ರಕಾರ ಅತೀ ಕಡಿಮೆ ಬಡತನ ಹೊಂದಿರುವ ರಾಜ್ಯಗಳು: ಕೇರಳ ರಾಜ್ಯವು ಅತ್ಯಂತ ಕಡಿಮೆ ಬಡತನ ಹೊಂದಿರುವ ರಾಜ್ಯವಾಗಿದೆ, ಆ ರಾಜ್ಯದಲ್ಲಿ ಶೇ. 0.71 ರಷ್ಟು ಜನ ಬಡವರಾಗಿದ್ದಾರೆ. ಗೋವಾ ರಾಜ್ಯದಲ್ಲಿ ಶೇ.3.76ರಷ್ಟು ಜನ ಬಡವರಾಗಿದ್ದರೆ, ಈ ರಾಜ್ಯ 2ನೇ ಸ್ಥಾನದಲ್ಲಿದೆ.ಸಿಕ್ಕಿಂ ರಾಜ್ಯದಲ್ಲಿ ಶೇ. 3.82 ರಷ್ಟು ಜನ ಬಡವರಾಗಿದ್ದರೆ. ತಮಿಳುನಾಡು ರಾಜ್ಯದಲ್ಲಿ ಶೇ.4.89 ರಷ್ಟು ಜನ ಬಡವರಾಗಿದ್ದರೆ. ಪಂಜಾಬ್ ರಾಜ್ಯದಲ್ಲಿ ಶೇ. 5.59 ರಷ್ಟು ಜನ ಬಡವರಾಗಿದ್ದರೆ.
* ಅತೀ ಹೆಚ್ಚು ಬಡತನ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳು: ದಾದ್ರಾ ಮತ್ತು ನಗರ ಹವೇಲಿ (ಶೇ. 27.36), ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ (12.58), ದಮನ್‌ಮತ್ತು ದಿಯು (ಶೇ. 6.82) ಮತ್ತು ಚಂಡೀಗಢ (ಶೇ. 5.97) ಅತೀ ಹೆಚ್ಚು ಬಡತನ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳಾಗಿವೆ.
* ಅತೀ ಕಡಿಮೆ ಬಡತನ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳು:ಪುದುಚೇರಿ ತನ್ನ ಜನಸಂಖ್ಯೆಯ ಶೇಕಡಾ 1.72 ರಷ್ಟು, ಲಕ್ಷದ್ವೀಪ ಶೇ. 1.82 ರಷ್ಟು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಶೇ. 4.30 ರಷ್ಟು, ಹಾಗೂ ರಾಜ್ಯಧಾನಿ ದೆಹಲಿಯಲ್ಲಿ ಶೇ. 4.79ರಷ್ಟುಜನಸಂಖ್ಯೆಬಡತನಹೊಂದಿದ್ದಾರೆ.

## ದಕ್ಷಿಣಭಾರತಮತ್ತುಗುಜರಾತ್‌ಸಂಪರ್ಕಿಸುವಹೆದ್ದಾರಿಯೋಜನೆಗೆ ಶಂಕುಸ್ಥಾಪನೆ



* ಪ್ರಸ್ತುತ ಕೇಂದ್ರ ಸರ್ಕಾರವು 40 ಸಾವಿರ ಕೋಟಿ ರೂ. ವೆಚ್ಚದಲ್ಲಿ ಗುಜರಾತ್‌ನ ಸೂರತ್ ಮತ್ತು ದಕ್ಷಿಣ ಭಾರತದೊಂದಿಗೆ ಸಂಪರ್ಕ ಕಲ್ಪಿಸುವ ಹೊಸ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ತಿಳಿಸಿದ್ದಾರೆ.
* ಈ ರಸ್ತೆಯು ಮಹಾರಾಷ್ಟ್ರದ ನಾಶಿಕ್, ಅಹ್ಮದ್ ನಗರ ಹಾಗೂ ಸೋಲಾಪುರ ಜಿಲ್ಲೆ, ಹಾಗೂ ಲಾತೂರ್ ಜಿಲ್ಲೆಯೂ ಸೇರಿದಂತೆ ಮರಾಠವಾಡ ಪ್ರದೇಶದ ಇತರ ಪ್ರದೇಶಗಳಿಗೆ ಸಂಪರ್ಕವನ್ನು ಕಲ್ಪಿಸಲಿದೆ ಎಂದು ತಿಳಿಸಿದ್ದಾರೆ.
* ಸುಮಾರು 1,023 ಕೋಟಿ ರೂ. ವೆಚ್ಚದ 19 ರಸ್ತೆ ನಿರ್ಮಾಣ ಯೋಜನೆಗಳಿಗೆ ಲಾತೂರ್ ನ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಉದ್ಯಾನವನದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಶಂಕುಸ್ಥಾಪನೆ ನೆರವೇರಿಸಿದರು.
* ಈ ರಸ್ತೆಯ ನಿರ್ಮಾಣದಿಂದಾಗಿಅಲ್ಲಿನಸ್ಥಳೀಯರಿಗೆಉದ್ಯೋಗ್ಯಲಭಿಸಲಿದೆಎಂದಿದ್ದಾರೆ.

## ಮಹಾರಾಷ್ಟ್ರ ಸರ್ಕಾರದಿಂದ 2008ರ 26/11 ರ ಮುಂಬೈ ಉಗ್ರರದಾಳಿಯಹುತಾತ್ಮರಿಗೆಗೌರವಸಮರ್ಪಣೆ



* ಈ ಹಿಂದೆ 2008 ರ ನವೆಂಬರ್. 26ರಂದು ಮಹಾರಾಷ್ಟ್ರದ ಮುಂಬೈ ನಗರದ ಮೇಲೆ ಭಯೋತ್ಪಾದಕರು ದಾಳಿಯನ್ನು ನಡೆಸಿದ್ದಾರೆ ಆ ದಾಳಿಯಲ್ಲಿ ಹುತಾತ್ಮರಾದವರಿಗೆ ಅಲ್ಲಿನ ಮಹಾರಾಷ್ಟ್ರ ಸರ್ಕಾರವುಗೌರವ ಸಮರ್ಪಣೆಯನ್ನು ತಿಳಿಸಿದೆ.
* ಈ ಹುತಾತ್ಮರಿಗೆ ಗೌರವ ಸಮರ್ಪಣೆಯಲ್ಲಿ ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಮತ್ತು ಗೃಹ ಸಚಿವ ದಿಲೀಪ್ ವಾಲ್ಸೆ ಪಾಟೀಲ್ ಅವರು ಅಲ್ಲಿನ ಸ್ಮಾರಕಗಳಿಗೆ ಗೌರವ ಸಮರ್ಪಣೆಯನ್ನು ತಿಳಿಸಿದರು.
* ಈ ಹಿಂದೆ 2008 ನವೆಂಬರ್. 26 ರಂದು ಪಾಕಿಸ್ತಾನದಿಂದ 10 ಲಷ್ಕರ್ ಎ ತೊಯ್ಯಾಬ ಭಯೋತ್ಪಾದಕರು ಸಮುದ್ರ ಮಾರ್ಗವಾಗಿ ಮುಂಬೈ ನಗರಕ್ಕೆ ಆಗಮಿಸಿ ಗುಂಡಿನ ದಾಳಿ ನಡೆಸಿದ್ದರು, ಆ ಸಂಧರ್ಭದಲ್ಲಿ ಮುಂಬೈಯ ತಾಜ್ ಹೊಟೇಲ್'ಗೆ ಮುತ್ತಿಗೆ ಹಾಕಿ ಅಲ್ಲಿನ 18 ಭದ್ರತಾ ಸಿಬ್ಬಂದಿ ಹಾಗೂ 166 ಸಾಮಾನ್ಯ ಜನರನ್ನು ಕೊಂದಿದ್ದರು.
* ಆ ಉಗ್ರರ ದಾಳಿಯಲ್ಲಿ ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥ ಹೇಮಂತ್ ಕರ್ಕರೆ, ಭಾರತೀಯ ಸೇನಾ ಮೇಜರ್ ಸಂದೀಪ್ ಉನ್ನಿಕೃಷ್ಣನ್, ಹಾಗೂ ಮುಂಬೈನ ಹೆಚ್ಚುವರಿ ಪೊಲೀಸ್ ಕಮಿಷನರ್ ಅಶೋಕ್ ಕಾಮ್ಟೆ, ಮತ್ತು ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ವಿಜಯ್ ಸಲಸ್ಕರ್, ಇವರ ಜೊತೆಗೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ASI) ತುಕಾರಾಂ ಓಂಬ್ಳೆ ಅವರು ಈ ದಾಳಿಯಲ್ಲಿ ಮೃತಪಟ್ಟಿದ್ದಾರೆ.
* ಭಾರತೀಯ ಎನ್‌ಎಸ್‌ಜಿಯ ಸಿಬ್ಬಂದಿ ಆ ಸಂಧರಭದಲ್ಲಿ '9' ಭಯೋತ್ಪಾದಕರನ್ನು ಕೊಂದಿದ್ದರು, ಹಾಗೂ ಅಜ್ಮಲ್ ಕಸಬ್ ಎಂಬ ಉಗ್ರನನ್ನು ಜೀವಂತವಾಗಿ ಸೆರೆ ಹಿಡಿದಿದ್ದರು, ಈ ಅಜ್ಮಲ್‌ಕಸಬ್‌ಎಂಬಉಗ್ರನಿಗೆ2012ರನವೆಂಬರ್.21ರಂದು ಗಲ್ಲಿಗೇರಿಸಿದ್ದಾರೆ.

## ಅಂತರ್ಜಾತಿ ವಿವಾಹಕ್ಕೆ 5 ಲಕ್ಷ ರೂ. ಪ್ರೋತ್ಸಾಹ ಧನ ನೀಡಲು ನಿರ್ಧರಿಸಿದಅಸ್ಸಾಂಸರ್ಕಾರ



* ಕೇಂದ್ರ ಸರ್ಕಾರವು ಅಂತರ್ಜಾತಿ ವಿವಾಹ(Inter Caste Marriage)ಗಳನ್ನು ಪ್ರೋತ್ಸಾಹಿಸುವಂತೆ, ಹಾಗೂ ಜಾತಿ ತಾರತಮ್ಯವನ್ನು ಕೊನೆ ಮಾಡುವ ನಿಟ್ಟಿನಲ್ಲಿ ಎಲ್ಲಾ ರಾಜ್ಯಗಳಿಗೆ ಸೂಚಿಸಿದೆ.
*ಅಸ್ಸಾಂಸರ್ಕಾರವುಅಂತರ್ಜಾತಿವಿವಾಹಕ್ಕೆಬೆಂಬಲನೀಡಿಸಮಾಜದಲ್ಲಿ ಏಕತೆ ಮೂಡಿಸುವ ನಿಟ್ಟಿನಲ್ಲಿ ಸಾಮಾಜಿಕ ಸಾಮರಸ್ಯ ಪ್ರೋತ್ಸಾಹ ಮತ್ತು ಹಣಕಾಸಿನ ನೆರವು ನೀಡುವುದಾಗಿ ಘೋಷಣೆ ಮಾಡಿದೆ.
* ಇದೀಗ ಅಸ್ಸಾಂ ಸರ್ಕಾರವು ಅಂತರ್ಜಾತಿ ವಿವಾಹ(In Caste Marriage)ಕ್ಕೆ ಸರ್ಕಾರದಿಂದ 5 ಲಕ್ಷರೂ.ಪ್ರೋತ್ಸಾಹಧನಸಿಗಲಿದೆಎಂದುತಿಳಿಸಿದೆ.
*ಪ್ರಸ್ತುತಅಂತರ್ಜಾತಿವಿವಾಹಯೋಜನೆಯಡಿ(InterCasteMarriage Plan) ನೂತನ ದಂಪತಿಗಳಿಗೆ ಯಾವುದೇ ರೀತಿಯ ವ್ಯಾಪಾರ ಅಥವಾ ಉದ್ಯಮ ಆರಂಭಿಸಲು 10 ಸಾವಿರ ರೂ.ದಿಂದ 5 ಲಕ್ಷ ರೂ.ವರೆಗೂ ಸರ್ಕಾರವು ಪ್ರೋತ್ಸಾಹ ಧನ ನೀಡಲಿದೆ ಎಂದುತಿಳಿಸಿದ್ದಾರೆ.
* ಪ್ರಸ್ತುತ ಅಸ್ಸಾಂ ಸರ್ಕಾರದ ಈ ಯೋಜನೆಯ ಲಾಭ ಪಡೆಯಲು ಫಲಾನುಭವಿಯು ಏಪ್ರಿಲ್ 2019 ರಿಂದ ಮಾರ್ಚ್ 2021ರ ನಡುವೆ ಮದುವೆಯಾಗಿರಬೇಕು ಎಂದು ತಿಳಿಸಿದೆ, ಅಷ್ಟೇ ಅಲ್ಲದೇ ಈ ಯೋಜನೆಯ ಲಾಭ ಪಡೆಯಲು ಸಂಗಾತಿಗಳಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಮತ್ತುಇನ್ನೊಬ್ಬರುಸಾಮಾನ್ಯಜಾತಿಗೆಸೇರಿರಬೇಕು ಎಂದುಷರತ್ತುಹಾಕಿದೆ.

## ದೆಹಲಿ ಸರ್ಕಾರವು ಕರ್ತಾರಪುರ ಸಾಹಿಬ್, ವೆಲಂಕಣಿಯನ್ನು ತೀರ್ಥಯಾತ್ರೆಯೋಜನೆಗೆಸೇರಿಸಲುಘೋಷಿಸಿದೆ



* ಪ್ರಸ್ತುತ ದೆಹಲಿ ಸರ್ಕಾರವು 'ಮುಖ್ಯಮಂತ್ರಿ ತೀರ್ಥ ಯಾತ್ರಾ ಯೋಜನೆ' ಎಂಬ ತನ್ನ ತೀರ್ಥಯಾತ್ರೆಗೆ ಪಾಕಿಸ್ತಾನದ ಕರ್ತಾರ್‌ಪುರ ಸಾಹಿಬ್ ಹಾಗೂ ತಮಿಳುನಾಡಿನ ವೇಲಂಕಣಿ ಚರ್ಚ್'ನ್ನು ಸೇರಿಸಲು ಘೋಷಣೆ ಮಾಡಿದೆ.
* ದೆಹಲಿ ಸರ್ಕಾರವು 2021 ರ ಜನವರಿ 5 ರಂದು ನಗರದ ಹಿರಿಯ ನಾಗರಿಕರ ಮೊದಲ ಬ್ಯಾಚ್'ನ್ನು ಕರ್ತಾರ್‌ಪುರ ಸಾಹಿಬ್‌ಗೆ ಉಚಿತ ತೀರ್ಥಯಾತ್ರೆಗೆ ಕಳುಹಿಸಿಕೊಡಲಿದೆ ಎಂದು ತಿಳಿದು ಬಂದಿದೆ.
* ಹಾಗೆಯೇ ಜನೇವರಿ. 7 ರಂದು ನಗರದ ಹಿರಿಯ ನಾಗರಿಕರ ಮೊದಲ ಬ್ಯಾಚ್'ನ್ನು ವೇಲಂಕಣಿ ಚರ್ಚ್‌ಗೆಕಳುಹಿಸಿಕೊಡಲಿದೆ.
* ಇದೀಗ 13 ಯಾತ್ರಾ ಮಾರ್ಗಗಳ ಹೊರತಾಗಿ ಈ ಎರಡು ಹೊಸ ಮಾರ್ಗಗಳನ್ನು ಸೇರಿಸಲು ದೆಹಲಿ ಸರ್ಕಾರ ನಿರ್ಧರಿಸಿದೆ, ಅವುಗಳೇ ದೆಹಲಿ ವೇಲಂಕಣಿ, ಹಾಗೂ ದೆಹಲಿ ಕರ್ತಾರಪುರ ಸಾಹಿಬ್.
* ದೆಹಲಿ ಸರ್ಕಾರವು ಈ ಮುಖ್ಯಮಂತ್ರಿ ತೀರ್ಥ ಯಾತ್ರಾ ಯೋಜನೆಯನ್ನು ಆರಂಭಿಸಿದೆ, ಇದರಡಿಯಲ್ಲಿ ದೆಹಲಿಯ ಹಿರಿಯ ನಾಗರಿಕರಿಗೆ 5 ಧಾರ್ಮಿಕ ಸ್ಥಳಗಳಿಗೆ ಉಚಿತ ಪ್ರಯಾಣದ ಪ್ಯಾಕೇಜ್‌ಗಳನ್ನು ನೀಡಲಿದೆ.
* ಈ ಯೋಜನೆಯ ಪ್ರಯೋಜನವನ್ನು 60 ವರ್ಷಕ್ಕಿಂತ ಮೇಲ್ಪಟ್ಟ ದೆಹಲಿ ನಿವಾಸಿಗಳು ತಮ್ಮ ಸಂಗಾತಿಯ ಜೊತೆಗೆ ಈಉಚಿತ ತೀರ್ಥಯಾತ್ರೆಗೆ ಅರ್ಹರಾಗಿರುತ್ತಾರೆ, ಆದರೆ ಸ್ಥಳೀಯ, ರಾಜ್ಯ ಮತ್ತು ಕೇಂದ್ರ ಸರ್ಕಾರ ಅಥವಾ ಸ್ವಾಯತ್ತ ಸಂಸ್ಥೆಗಳ ನೌಕರರು ಈ ಯೋಜನೆಗೆ ಅರ್ಹರಾಗಿರುವದಿಲ್ಲ.
* ಪ್ರಸ್ತುತ ಈ ಯೋಜನೆ ಆರಂಭವಾದಾಗಿನಿಂದ ಇಲ್ಲಿಯತನಕ 35080 ಫಲಾನುಭವಿಗಳು ಪ್ರಯಾಣ ಬೆಳೆಸಿದ್ದಾರೆ.

## ಇಂಡೋ ಫ್ರಾನ್ಸ್ ಜಂಟಿ ಮಿಲಿಟರಿ ವ್ಯಾಯಾಮ 'ಎಕ್ಸ್ ಶಕ್ತಿ 2021'



* ಪ್ರಸ್ತುತ ಇಂಡೋ ಫ್ರಾನ್ಸ್ ದೇಶಗಳ 'ಎಕ್ಸ್ ಶಕ್ತಿ 2021' ಎಂಬ ದ್ವೈವಾರ್ಷಿಕ ಜಂಟಿ ಮಿಲಿಟರಿ ವ್ಯಾಯಾಮದ 6ನೇ ಆವೃತ್ತಿಯು ಇದೇ ನವೆಂಬರ್. 26 ರಂದು ಫ್ರಾನ್ಸ್‌ನಲ್ಲಿ ಕೊನೆಗೊಂಡಿದೆ.
* ಈ 'ಎಕ್ಸ್ ಶಕ್ತಿ 2021'ಯು 12 ದಿನಗಳ ಜಂಟಿ ಮಿಲಿಟರಿ ತರಬೇತಿಯನ್ನು ಹೊಂದಿತ್ತು, ಈ ವ್ಯಾಯಾಮದಲ್ಲಿ ಉಭಯ ದೇಶಗಳ ತಮ್ಮ ಯುದ್ಧ ಶಕ್ತಿ ಮತ್ತು ಪ್ರಾಬಲ್ಯವನ್ನು ಎತ್ತಿ ತೋರಿಸಿದವು.
* ಎಕ್ಸ್ ಶಕ್ತಿಯು ವ್ಯಾಯಾಮವು ವಿಶ್ವಸಂಸ್ಥೆಯ ಆದೇಶದ ಅಡಿಯಲ್ಲಿ ಅರೆ ನಗರ ಭೂಪ್ರದೇಶದ ಬೆಳಕಿನಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಗಳ ಮೇಲೆ ಕೇಂದ್ರೀಕರಿಸಲಿದೆ, ಹಾಗೂ ಉಭಯ ದೇಶಗಳ ಸೇನೆಗಳ ನಡುವೆ ಮಿಲಿಟರಿ ಸಹಕಾರ ಮತ್ತು ಪರಸ್ಪರ ಕಾರ್ಯಸಾಧ್ಯತೆಯನ್ನು ವೃದಿಸುವ ನಿಟ್ಟಿನಲ್ಲಿ ಇದನ್ನು ದ್ವೈವಾರ್ಷಿಕವಾಗಿ ಆಯೋಜಿಸಲಾಗಿದೆ.
* ಈ ಜಂಟಿ ಮಿಲಿಟರಿ ವ್ಯಾಯಾಮವನ್ನು ಭಾರತ ಮತ್ತು ಫ್ರಾನ್ಸ್‌ನಲ್ಲಿ ಪರ್ಯಾಯವಾಗಿ ನಡೆಸಲು 2011 ರಲ್ಲಿ ಆರಂಭಿಸಲಾಗಿದೆ.
* ಈ ಜಂಟಿ ಮಿಲಿಟರಿ ವ್ಯಾಯಾಮದ 5 ನೇ ಆವೃತ್ತಿಯು 2019 ರಾಜಸ್ಥಾನದಲ್ಲಿ ಜರುಗಿದೆ, ಎರಡು ದೇಶಗಳ ಸೇನೆಗಳು 'ಅರೆ ಮರುಭೂಮಿ ಭೂಪ್ರದೇಶದಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಗಳನ್ನು'ಹಮ್ಮಿಕೊಂಡಿದ್ದವು.
*ಭಾರತಮತ್ತು ಫ್ರಾನ್ಸ್‌ದೇಶಗಳು ಈ ಕೆಳಗಿನ ರಕ್ಷಣಾ ವ್ಯಾಯಾಮಗಳನ್ನು ನಡೆಸುತ್ತವೆ: ವರುಣ, ಇದು ನೌಕಾ ವ್ಯಾಯಾಮ, ಡೆಸರ್ಟ್ ನೈಟ್ 21, ಗರುಡ, ವಾಯು ವ್ಯಾಯಾಮ.

## ಆಯುರ್ವೇದಪರ್ವ್ 2021ಉದ್ಘಾಟನೆ



* ಆಯುರ್ವೇದ ಪರ್ವ್ 2021'ನ್ನು ಆಯುಷ್‌ನ ರಾಜ್ಯ ಸಚಿವ ಮುಂಜ್‌ಪಾರಾ ಮಹೇದ್ರಾಭಾಯಿ ಅವರುನವದೆಹಲಿಯಲ್ಲಿ ಇದರಉದ್ಘಾಟನೆಯನ್ನುನೆರವೇರಿಸಿದರು.
* ಆಯುರ್ವೇದ ಪರ್ವ್ 2021'ವು ಮೂರು ದಿನಗಳ ಕಾರ್ಯಕ್ರಮವಾಗಿದೆ, ಈ ಕಾರ್ಯಕ್ರಮದಲ್ಲಿ ಆಯುರ್ವೇದವನ್ನು ಉತ್ತೇಜಿಸಲಾಗುವುದು ಎಂದು ತಿಳಿಸಿದ್ದಾರೆ, ಹಾಗೂ ಔಷಧೀಯ ಕಂಪನಿಗಳ ಪಾಲ್ಗೊಳ್ಳುವಿಕೆ ಮತ್ತು 40 ಮಳಿಗೆಗಳನ್ನು ಒಳಗೊಂಡ ವಸ್ತುಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.
* ಆಯುರ್ವೇದ ಪರ್ವ್'ವು ಜನಸಾಮಾನ್ಯರಲ್ಲಿ ಆಯುರ್ವೇದದ ಹೆಚ್ಚಿನ ಸ್ವೀಕಾರವನ್ನು ಬಲಪಡಿಸಲು ಹಾಗೂ ಜೀವನಶೈಲಿ ರೋಗಗಳಿಗೆ ಆಯುರ್ವೇದವನ್ನು ಮುಖ್ಯ ಚಿಕಿತ್ಸೆಯಾಗಿ ಬಳಸಲು ಈ ಕಾರ್ಯಕರಮವನ್ನು ನಿಯೋಜಿಸಲಾಗಿದೆ.
* ಆಯುರ್ವೇದ ಇದೊಂದು ಭಾರತೀಯ ಉಪಖಂಡದಲ್ಲಿ ಅದರದೇ ಆದ ಐತಿಹಾಸಿಕ ಬೇರುಗಳನ್ನು ಒಳಗೊಂಡಿರುವ ಪುರಾತನ ಔಷಧ ವ್ಯವಸ್ಥೆಇದಾಗಿದೆ.
* ಪ್ರಸ್ತುತ ಭಾರತ ಹಾಗೂ ನೇಪಾಳ ದೇಶಗಳಲ್ಲಿ ಆಯುರ್ವೇದವನ್ನು ಅತೀ ಹೆಚ್ಚಾಗಿ ಅಭ್ಯಾಸ ಮಾಡಲಾಗುತ್ತದೆ, ಅಷ್ಟೇ ಅಲ್ಲದೇ ಇಲ್ಲಿನ ಜನಸಂಖ್ಯೆಯ 80% ಜನರು ರೋಗಗಳನ್ನು ಗುಣಪಡಿಸಲು ಆಯುರ್ವೇದ ಔಷಧ ವ್ಯವಸ್ಥೆಯನ್ನು ಬಳಸಲಾಗುತ್ತದೆ ಎಂದು ತಿಳಿದು ಬಂದಿದೆ.
* ಭಾರತ ಸರ್ಕಾರವು 2014 ರ ನವೆಂಬರ್. 9 ರಂದು ಆಯುರ್ವೇದದ ಆಯುಷ್ ಸಚಿವಾಲಯವನ್ನು ಸ್ಥಾಪಿಸಿದೆ, ಹಾಗೂ ಇದು ಧನ್ವಂತರಿಯ ಜನ್ಮವನ್ನು ಸೂಚಿಸುವ ಧನ್ತೇರಸ್‌ನಲ್ಲಿ 'ರಾಷ್ಟ್ರೀಯ ಆಯುರ್ವೇದ ದಿನ'ವನ್ನುಆಚರಣೆಮಾಡಲಾಗುತ್ತದೆ.

## 29-11-2021

### ಪೋಕ್ಸೊ ನ್ಯಾಯಾಲಯವು ಒಂದೇ ದಿನದಲ್ಲಿ ವಿಚಾರಣೆ ನಡೆಸಿತೀರ್ಪುಪ್ರಕಟ



* ಇತ್ತೀಚಿಗೆ ಬಿಹಾರ ರಾಜ್ಯದಲ್ಲಿನ 8 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ವ್ಯಕ್ತಿಗೆ ಅಲ್ಲಿನ ಪೋಕ್ಸೊ ನ್ಯಾಯಾಲಯ ತನಿಕೆ ನಡೆಸಿ ಜೀವಾವಧಿ ಶಿಕ್ಷೆಯನ್ನು ನೀಡಿದೆ, ವಿಶೇಷವೆಂದರೇ ಪೋಕ್ಸೊ ನ್ಯಾಯಾಲಯವು ಈ ಪ್ರಕರಣದ ವಿಚಾರಣೆಯನ್ನು ಒಂದೇ ದಿನದಲ್ಲಿ ಮುಕ್ತಾಯಗೊಳಿಸಿ ತೀರ್ಪು ನೀಡಿದೆ.
* ದೇಶದಲ್ಲಿ ಈ ಪ್ರಕರಣಕ್ಕೆ ಅತ್ಯಂತ ವೇಗವಾಗಿ ವಿಚಾರಣೆ ನಡೆಸಿ ತೀರ್ಪು ನೀಡಲಾಗಿದೆ ಎಂದು ತಿಳಿಸಿದ್ದಾರೆ, ಅಷ್ಟೇ ಅಲ್ಲದೇ ಪ್ರಕರಣದ ಅಪರಾಧಿಗೆ 50,000 ರೂ. ದಂಡ ವಿಧಿಸಿದರು, ಹಾಗೂ ಬಾಲಕಿಯ ಪುನರ್ವಸತಿಗಾಗಿ 7 ಲಕ್ಷ ರೂ. ನೀಡಬೇಕು ಎಂದು ಆದೇಶಿಸಿದೆ.
* ಈ ಹಿಂದೆ ಮಧ್ಯಪ್ರದೇಶದ ದತಿಯಾ ಜಿಲ್ಲೆಯಲ್ಲಿನ ಬಾಲಕಿ ಮೇಲೆ ಅತ್ಯಾಚಾರ ನಡೆದಿತ್ತು, ಆ ಸಂಧರ್ಭದಲ್ಲಿ ಅಂದರೆ 2018 ರ ಆಗಸ್ಟ್ ತಿಂಗಳಿನಲ್ಲಿ ದತಿಯಾ ಜಿಲ್ಲಾ ನ್ಯಾಯಾಲಯವು ಈ ಪ್ರಕರಣ ವಿಚಾರಣೆಯನ್ನು ಕೇವಲ 3 ದಿನಗಳಲ್ಲಿ ಪೂರ್ಣಗೊಳಿಸಿ ತೀರ್ಪುನ್ನು ಪ್ರಕಟಿಸಿತ್ತು ಎಂಬ ಮಾಹಿತಿ ಇದೆ.

### ಈಜುಚಾಂಪಿಯನ್‌ಷಿಪ್‌ನಲ್ಲಿಕರ್ನಾಟಕರಾಜ್ಯಕ್ಕೆಅಗ್ರಸ್ಥಾನ



* ಪ್ರಸ್ತುತ ಕರ್ನಾಟಕದ ಪಾರ್ಥ್ ಅವರು ವಾರಣಾಸಿ ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ 4 ಚಿನ್ನದ ಪದಕವನ್ನು ಜಯಿಸಿದ್ದಾರೆ.
* ಈ ವಾರಣಾಸಿ ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನ '3' ದಿನಗಳಲ್ಲಿ ಕರ್ನಾಟಕ ರಾಜ್ಯವು 206 ಪದಕಗಳನ್ನೂ ಜಯಿಸಿ ದಾಖಲೆ ನಿರ್ಮಿಸಿದೆ, ಹಾಗೂ ಅಗ್ರಸ್ಥಾನವನ್ನು ಪಡೆದಿದೆ, ನಂತರದ ಸ್ಥಾನದಲ್ಲಿ ನವದೆಹಲಿ 175 ಪದಕ, ಹಾಗೂ ಮಹಾರಾಷ್ಟ್ರ 92 ಪದಕಗಳನ್ನೂ ಪಡೆದ ರಾಜ್ಯಗಳಾಗಿವೆ.
* ಇತ್ತೀಚಿಗೆ ಸಂತ ಅಲೋಶಿಯಸ್ ಈಜುಕೊಳದಲ್ಲಿ ಜರುಗಿದ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ 50 ಮೀ. ಬ್ಯಾಕ್‌ಸ್ಟ್ರೋಕ್, ಬಟರ್ ಫ್ಲೈ, ಫ್ರೀಸ್ಟೈಲ್, ಮತ್ತು 100 ಮೀ. ಫ್ರೀಸ್ಟೈಲ್ 'ಸಿ' ಗುಂಪು ವಿಭಾಗದಲ್ಲಿಒಟ್ಟು4ಚಿನ್ನದಪದಕಗಳನ್ನೂಜಯಿಸಿದಾಖಲೆನಿರ್ಮಿಸಿದ್ದಾರೆ.

### ವಿಶ್ವ ಪ್ಯಾರಾ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ಸ್ ನಲ್ಲಿ ಪರಮ್‌ಜೀತ್‌ಗೆ ಕಂಚಿನಪದಕ



* ಪ್ರಸ್ತುತ ಭಾರತದ ಪ್ಯಾರಾ ಪವರ್‌ಲಿಫ್ಟರ್ ಪರಮ್‌ಜೀತ್ ಕುಮಾರ್ ಅವರು ಜಾರ್ಜಿಯದ ಟಿಬಿಲಿಸಿಯಲ್ಲಿ ಜರುಗುತ್ತಿರುವ ವಿಶ್ವ ಪ್ಯಾರಾ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ಸ್ 2021 ನಲ್ಲಿ ಕಂಚಿನ ಪದಕವನ್ನು ಜಯಿಸಿದ್ದಾರೆ.
* 49 ಕೆಜಿ ತೂಕದ ವಿಭಾಗದಲ್ಲಿ ಸ್ಪರ್ಧಿಸಿರುವ ಪರಮ್‌ಜೀತ್ ಕುಮಾರ್ ಅವರು 158 ಕೆಜಿ ತೂಕ ಎತ್ತಿ ಸಾಧನೆ ಮಾಡಿದ್ದಾರೆ.
* ಈ ಹಿಂದೆ ಪರಮ್‌ಜೀತ್ ಕುಮಾರ್ ಅವರು 2018 ರ ಅಕ್ಟೋಬರ್ ತಿಂಗಳಿನಲ್ಲಿ ಜಕಾರ್ತದಲ್ಲಿ ಜರುಗಿದ ಏಶ್ಯನ್ ಪ್ಯಾರಾ ಗೇಮ್ಸ್ ನಲಿಯುಕೂಡ ಕಂಚಿನ ಪದಕವನ್ನು ಜಯಿಸಿದ್ದಾರೆ.
* ಈಜಿಪ್ಟ್‌ನ ಉಮರ್ ಶಮಿ ಅವರು 174 ಕೆಜಿ ಭಾರ ಎತ್ತಿ ಮೊದಲ ಸ್ಥಾನ ಅಂದರೆ ಚಿನ್ನದ ಪದಕವನ್ನು ಜಯಿಸಿದ್ದಾರೆ, ಹಾಗೂ ನಂತರದ ಸ್ಥಾನದಲ್ಲಿ ವಿಯೆಟ್ನಾಮ್‌ನ ವಾನ್ ಕಾಂಗ್ ಲೆ ಅವರು ಒಟ್ಟು170ಕೆಜಿಭಾರಎತ್ತಿಬೆಳ್ಳಿಪದಕವನ್ನುಜಯಿಸಿದ್ದಾರೆ.

### ಭಾರತ, ಶ್ರೀಲಂಕಾ, ಮಾಲ್ಡೀವ್ಸ್ ದೇಶಗಳ ಜಂಟಿ ಕಡಲಾಭ್ಯಾಸ ಮುಕ್ತಾಯ



* ಇತ್ತೀಚಿಗೆ ಮಾಲ್ಡೀವ್ಸ್‌ನಲ್ಲಿ ಎರಡು ದಿನಗಳಿಂದ ನಡೆಯುತ್ತಿರುವ ಭಾರತ, ಶ್ರೀಲಂಕಾ ಹಾಗೂ ಮಾಲ್ಡೀವ್ಸ್ ದೇಶಗಳು ಕರಾವಳಿ ರಕ್ಷಣಾ ಪಡೆಗಳ ಕಡಲಾಭ್ಯಾಸದ 15 ನೇ ಆವೃತ್ತಿ ಮುಕ್ತಾಯವಾಗಿದೆ.
* ಈ ಕರಾವಳಿ ರಕ್ಷಣಾ ಪಡೆಗಳ ಕಡಲಾಭ್ಯಾಸವು ಹಿಂದೂ ಮಹಾಸಾಗರದಲ್ಲಿ ರಕ್ಷಣೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಅಭ್ಯಾಸವನ್ನು ನಡೆಸಲಾಗಿದೆ.
* ಭಾರತ, ಶ್ರೀಲಂಕಾ, ಮಾಲ್ಡೀವ್ಸ್ ದೇಶಗಳ ಕಡಲಾಭ್ಯಾಸವು ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ.

### ತಿಮ್ಮಪ್ಪನಜಾಗದಲ್ಲಿಟಿಟಿಡಿಇಂದಥೀಮ್‌ಪಾರ್ಕ್

* ಆಕಾಶ ಗಂಗಾದಲ್ಲಿ ಶ್ರೀ ಹನುಮಂತನ ಜೀವನ ವೃತ್ತಾಂತದ ದೃಶ್ಯ ಶ್ರಾವ್ಯ ಪ್ರದರ್ಶನವನ್ನು (ಎವಿ ಡಿಸ್ ಪ್ಲೇ ) ಮತ್ತು ಥೀಮ್ ಪಾರ್ಕನ್ನು ನಿರ್ಮಿಸಲು ಬಯಸುತ್ತಿದೆ ಟಿಟಿಡಿ (ತಿರುಮಲ ತಿರುಪತಿ ದೇವಸ್ಥಾನಂ).
* ನಿರ್ಮಾಣದ ಕುರಿತು ಸಭೆ ನಡೆಸಿದ ತಿರುಮಲ ತಿರುಪತಿ ದೇವಸ್ಥಾನಂ ದ ಕಾರ್ಯ ನಿರ್ವಾಹಕ ಅಧಿಕಾರಿ (ಇಒ) ಡಾ.ಕೆ. ಎಸ್. ಜವಾಹರ್ ರೆಡ್ಡಿ ಥೀಮ್ ಪಾರ್ಕ ಜೊತೆಗೆ ಆಕಾಶ ಗಂಗಾದ ಎರಡು ಬದಿಯಲ್ಲಿ ಧ್ಯಾನ ಮಂದಿರ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.
* ಆಂಜನೇಯ ಸ್ವಾಮಿಯ ಜೀವನದ ಉಪಖ್ಯಾನಗಳನ್ನು ಮೂಡಿಸುವ ಪ್ರದರ್ಶನ ಕಾರ್ಯವು ಥೀಮ್ ಪಾರ್ಕ್ ನಲ್ಲಿ ಆಗಬೇಕುಎಂಬುದನ್ನುಟಿಟಿಡಿಇಒಅವರುತಿಳಿಸಿದ್ದಾರೆ.

### ರುಪೇ ಕಾರ್ಡ್ ಹೆಚ್ಚಿನ ವಹಿವಾಟಿನಿಂದ ವೀಸಾ, ಮಾಸ್ಟರ್‌ಕಾರ್ಡ್‌ಗಳ ಹಿನ್ನಡೆ



* ರುಪೇ ಕಾರ್ಡ್ ಗಳಿಗೆ ಭಾರತದ ಕೇಂದ್ರ ಸರ್ಕಾರವು ಹೆಚ್ಚಿನ ಆದ್ಯತೆ ನೀಡಿರುವದರಿಂದ ವಿಶ್ವದ ಅತಿದೊಡ್ಡ ಪೇಮೆಂಟ್ ಗೇಟ್ ವೇ ಕಂಪನಿ ವಹಿವಾಟಿಗೆ ಹಿನ್ನಡೆ ಉಂಟಾಗಿದೆ ಎಂದು ಅಮೇರಿಕಾ ಸರ್ಕಾರಕ್ಕೆ ವರದಿಯೊಂದರಲ್ಲಿ ವೀಸಾ ಕಂಪನಿಯು ತಿಳಿಸಿದೆ.
* ಭಾರತದ ಪ್ರಧಾನಿ ಮೋದಿಯವರೇ ಸ್ವತಃ ರುಪೇ ಕಾರ್ಡ್ ಗೆ ಬೆಂಬಲ ನೀಡುತ್ತಿರುವದು ವೀಸಾಗೆ ಭಾರಿ ಹಿನ್ನಡೆಯನ್ನು ಉಂಟು ಮಾಡಿದೆ.
*ಭಾರತದಲ್ಲಿ ಅತ್ಯಧಿಕ ಗ್ರಾಹಕರನ್ನು ಹೊಂದಿರುವ ವೀಸಾದ ಸ್ಥಾನದಲ್ಲಿ ಈಗ ರುಪೇ ಕಾರ್ಡ್ ಹೆಚ್ಚು ಬಳಕೆಯಾಗುತ್ತಿದೆ.
* ಭಾರತದಲ್ಲಿ ಬಹುತೇಕ ಬ್ಯಾಂಕ್ ಗಳು ಗ್ರಾಹಕರಿಗೆ ಈಗ ರುಪೇ ಕಾರ್ಡ್ ಗಳನ್ನೇ ಹಂಚುತ್ತಿವೆ.ಇದರಿಂದ ಜನರಿಗೆ 'ಸ್ವದೇಶಿ' ಕಲ್ಪನೆ ಜನರಲ್ಲಿ ಮೂಡುತ್ತಿದೆ.
* ಭಾರತೀಯ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶೇ. 63 ರಷ್ಟು ಪಾಲನ್ನು ರುಪೇ ಕಾರ್ಡ್ ಹೊಂದಿದೆ.
* 2018 ರಲ್ಲಿ ದೇಶೀಯವಾದ ರುಪೇ ಕಾರ್ಡ್ ಗಳನ್ನೂ ಬಳಕೆ ಮಾಡುವಂತೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬ್ಯಾಂಕ್‌ಗಳಿಗೆಕರೆನೀಡಿದ್ದರು.

## ನ್ಯೂಜಿಲ್ಯಾಂಡ್‌ಸಂಸದೆಯಅಚ್ಚರಿಯಸಾಹಸ!



* ಸ್ವತಃ ಸೈಕಲಿನಲ್ಲಿ ಆಸ್ಪತ್ರೆಗೆ ತೆರಳಿ ನಂತರ ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮ ನೀಡಿದ ನ್ಯೂಜಿಲ್ಯಾಂಡ್ ಸಂಸದೆ ಜೂಲಿ ಅನೀ ಗೆಂಟರ್.
* ತುಂಬು ಗರ್ಭಿಣಿ ಜೂಲಿ ಮನೆಯಲ್ಲಿದ್ದಾಗ ಪ್ರಸವ ವೇದನೆ ಶುರುವಾಗಿತ್ತು. ಮಧ್ಯ ರಾತ್ರಿ ಕಳೆದು ಸುಮಾರು ಎರಡು ಗಂಟೆ ಹೊತ್ತಿಗೆ ಹೆರಿಗೆ ನೋವು ಕಾಣಿಸಿಕೊಂಡಾಗ ಸಂಸದೆ ಜೂಲಿ ಅನೀ ಗೆಂಟರ್ ಸ್ವತಃ ಸೈಕಲಿನಲ್ಲಿ ಒಬ್ಬರೇ ಆಸ್ಪತ್ರೆಗೆ ತೆರಳಿ ಒಂದು ಗಂಟೆಯ ನಂತರ ಮಗುವನ್ನು ಹೆತ್ತರು ಎಂದು ತಮ್ಮ ಫೇಸ್ಬುಕ್ ಪೋಸ್ಟ್ ನಲ್ಲಿ ಹೇಳಿಕೊಂಡಿದ್ದಾರೆ.
* 'ವಾಸ್ತವವಾಗಿ ಹೆರಿಗೆ ನೋವಿನಲ್ಲಿದ್ದ ನನಗೆ ಬೈಕ್ ನಲ್ಲಿ ಹೋಗುವ ಉದ್ದೇಶವಿರಲಿಲ್ಲ.ಆದ್ರೆ ಅಂತಿಮವಾಗಿ ಅದು ನಡೆದೇ ಹೋಯಿತು' ಎಂದು ನ್ಯೂಜಿಲ್ಯಾಂಡ್ ನ ಗ್ರೀನ್ ಪಕ್ಷದ ಸಂಸದೆ ಜೂಲಿಅನೀಗೆಂಟರ್‌ಫೇಸ್ಬುಕ್‌ಪೋಸ್ಟ್‌ನಲ್ಲಿಬರೆದಿದ್ದಾರೆ.

## ಒಡಿಶಾದ ಆಶಾ ಕಾರ್ಯಕರ್ತೆ ಹೆಸರು ಫೋರ್ಬ್ಸ್ ಮಹಿಳಾ ಸಾಧಕಿಯರಪಟ್ಟಿಯಲ್ಲಿ!



* ಒಡಿಶಾದ ಸುಂದರಗಡ ಜಿಲ್ಲೆಯ ಆಶಾ ಕಾರ್ಯಕರ್ತೆ ಮತಿಲ್ಡಾ ಕುಲ್ಲು ಅವರು ಫೋರ್ಬ್ಸ್ ಡಬ್ಲ್ಯೂ ಪವರ್ 2021 ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.
* ನಟಿಯರಾದ ಸಾನ್ಯಾ ಮಲ್ಹೋತ್ರಾ ಮತ್ತು ರಸಿಕಾ ದುಗ್ಗಲ್ ಅವರು ಕೂಡಾ ಫೋರ್ಬ್ಸ್ ಮಹಿಳಾ ಸಾಧಕಿಯರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ,
* ಕೋವಿಡ್ ಯೋಧೆಯಾಗಿರುವ ಮತಿಲ್ಡಾ ಅವರು ಕಳೆದ 15 ವರ್ಷಗಳಿಂದಲೂ ಸುಂದರಗಡ ಜಿಲ್ಲೆಯ ಬಾರಗಾಂವ್ ತಾಲೂಕಿನ ಗರ್ಗದಬಹಾಲ್ ಗ್ರಾಮದಲ್ಲಿ ಆಶಾ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
* ಬೆಳಗ್ಗೆ ಸೂರ್ಯೋದಯದ ಮುಂಚೆ ಅಂದರೆ 5 ಗಂಟೆಗೆ ಏಳುವ ಮತಿಲ್ಡಾ ಅವರು ತಮ್ಮ ಮನೆಗೆಲಸಗಳನ್ನು ಪೂರೈಸಿಕೊಂಡು, ನಾಲ್ವರ ಕುಟುಂಬಕ್ಕೆ ತಿಂಡಿಯನ್ನು ಸಿದ್ಧಗೊಳಿಸಿ, ಜಾನುವಾರಗಳಿಗೆ ಮೇವುಣಿಸಿದ ಬಳಿಕ ತನ್ನ ಸೈಕಲ್ ನಲ್ಲಿ ಊರಿನ ಮನೆ ಮನೆಗೆ ಭೇಟಿಯನ್ನು ಆರಂಭಿಸುತ್ತಾರೆ ಎಂದು ಫೋರ್ಬ್ಸ್ ತನ್ನ ವರದಿಯಲ್ಲಿ ತಿಳಿಸಿದೆ.
* 'ಜನರಿಗಾಗಿ ವಿಶೇಷವಾಗಿ ನಮ್ಮ ಗ್ರಾಮದ ಜನರಿಗಾಗಿ ದುಡಿಯುವದು ನನಗೆ ಹೆಚ್ಚಿನ ಸಂತೋಷವನ್ನು ನೀಡುತ್ತದೆ. ಇಂದು ಫೋರ್ಬ್ಸ್ ನನ್ನನ್ನು ಗುರುತಿಸಿರುವುದು ನನಗೆ ಹೆಮ್ಮೆಯನ್ನು ಉಂಟು ಮಾಡಿದೆ' ಎಂದು ಮತಿಲ್ಡಾಅವರುಹೇಳಿದರು.

## ಮೊದಲ ಪಂದ್ಯದಲ್ಲೇ ಶತಕ, ಅರ್ಧ ಶತಕ ಗಳಿಸಿ ಶ್ರೇಷ್ಠನಾದ 'ಶ್ರೇಯಸ್‌ಅಯ್ಯರ್'



* ಭಾರತ ಕ್ರಿಕೆಟ್ ತಂಡದ ಆಟಗಾರ ಶ್ರೇಯಸ್ ಅಯ್ಯರ್ ಅವರು ತಮ್ಮ ಮೊದಲ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್ ನಲ್ಲಿ ಶತಕ ಮತ್ತು ಎರಡನೇ ಇನ್ನಿಂಗ್ಸ್ ನಲ್ಲಿ ಅರ್ಧ ಶತಕವನ್ನು ಬಾರಿಸಿದ್ದಾರೆ.
* ಈ ಸಾಧನೆ ಮಾಡಿದ ಮೊದಲ ಭಾರತೀಯ ಕ್ರಿಕೆಟ್ ಆಟಗಾರ ಎಂಬ ಕೀರ್ತಿಗೆ ಕ್ರಿಕೆಟ್ ಆಟಗಾರ ಶ್ರೇಯಸ್‌ಅಯ್ಯರ್‌ಅವರುಪಾತ್ರರಾಗಿದ್ದಾರೆ.

# 30- 11- 2021

## ಲಯೊನೆಲ್‌ಮೆಸ್ಸಿಗೆ7ನೇಬಾರಿಗೆಬಾಲನ್‌ಡಿ'ಓರ್‌ಪ್ರಶಸ್ತಿ



* ಪ್ರಸ್ತುತ ಅರ್ಜೆಂಟೀನಾದ ಫುಟ್ಬಾಲ್ ಆಟಗಾರರಾದ ಲಯೊನೆಲ್ ಮೆಸ್ಸಿ ಅವರು 7 ನೇ ಬಾರಿ ಪ್ರತಿಷ್ಠಿತ ಬಾಲನ್ ಡಿ'ಓರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಈ ಬಾಲನ್ ಡಿ'ಓರ್ ಪ್ರಶಸ್ತಿಯನ್ನು ಫ್ರಾನ್ಸ್ ಫುಟ್ಬಾಲ್ ನೀಡುತ್ತದೆ, ಲಯೊನೆಲ್ ಮೆಸ್ಸಿ ಅವರು ಈ ಮೊದಲು 2009, 2010, 2011, 2012, 2015 ಹಾಗೂ 2019 ರಲ್ಲಿ ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.
* ಮೆಸ್ಸಿ ಅವರು ಈ ಹಿಂದಿನ ವರ್ಷ ಜುಲೈ ತಿಂಗಳಲ್ಲಿ ಅರ್ಜೆಂಟೀನಾಗೆ ಪ್ರಥಮ ಬಾರಿಗೆ ಕೋಪಾ ಅಮೇರಿಕ ಟ್ರೋಫಿಯನ್ನು ಗೆದ್ದುಕೊಟ್ಟ ನಂತರ ಈ ಪ್ರಶಸ್ತಿ ಲಭಿಸಿದೆ, ಮೆಸ್ಸಿ ಅವರು ಒಟ್ಟಾರೆ 7 ನೇ ಡಿ'ಓರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.
* ಮಹಿಳಾ ವಿಭಾಗದಲ್ಲಿ ಈ ಬಾಲನ್ ಡಿ'ಓರ್ ಪ್ರಶಸ್ತಿಯನ್ನು ಸ್ಪೈನ್‌ನ ಫುಟ್ಬಾಲ್ ಆಟಗಾರ್ತಿ ಅಲೆಕ್ಸಿಯಾ ಪುಟೆಲ್ಲಾ ಅವರು ಪಡೆದುಕೊಂಡಿದ್ದಾರೆ.
* ಪ್ರಸ್ತುತ ಅಲೆಕ್ಸಿಯಾ ಅವರು ಬಾಲನ್ ಡಿ'ಓರ್ ಪ್ರಶಸ್ತಿ ಪಡೆದ 3 ನೇ ಮಹಿಳೆ ಇವರಾಗಿದ್ದಾರೆ.
* ಪ್ರಸ್ತುತ 2018 ರಿಂದ ಮಹಿಳಾ ವಿಭಾಗಕ್ಕೆ ಬಾಲನ್ ಡಿ'ಓರ್ ಪ್ರಶಸ್ತಿ ನೀಡಲು ಪ್ರಾರಂಭಿಸಲಾಗಿದೆ.

## ಟ್ವಿಟರ್‌ನನೂತನCEOಆಗಿಪರಾಗ್‌ಅಗರ್ವಲ್‌ನೇಮಕ



* ಪ್ರಸ್ತುತ 2015 ರಿಂದ ಟ್ವಿಟರ್ ಸಹ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಜ್ಯಾಕ್ ಡಾರ್ಸೆ ಅವರು ಇದೇ ನವೆಂಬರ್. 29 ರಂದು ತಮ್ಮ CEO ಸ್ಥಾನಕ್ಕೆ ರಾಜಿನಾಮೆಯನ್ನು ನೀಡಿದ್ದಾರೆ.
* ಜ್ಯಾಕ್ ಡಾರ್ಸೆ ಅವರು ಟ್ವಿಟರ್ ಸಂಸ್ಥೆಯ ಜೊತೆಗಿನ ಸರಿ ಸುಮಾರು 16 ವರ್ಷಗಳ ಅವಧಿಯನ್ನು ಕೊನೆಗೊಳಿಸಿದ್ದಾರೆ.
* ಇದೀಗ ಕಂಪನಿಯ ಮಂಡಳಿಯು ಟ್ವಿಟರ್‌ನ ಮುಖ್ಯ ತಂತ್ರಜ್ಞಾನ ಅಧಿಕಾರಿ ಪರಾಗ್ ಅಗರವಾಲ್ ಅವರನ್ನೇ ಟ್ವಿಟರ್ ಸಂಸ್ಥೆಯ ಮುಂದಿನ ಉತ್ತರಾಧಿಕಾರಿಯಾಗಿ ನೇಮಕ ಮಾಡಿದೆ.
* ಪರಾಗ್ ಅಗರವಾಲ್ ಅವರು ಈ ಮೊದಲು ಟ್ವಿಟ್ಟರ್ ಗೆ ಸೇರ್ಪಡೆ ಯಾಗುವ ಮೊದಲು ಅಂದರೆ 2006 ರಿಂದ 2010 ರ ನಡುವೆ, ಇವರು ಮೈಕ್ರೋಸಾಫ್ಟ್ ರಿಸರ್ಚ್, Yahoo! ಸಂಸ್ಥೆಗಳಲ್ಲಿ ಡೇಟಾ ನಿರ್ವಹಣೆ ಸಂಶೋಧನೆಯಲ್ಲಿ ಪಾಲ್ಗೊಂಡಿದ್ದರು.
* ಅಗರವಾಲ್ ಅವರು ಭಾರತದ ಐಐಟಿ ಬಾಂಬೆಯಿಂದ ಬಿ.ಟೆಕ್ ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿಗಳನ್ನು ಪಡೆದಿದ್ದಾರೆ, ಇಲ್ಲಿಯವರೆಗೆ ಇವರು ಟ್ವಿಟ್ಟರ್ ಸಂಸ್ಥೆಯ ಅಭಿವೃದ್ಧಿ ವೇಗವನ್ನು ಹೆಚ್ಚಿಸಲು ಕಂಪನಿಯಾದ್ಯಂತ ಯಂತ್ರ ಕಲಿಕೆಯ ಸ್ಥಿತಿಯನ್ನು ವೃದ್ಧಿಸುವ ಉಪಕ್ರಮಗಳಿಗೆಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು.

## ಕೊರೋನಾ ಲಸಿಕೆ ವಿತರಣೆಯ ಅಭಿಯಾನದಲ್ಲಿ ಕರ್ನಾಟಕ ರಾಜ್ಯಕ್ಕೆ5ನೇಸ್ಥಾನ



* ಪ್ರಸ್ತುತ ದೇಶಾದ್ಯಂತ ಕೋವಿಡ್ 19 ಲಸಿಕೆ ಅಭಿಯಾನ ಜರುಗುತ್ತಿದೆ, ಆದರೆ ಸದ್ಯ ಬಿಜೆಪಿ ಆಡಳಿತವನ್ನು ಹೊಂದಿರುವ ರಾಜ್ಯಗಳಲ್ಲಿ ಈ ಲಸಿಕಾ ಅಭಿಯಾನ ಅತಿ ವೇಗವಾಗಿ ಮುಂದೆ ಸಾಗುತ್ತಿದೆ.

* ಪ್ರಸ್ತುತ ಗೋವಾ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಶೇ.100 ರಷ್ಟು ಅರ್ಹರಿಗೆ ಮೊದಲನೇ ಡೋಸ್ ಲಸಿಕೆ ನೀಡಲಾಗಿದೆ.
* ಪ್ರಸ್ತುತ ಕರ್ನಾಟಕ ರಾಜ್ಯವು ಲಸಿಕೆ ಅಭಿಯಾನದಲ್ಲಿ 5 ನೇ ಸ್ಥಾನವನ್ನು ಪಡೆದುಕೊಂಡಿದೆ, ಸದ್ಯ ಬೇರೆ ಬೇರೆ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಲಸಿಕಾ ಅಭಿಯಾನವು ನಿಧಾನ ಗತಿಯಲ್ಲಿ ಸಾಗುತ್ತಿದೆ ಎಂಬುವದು ಲಸಿಕೆ ಪಡೆದವರ ಮಾಹಿತಿಯಿಂದ ತಿಳಿದಿದೆ.
* ಅತಿ ಹೆಚ್ಚು ಫಸ್ಟ್ ಡೋಸ್ ಲಸಿಕೆ ನೀಡಿದ ರಾಜ್ಯಗಳು: ಗೋವಾ ರಾಜ್ಯವು ಶೇ.100,ಹಿಮಾಚಲ ಪ್ರದೇಶರಾಜ್ಯವುಶೇ.100,
*ಅತಿ ಹೆಚ್ಚು 2 ನೇ ಡೋಸ್ ಲಸಿಕೆ ನೀಡಿದ ರಾಜ್ಯಗಳು: ಹಿಮಾಚಲ ಪ್ರದೇಶ ರಾಜ್ಯವು ಶೇ.91.9,
* ಅತಿ ಕಡಿಮೆ ಮೊದಲನೇ ಡೋಸ್ ನೀಡಿದ ರಾಜ್ಯ: ಜಾರ್ಖಂಡ್ ರಾಜ್ಯವು ಶೇ.66.2 ರಷ್ಟು.
* ಅತಿ ಕಡಿಮೆ 2 ನೇ ಡೋಸ್ ನೀಡಿದ ರಾಜ್ಯ: ಜಾರ್ಖಂಡ್ ರಾಜ್ಯವು ಶೇ.30.8 ರಷ್ಟು.

## ಭಾರತದಿಂದನೇಪಾಳದಲ್ಲಿನಶಾಲಾಕಟ್ಟಡಗಳಿಗೆನೆರವು



* ಪ್ರಸ್ತುತ ನೇಪಾಳದ ದಾರ್ಚುಲಾ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗಿರುವ '2' ಶಾಲೆಗಳನ್ನು ಉದ್ಘಾಟಣೆ ಮಾಡಲಾಗಿದೆ ಎಂದು ಭಾರತದ ರಾಯಭಾರ ಕಚೇರಿಯು ಮಾಹಿತಿ ನೀಡಿದೆ, ಈ ಶಾಲೆಗಳನ್ನು ಭಾರತದ ಹಣಕಾಸಿನ ನೆರವಿನ ಸಹಾಯದಿಂದ ನಿರ್ಮಾಣ ಮಾಡಲಾಗಿದೆ ಎಂದು ತಿಳಿದು ಬಂದಿದೆ.
* ಪ್ರಸ್ತುತನೇಪಾಳದ ಕಳಂಗಾದ ತಿಂಕರ್‌ನಲ್ಲಿ ಮೋತಿ ಮಹಿಳಾ ಸಂಘ ಪ್ರಾಥಮಿಕ ಶಾಲೆಯನ್ನು 1.27 ಕೋಟಿ ರೂ. ವೆಚ್ಚದಲ್ಲಿ, ಹಾಗೂ ಮಹಾಕಾಳಿಯಲ್ಲಿ ಮಲ್ಲಿಕಾರ್ಜುನ ಮಾದರಿ ಪ್ರೌಢ ಶಿಕ್ಷಣ ಶಾಲೆಯನ್ನು 2.3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಭಾರತದ ರಾಯಭಾರ ಕಚೇರಿಯು ಮಾಹಿತಿ ನೀಡಿದೆ.

## ಚೀನಾದ27ಯುದ್ಧವಿಮಾನಗಳುಬಫರ್‌ಝೋನ್‌ಪ್ರವೇಶ



* ಪ್ರಸ್ತುತ ಚೀನಾ ದೇಶವು ತೈವಾನ್ ವಿರುದ್ಧ ತನ್ನ ಬಲಪ್ರದರ್ಶನಕ್ಕೆ ಮತ್ತೊಮ್ಮೆ ಮುಂದಾಗಿದೆ, ಇದೀಗ ಚೀನಾದ 27 ಯುದ್ಧ ವಿಮಾನಗಳು ತೈವಾನ್ ಬಫರ್ ಝೋನ್ ವಾಯುಪ್ರದೇಶಕ್ಕೆ ಬಂದಿವೆ ಎಂದು ತಿಳಿದು ಬಂದಿದೆ.
* ಪ್ರಸ್ತುತ ತೈವಾನ್ ರಕ್ಷಣಾ ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ, ಚೀನಾದ 27 ವಿಮಾನಗಳು ತೈವಾನ್'ನ ಬಫರ್ ವಲಯವನ್ನು ಪ್ರವೇಶಿಸಿವೆ ಎಂದು ತಿಳಿಸಿದೆ, ಇದರ ವಿರುದ್ಧವಾಗಿ ತೈವಾನ್'ನ (ನಮ್ಮ) ಯುದ್ಧ ವಿಮಾನಗಳು ಅವುಗಳಿಗೆ ಎಚ್ಚರಿಕೆಯನ್ನು ನೀಡಿವೆ, ಇದರಿಂದಾಗಿ ಚೀನಾದ ಯುದ್ಧ ವಿಮಾನಗಳು ಪೆಸಿಫಿಕ್ ಸಾಗರದ ಮೂಲಕ ಹಿಂದೆ ಸರಿದಿವೆ ಎಂದು ಅಲ್ಲಿನ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ.
* ಚೀನಾ ಸುಮಾರು 1 ವರ್ಷದಿಂದ ತೈವಾನ್ ಪ್ರದೇಶದ ಮೇಲೆ ತನ್ನ ಪ್ರಾಬಲ್ಯವನ್ನು ಮೆರೆಯಲು ಪ್ರಯತ್ನ ಪಡುತ್ತಿದೆ, ಕಳೆದ 4 ದಿನಗಳಿಂದ 150 ಕ್ಕೂ ಹೆಚ್ಚು ಯುದ್ಧವಿಮಾನಗಳು ತೈವಾನ್‌ಮೇಲೆಹಾರಿವೆಎಂದುಅಧಿಕಾರಿಗಳುತಿಳಿಸಿದ್ದಾರೆ,ಆದರೆತೈವಾನ್‌ತನ್ನಭೂಪ್ರದೇಶದ ಅವಿಭಾಜ್ಯ ಅಂಗವಾಗಿದೆ ಹಾಗೂ ಆ ದೇಶವನ್ನು ಸಂಪೂರ್ಣವಾಗಿ ಚೀನಾ ತನ್ನ ವಶಕ್ಕೆ ಪಡೆಯಲಾಗುತ್ತದೆ ಎಂದುಚೀನಾಹೇಳಿಕೆಯನ್ನುನೀಡುತ್ತಿದೆ.

## ಅತ್ಯಂತ ಸೊಗಸಾದ ರಾಜಕಾರಣಿ (Most Stylish Politicia)ಪ್ರಶಸ್ತಿಪಡೆದAAPಶಾಸಕರಾಘವ್‌ಚಡ್ಡಾ



* ಪ್ರಸ್ತುತ ಇಂಡಿಯಾ ಫ್ಯಾಶನ್ ಪ್ರಶಸ್ತಿಯಲ್ಲಿ ಅತ್ಯಂತ ಸೊಗಸಾದ ರಾಜಕಾರಣಿ (Most Stylish Politician) ಎಂಬ ಪ್ರಶಸ್ತಿಯನ್ನು (AAP) ಆಮ್ ಆದ್ಮಿ ಪಕ್ಷದ ಶಾಸಕ ರಾಘವ್ ಚಡ್ಡಾರವರು ಪದುಕೊಂಡಿದ್ದಾರೆ.
*33 ವರ್ಷ ವರ್ಷದ ರಾಘವ್ ಚಡ್ಡಾ ಅವರು AAP ಯಲ್ಲಿ ಹಲವಾರು ಜವಾಬ್ದಾರಿಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ, ಇದೀಗ ಇವರಿಗೆ ಅತ್ಯಂತ ಸೊಗಸಾದ ರಾಜಕಾರಣಿ (Most Stylish Politician) ಎಂಬ ಪ್ರಶಸ್ತಿಯು ಲಭಿಸಿದೆ, ಈ ಮಾಹಿತಿಯನ್ನು ರಾಘವ್ ಚಡ್ಡಾ ಅವರುನನಗೆಇಂಡಿಯನ್‌ಫ್ಯಾಶನ್‌ಅವಾರ್ಡ್ಸ್2021ರಲ್ಲಿಅತ್ಯಂತಸೊಗಸಾದರಾಜಕಾರಣಿ ಎಂಬ ಪ್ರಶಸ್ತಿ ಲಭಿಸಿದೆ ಎಂದು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬಹಿರಂಗಪಡಿಸಿದ್ದಾರೆ.
* ಪ್ರಸ್ತುತ ರಾಘವ್ ಚಡ್ಡಾ ಅವರು ದೆಹಲಿ ಜಲ ಮಂಡಳಿಯ ಉಪಾಧ್ಯಕ್ಷರು, ಹಾಗೂ ದೆಹಲಿಯ ರಾಜಿಂದರ್ ನಗರದಶಾಸಕರಾಗಿದ್ದಾರೆ.

## ನಾಗಾಲ್ಯಾಂಡ್ ಪೊಲೀಸರಿಂದ ನಾಗರಿಕರಿಗಾಗಿ 'ಕಾಲ್ ಯುವರ್ ಕಾಪ್ ಮೊಬೈಲ್‌ಆಪ್'ಬಿಡುಗಡೆ



* ಪ್ರಸ್ತುತ ನಾಗಾಲ್ಯಾಂಡ್ ಪೊಲೀಸರಿಂದ ಸ್ಥಳೀಯ ನಾಗರಿಕರಿಗಾಗಿ 'ಕಾಲ್ ಯುವರ್ ಕಾಪ್'(Call your Cop mobile App) ಮೊಬೈಲ್ ಅಪ್ಲಿಕೇಶನ್ ಬಿಡುಗಡೆ.
* ನಾಗಾಲ್ಯಾಂಡ್ ನ ಕೊಹಿಮಾದಲ್ಲಿನ ಪೊಲೀಸ್ ಪ್ರಧಾನ ಕಛೇರಿಯಲ್ಲಿ ಈ ಮೊಬೈಲ್ ಅಪ್ಲಿಕೇಶನ್ ನ್ನು ಬಿಡುಗಡೆ ಮಾಡಿದ್ದಾರೆ.
* ಪ್ರಸ್ತುತ ಈ ಅಪ್ಲಿಕೇಶನ್ ಮೂಲಕ ಸಂಕಷ್ಟದಲ್ಲಿರುವವರು ನಾಗರಿಕರಿಗೆ ಪೊಲೀಸರು ಲಭ್ಯವಾಗಲಿದ್ದಾರೆ, ಹಾಗೂ ಅವರೊಡನೆ ಸಂಪರ್ಕ ಹೊಂದಲು ಈ ಅಪ್ಲಿಕೇಶನ್ ಸಹಾಯ ಮಾಡಲಿದೆ, ಅಷ್ಟೇ ಅಲ್ಲದೇ ಈ ಅಪ್ಲಿಕೇಶನ್ ನ್ನು ಎಲ್ಲ ಆಂಡ್ರಾಯ್ಡ್ ಫೋನ್‌ನಲ್ಲಿ ಗೂಗಲ್ ಸ್ಟೋರ್ ನಿಂದ ಡೌನ್‌ಲೋಡ್‌ಮಾಡಿಬಳಸಬಹುದಾಗಿದೆ.

## ಪಿಂಚಣಿದಾರರಿಗೆ'ವಿಶಿಷ್ಟ'ಮುಖಗುರುತಿಸುವತಂತ್ರಜ್ಞಾನಆರಂಭ



* ಪ್ರಸ್ತುತ 'ವಿಶಿಷ್ಟ' ಮುಖ ಗುರುತಿಸುವ ತಂತ್ರಜ್ಞಾನವನ್ನು ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಆರಂಭಿಸಿದ್ದಾರೆ, ಈ ಮುಖ ಗುರುತಿಸುವ ತಂತ್ರಜ್ಞಾನವು ಪಿಂಚಣಿದಾರರಿಗೆ ಜೀವ ಪ್ರಮಾಣಪತ್ರದ ಪುರಾವೆಯಾಗಿ ತನ್ನ ಕಾರ್ಯ ನಿರ್ವಹಿಸಲಿದೆ ಎಂದು ತಿಳಿದು ಬಂದಿದೆ.
* ಈ ತಂತ್ರಜ್ಞಾನದಿಂದಾಗಿ ನಿವೃತ್ತಿ ಹೊಂದಿದ, ಹಾಗೂ ವಯಸ್ಸಾದ ನಾಗರಿಕರಿಗೆ ಜೀವನವನ್ನು ಸುಲಭಗೊಳಿಸಲು ಸಹಾಯ ಮಾಡಲಿದೆ.
* ಪ್ರಸ್ತುತ ಪಿಂಚಣಿದಾರರು ಪಿಂಚಣಿಯನ್ನು ಪಡೆಯಲು ಪ್ರತಿ ವರ್ಷವೂ ತಮ್ಮ ಜೀವನ ಪ್ರಮಾಣಪತ್ರವನ್ನು ನೀಡಬೇಕಾಗುತ್ತದೆ, ಇದೀಗ ಪಿಂಚಣಿಗಳ ಸಚಿವಾಲಯ ಈ ತಂತ್ರಜ್ಞಾನದ ಮೂಲಕ ಸಿಬ್ಬಂದಿಗಳ ಡಿಜಿಟಲ್ ಪ್ರಮಾಣಪತ್ರವನ್ನು ನೀಡುವ ಸೌಲಭ್ಯವನ್ನು ಜಾರಿಗೆ ತಂದಿದೆ.
* ಈ ತಂತ್ರಜ್ಞಾನವನ್ನು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ ಸಹಯೋಗದೊಂದಿಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಅಭಿವೃದ್ಧಿಪಡಿಸಿದೆ.
* ಪ್ರಸ್ತುತ ಡಿಜಿಟಲ್ ಜೀವನ ಪ್ರಮಾಣಪತ್ರಗಳನ್ನು ನೀಡುವ ಉಪಕ್ರಮವನ್ನು ಪಿಂಚಣಿ ಹಾಗೂ ಪಿಂಚಣಿದಾರರ ಕಲ್ಯಾಣ ಇಲಾಖೆಆರಂಭಿಸಿದೆ.
* ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ(UIDAI)ವನ್ನು 2016 ರ ನಿಬಂಧನೆಗಳ ಅಡಿಯಲ್ಲಿ 2016 ರ ಜುಲೈ. 12 ರಂದು ಸ್ಥಾಪನೆ ಮಾಡಲಾಗಿದೆ, ಇದೀಗ ಇದು ಎಲೆಕ್ಟ್ರಾನಿಕ್ಸ್ ಮತ್ತುಮಾಹಿತಿತಂತ್ರಜ್ಞಾನಸಚಿವಾಲಯದಅಡಿಯಲ್ಲಿಕಾರ್ಯನಿರ್ವಹಿಸುತ್ತದೆ.
* ಪ್ರಸ್ತುತ ಭಾರತದ ಎಲ್ಲಾ ನಿವಾಸಿಗಳಿಗೆ ಆಧಾರ್ ಗುರುತಿನ ಸಂಖ್ಯೆಗಳನ್ನು (UID) ನೀಡಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ(UIDAI)ವನ್ನು ರಚಿಸಲಾಗಿದೆ.

## 10,000ವೈಟ್ ಲೇಬಲ್ATMಗಳನ್ನುಸ್ಥಾಪಿಸಿದಇಂಡಿಯಾ1 ಪಾವತಿ(payments)



* ಇದೀಗ ಇಂಡಿಯಾ1 ಪಾವತಿ(payments)ಗಳಿಂದ 10000 ವೈಟ್ ಲೇಬಲ್ ATM ಗಳನ್ನು ನಿಯೋಜಿಸುವ ಮೈಲಿಗಲ್ಲನ್ನು ತಲುಪಿದೆ, ಇದೀಗ ಇದನ್ನು 'ಇಂಡಿಯಾ1 ATMಗಳು' ಎಂದು ಕರೆಯುತ್ತಾರೆ.
* ಪ್ರಸ್ತುತ ಆಸ್ಟ್ರೇಲಿಯಾದ ಬ್ಯಾಂಕ್‌ಟೆಕ್ ಗ್ರೂಪ್ ನಿಂದ India1 ಪಾವತಿಗಳನ್ನು ಪ್ರಚಾರ ಮಾಡಲಾಗಿದೆ, ಹಾಗೂ ಇವುಗಳು IPO ಬೌಂಡ್ ಆಗಿವೆ, ಇದಕ್ಕೂ ಮುಂಚೆ ಇವುಗಳನ್ನು BTI ಪಾವತಿಗಳು ಎಂದು ಕರೆಯುತ್ತಿದ್ದರು.
* ಅರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 2 ನೇ ಅತಿ ದೊಡ್ಡ ಬಿಳಿ ಲೇಬಲ್ ATM ಬ್ರ್ಯಾಂಡ್ ಗಳನ್ನೂ India1 ATM ಹೊಂದಿದೆ, ಅಷ್ಟೇ ಅಲ್ಲದೇ ಇದು ತನ್ನ ಯಂತ್ರಗಳನ್ನು ಅರೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಧಿಕವಾಗಿ ಅಂದರೆ 14 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಿರ್ಮಿಸಿದೆ.
* ಇದೀಗ RBI ನೀಡಿರುವ ಮಾಹಿತಿಯ ಪ್ರಕಾರಭಾರತದಲ್ಲಿ ಸೆಪ್ಟೆಂಬರ್ 2021 ರ ಹೊತ್ತಿಗೆ 2.4 ಲಕ್ಷ ATM ಗಳಿವೆ, ಈ ಎಲ್ಲ ATM ಗಳಲ್ಲಿ ಸರಿ ಸುಮಾರು 2800 ವೈಟ್ ಲೇಬಲ್ ಯಂತ್ರಗಳನ್ನು ಹೊಂದಿದೆಎಂದುತಿಳಿಸಿದೆ.
* ವೈಟ್ ಲೇಬಲ್ ATM ಗಳು: ಇವುಗಳು ಸ್ವಯಂಚಾಲಿತ ಟೆಲ್ಲರ್ ಮೆಷಿನ್‌ಗಳು ಬ್ಯಾಂಕೇತರ ಘಟಕಗಳಿಂದ ಸ್ಥಾಪಿಸಲಾಗಿದೆ, ಇವುಗಳನ್ನು 'ವೈಟ್ ಲೇಬಲ್ ಎಟಿಎಂಗಳು' ಎಂದು ಕರೆಯಲಾಗುತ್ತದೆ.

## ಭಾರತದ ಅರುಣಾಚಲ ಪ್ರದೇಶದಿಂದ ಮೊದಲನೇಯ ಪ್ರಮಾಣೀಕೃತಸಾವಯವಹಣ್ಣುಕಿವಿಬಿಡುಗಡೆ



* ಪ್ರಸ್ತುತ ಭಾರತದ ಏಕೈಕ ಪ್ರಮಾಣೀಕೃತ ಸಾವಯವ ಕಿವಿ ಹಣ್ಣನ್ನು ಅರುಣಾಚಲ ಪ್ರದೇಶದ ಝಿರೋ ವ್ಯಾಲಿ ಫಾರ್ಮ್ಸ್‌ನಿಂದ ಅಲ್ಲಿನ ಆದಿ ಮಹೋತ್ಸವ ಎಂಬ ರಾಷ್ಟ್ರೀಯ ಬುಡಕಟ್ಟು ಉತ್ಸವದಲ್ಲಿ ಬಿಡುಗಡೆ ಮಾಡಲಾಗಿದೆ.
* ಈ ಮಹೋತ್ಸವನ್ನು ದೆಹಲಿಯ INA ನ ದಿಲ್ಲಿ ಹ್ಯಾಟ್‌ನಲ್ಲಿ ನಿಯೋಜಿಸಲಾಗಿತ್ತು.
* ಪ್ರಸ್ತುತ ಈ ಕಿವಿ ಹಣ್ಣನ್ನು ಅರುಣಾಚಲ ಪ್ರದೇಶ ಸರ್ಕಾರ ಹಾಗೂ ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಆಫ್ ಇಂಡಿಯಾ ಲಿಮಿಟೆಡ್ ಜೊತೆಯಾಗಿ ಈ ಮಹೋತ್ಸವ ಸಮಾರಂಭವನ್ನು ನಡೆಸಿಕೊಟ್ಟಿವೆ.
* ಪ್ರಸ್ತುತ ಕೇಂದ್ರ ಸರ್ಕಾರದ ಈಶಾನ್ಯ ರಾಜ್ಯಗಳ ಯೋಜನೆಯಾದ 'ಮಿಷನ್ ಆರ್ಗಾನಿಕ್ ವ್ಯಾಲ್ಯೂ ಚೈನ್ ಡೆವಲಪ್‌ಮೆಂಟ್ ಫಾರ್ ನಾರ್ತ್ ಈಸ್ಟ್ ರೀಜನ್' ಅಡಿಯಲ್ಲಿ ಈ 'ಕಿವಿಹಣ್ಣಿನ ಸಾವಯವಪ್ರಮಾಣೀಕರಣ'ಪಡೆದುಕೊಂಡ ಭಾರತದ1ನೇರಾಜ್ಯಅರುಣಾಚಲಪ್ರದೇಶ.

## ಪ್ರತಿ ದಿನದ ಸ್ಪರ್ಧಾತ್ಮಕ ಮಾಹಿತಿಗಾಗಿ ಕೂಡಲೇ KPSC VAANI APP ಡೌನ್ಲೋಡ್ ಮಾಡಿಕೊಳ್ಳಿ

KPSC Vaani

**ರಿಯಾಯಿತಿ ದರದಲ್ಲಿ ಸ್ಪರ್ಧಾತ್ಮಕ ಪುಸ್ತಕಗಳನ್ನು ಖರೀದಿಸಲು ಖರೀದಿಸಲು ಇಲ್ಲಿ ಕ್ಲಿಕ್ ಮಾಡಿ**

**ಪ್ರತಿದಿನದ ಉದ್ಯೋಗ ಮಾಹಿತಿ, ಪ್ರಚಲಿತ ಘಟನೆಗಳು, ಪ್ರಶ್ನೆ ಪತ್ರಿಕೆಗಳು, ಕಟ್ ಆಫ್ ಅಂಕಗಳು, Daily Quiz ಸೇರಿ ಹತ್ತು ಹಲವು ಸ್ಪರ್ಧಾತ್ಮಕ ಮಾಹಿತಿಗಳು ಒಂದೇ ವೇದಿಕೆಯಲ್ಲಿ ನಿಮಗಾಗಿ**



**ನಮ್ಮ ಗುಂಪುಗಳನ್ನು ಸೇರಿಕೊಳ್ಳಿ**

Click here To Join

To Download Our App

Follow Us on Facebook

Follow Us on Instagram

Scan QR Code To Download KPSC Vaani App